

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 23 ಗುರುವಾರ 2024

ಸಂಪುಟ: 45 | ಸಂಚಿಕೆ: 37 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಮನೆಯಲ್ಲಿ ಮಲಗಿದ್ದಲ್ಲೇ ಒಂದೇ ಕುಟುಂಬದ ನಾಲ್ವರು ಸಾವು

ಅಡುಗೆ ಅನಿಲ ಸೋರಿಕೆಯಿಂದ ದುರಂತ ಶಂಕೆ; ಎಫ್‌ಎಸ್‌ಎಲ್, ಮರಣೋತ್ತರ ವರದಿಯೂ ಸೇರಿದಂತೆ ತನಿಖೆ ನಂತರ ಸಾವಿನ ನಿಖರ ಕಾರಣ ಬಯಲು; ಪೊಲೀಸರು



ಕುಮಾರ್ ಮತ್ತು ಮಂಜುಳಾ ದಂಪತಿ

ಪುತ್ರಿಯರಾದ ಅರ್ಚನಾ ಮತ್ತು ಸ್ವಾತಿ

ಮೈಸೂರು, ಮೇ 22 (ಆರ್‌ಕೆ)– ಒಂದೇ ಕುಟುಂಬದ ನಾಲ್ವರು ಮಲಗಿದ್ದಲ್ಲೇ ದುರಂತ ಸಾವಿಗೀಡಾಗಿದ್ದಾರೆ. ಈ ದಾರುಣ ಘಟನೆ ಮೈಸೂರಿನ ಯರಗನಹಳ್ಳಿಯಲ್ಲಿ ಸಂಭವಿಸಿದೆ. ಅಡುಗೆ ಅನಿಲ ಸೋರಿಕೆಯಿಂದ ಘಟನೆ ನಡೆದಿರುವ ಶಂಕೆ ವ್ಯಕ್ತಪಡಿಸಿರುವ ಪೊಲೀಸರು, ಎಫ್‌ಎಸ್‌ಎಲ್ ವರದಿಯೂ ಸೇರಿದಂತೆ ತನಿಖೆ ನಂತರ ನಿಖರ ಕಾರಣ ತಿಳಿದುಬರಲಿದೆ ಎಂದು ತಿಳಿಸಿದ್ದಾರೆ.

ಮನೆ ಯಜಮಾನ ಕುಮಾರ(45), ಪತ್ನಿ ಮಂಜುಳಾ(39), ಪುತ್ರಿಯರಾದ ಅರ್ಚನಾ ಮತ್ತು ಸ್ವಾತಿ ಸಾವನ್ನಪ್ಪಿದ ದುರ್ದೈವಿಗಳು. ಮೂಲತಃ ಚಿಕ್ಕಮಗಳೂರು ಜಿಲ್ಲೆ, ಕಡೂರು ತಾಲೂಕಿನ ಸಕ್ಕರೆಪಟ್ಟಣದವರಾದ ಕುಮಾರ್ ಕಳೆದ 30ವರ್ಷಗಳಿಂದ ಮೈಸೂರಲ್ಲಿ ವಾಸವಾಗಿದ್ದರು.


ಮಡಿವಾಳ ಶೆಟ್ಟಿ ಸಮುದಾಯದವರು. ಟೆರೆಷಿಯನ್ ಕಾಲೇಜು ಬಳಿ ಬಟ್ಟೆ ಇಸ್ತ್ರಿ ಮಾಡಿಕೊಂಡು ಪತ್ನಿ, ಇಬ್ಬರು ಪುತ್ರಿಯರೊಂದಿಗೆ ಯರಗನ ● 6ನೇ ಪುಟಕ್ಕೆ

ಬಟ್ಟೆ ಇಸ್ತ್ರಿ ಮಾಡಲು ಗ್ಯಾಸ್ ಬಳಸುತ್ತಿದ್ದರು!

ಮೈಸೂರು, ಮೇ 22(ಆರ್‌ಕೆ)–ದುರಂತ ಸಾವಿಗೀಡಾಗಿರುವ ಯರಗನಹಳ್ಳಿ ಕುಮಾರ್ ಮನೆಯಲ್ಲಿ ಬಟ್ಟೆ ಇಸ್ತ್ರಿ ಮಾಡಲು ಸಹ ಅಡುಗೆ ಅನಿಲವನ್ನು ಬಳಸುತ್ತಿದ್ದರು ಎಂಬುದು ಸ್ಥಳ ಮಹಜರು ವೇಳೆ ಕಂಡುಬಂದಿದೆ. ಹೊರಗಡೆ ಟೆರೆಷಿಯನ್ ಕಾಲೇಜು ಬಳಿ ಮರದಡಿ ಇರುವ ಪೆಟ್ಟಿ ಅಂಗಡಿಯಲ್ಲಿ ಬಟ್ಟೆಗಳ ಐರನ್ ಮಾಡುತ್ತಿದ್ದ ಕುಮಾರ್, ಹೆಚ್ಚುವರಿ ಬಟ್ಟೆಗಳನ್ನು ಮನೆಗೆ ತಂದು ರಾತ್ರಿ ವೇಳೆ ಗ್ಯಾಸ್ ಸಂಪರ್ಕ ಪಡೆದು ಇಸ್ತ್ರಿ ಮಾಡುತ್ತಿದ್ದ ಬಗ್ಗೆ ಸ್ಥಳ ಮಹಜರು ವೇಳೆ ಬೆಳಕಿಗೆ ಬಂದಿದೆ. ಸ್ಥಳ ಪರಿಶೀಲಿಸಿದ ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಘಟನೆ ಕುರಿತಂತೆ ಪ್ರತಿಕ್ರಿಯೆ ನೀಡಿದರು. ಮದುವೆಗೆಂದು ಊರಿಗೆ ಹೋಗಿದ್ದ ಈ ಕುಟುಂಬ, ಸೋಮವಾರ ರಾತ್ರಿ ಮನೆಗೆ ಹಿಂದಿರುಗಿದ್ದಾರೆ. ಮಂಗಳವಾರ ಇಡೀ ದಿನ ಬಾಗಿಲು ತೆಗೆದಿಲ್ಲ. ಅವರ ಫೋನ್‌ಗಳು ಸ್ವಿಚ್ ಆಫ್ ● 6ನೇ ಪುಟಕ್ಕೆ



ಆಲನಹಳ್ಳಿ ಠಾಣೆ ಪೊಲೀಸರು ಮಹಜರು ನಡೆಸುತ್ತಿರುವುದು





ಭಕ್ತವತ್ಸಲ, ಕಾಂತರಾಜ್ ವರದಿ ಅನ್ವಯ

ಜಿಪಂ, ತಾಪಂ ಮೀಸಲಾತಿ ನಿಗದಿ

- ಈ ವರದಿ ಕೋರ್ಟ್‌ಗೆ ಸಲ್ಲಿಸಿ ಅನುಮತಿ ಕೋರುವ ನಿರ್ಧಾರ
- ಕೋರ್ಟ್ ಇದಕ್ಕೆ ಅನುಮತಿಸಿದರೆ ಲೋಕಸಭಾ ಚುನಾವಣೆ ಫಲಿತಾಂಶದ ನಂತರ ಜಿಪಂ, ತಾಪಂ ಚುನಾವಣೆಗೆ ರೆಡಿ

ಬೆಂಗಳೂರು, ಮೇ 22 (ಕೆಎಂಶಿ)– ಭಕ್ತವತ್ಸಲ ಹಾಗೂ ಕಾಂತರಾಜ್ ನೇತೃತ್ವದ ಹಿಂದುಳಿದ ವರ್ಗಗಳ ಆಯೋಗ ನೀಡಿರುವ ವರದಿಯ ಆಧಾರದ ಮೇಲೆ ಜಿಲ್ಲಾ ಮತ್ತು ತಾಲೂಕು ಪಂಚಾಯತ್ ಮೀಸಲಾತಿ ನಿಗದಿಪಡಿಸಿ ಚುನಾವಣೆ ನಡೆಸಲು ಸರ್ಕಾರ ಮುಂದಾಗಿದೆ.

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರಕ್ಕೆ ಒಂದು ವರ್ಷ ಪೂರ್ಣಗೊಂಡ ಹಿನ್ನೆಲೆಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಹೋದರ ಹಾಗೂ ಸಂಸದ ಡಿ.ಕೆ.ಸುರೇಶ್ ತಮ್ಮ ಮನೆಯಲ್ಲಿ ಸಚಿವರುಗಳಿಗೆ ಏರ್ಪಡಿಸಿದ್ದ ಔತಣಕೂಟದ ಸಭೆಯಲ್ಲಿ ಈ ತೀರ್ಮಾನಕ್ಕೆ ಬಂದಿದ್ದಾರೆ. ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರುಗಳು ನೀಡಿರುವ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿ ಚುನಾವಣೆಗೆ ಅನುಮತಿ ಕೋರುವ ನಿರ್ಧಾರ ತೆಗೆದುಕೊಂಡಿದ್ದಾರೆ.

ಇದೇ ಸಂದರ್ಭದಲ್ಲಿ ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಸೇರಿದಂತೆ ಉಳಿದ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಿ ಪಕ್ಷವನ್ನು ರಾಜ್ಯದಲ್ಲಿ ಮತ್ತಷ್ಟು ಬಲಿಷ್ಠಗೊಳಿಸಲು ಸಭೆ ತೀರ್ಮಾನಿಸಿದೆ. ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಲೈಂಗಿಕ ದೌರ್ಜನ್ಯ ಆರೋಪ ನಂತರದ ಪೆನ್‌ಡ್ರೈವ್ ಪ್ರಕರಣಕ್ಕೆ ಸಂಬಂಧಿಸಿದಂತೆ ಸಭೆ ಚರ್ಚೆ ಮಾಡಿದೆ. ಪೆನ್‌ಡ್ರೈವ್ ಹಾಗೂ ಪ್ರಜ್ವಲ್ ವಿಷಯದಲ್ಲಿ ಕೇಂದ್ರ, ರಾಜ್ಯವನ್ನು ಇಕ್ಕಟ್ಟಿಗೆ ಸಿಲುಕಿಸಬಹುದು. ಈ ಬಗ್ಗೆ ಎಚ್ಚರದಿಂದ ನಡೆ ಇಡಬೇಕು.

ಪೆನ್‌ಡ್ರೈವ್ ಸರ್ಕಾರಕ್ಕೆ ಇರುಸು–ಮುರುಸು ಉಂಟು ಮಾಡಿದೆ ಎಂಬ ಕೆಲವು ಸಚಿವರ ಹೇಳಿಕೆಯನ್ನು ಸಾರಾಸಗಟಾಗಿ ತಳ್ಳಿಹಾಕಿದ ಉಪಮುಖ್ಯಮಂತ್ರಿ, ಯಾರೋ ಮಾಡಿದ್ದಕ್ಕೂ ನಮಗೂ ಸಂಬಂಧವಿಲ್ಲ. ಮುಳುಗಿ ಹೋಗಿದ್ದ ಜೆಡಿಎಸ್ ಪೆನ್‌ಡ್ರೈವ್ ಮುಂದಿಟ್ಟುಕೊಂಡು ಮತ್ತೆ ತನ್ನ ಸ್ಥಾನ ಉಳಿಸಿಕೊಳ್ಳಲು ಹೊರಟಿದೆ. ಆದರೆ ನಾವು ಪ್ರಜ್ವಲ್ ಪ್ರಕರಣವನ್ನು ಒಂದು ತಾರ್ಕಿಕ ಅಂತ್ಯಕ್ಕೆ ತೆಗೆದುಕೊಂಡು ಹೋಗಲೇಬೇಕು, ಆತನಿಗೆ ಶಿಕ್ಷೆ ಕೊಡಿಸಲೇಬೇಕು. ಎಚ್.ಡಿ.ಕುಮಾರಸ್ವಾಮಿ ಪೆನ್‌ಡ್ರೈವ್ ಮುಂದಿಟ್ಟುಕೊಂಡು ರಾಜಕಾರಣ ಮಾಡುತ್ತಿದ್ದು, ಇದನ್ನು ನಾವು ನಿರ್ಲಕ್ಷ್ಯ ಮಾಡಬಾರದು. ಬಹಳ ಎಚ್ಚರಿಕೆಯಿಂದ ಸರ್ಕಾರ ಕ್ರಮ ● 6ನೇ ಪುಟಕ್ಕೆ


ವಿಧಾನಸಭೆಯಿಂದ ಪರಿಷತ್‌ನ 11 ಸ್ಥಾನಕ್ಕೆ ಜೂ.6ರಂದು ಚುನಾವಣೆ

ಮೂರೂ ಪಕ್ಷದಲ್ಲಿ ತೀವ್ರ ಲಾಬಿ

- ಡಾ.ಯತೀಂದ್ರ, ಸಚಿವ ಬೋಸರಾಜು, ಬಿಜೆಪಿಯಿಂದ ಅಶೋಕ್ ಹಾರ್ನಳ್ಳಿ, ರವಿಕುಮಾರ್ ಆಯ್ಕೆ ಖಚಿತ
- ಡಾ.ಬಿ.ಜೆ.ವಿಜಯಕುಮಾರ್, ಗೋವಿಂದರಾಜ್, ಬಿ.ಎಲ್.ಶಂಕರ್, ನಟರಾಜ್‌ಗೌಡ, ಆರ್.ನರೇಂದ್ರ ಹೆಸರು 'ಕೈ' ಪಾಳೆಯದಲ್ಲಿ ಪ್ರಸ್ತಾಪ
- ಬಿಜೆಪಿಯಲ್ಲೂ ಮಹಿಳಾ ಘಟಕದ ಅಧ್ಯಕ್ಷೆ ಮಂಜುಳಾ, ಸಿ.ಟಿ.ರವಿ; ಜೆಡಿಎಸ್‌ನಲ್ಲಿ ಕುಪೇಂದ್ರ ರೆಡ್ಡಿ, ಬಿ.ಎಂ.ಫಾರೂಕ್, ಜವರಾಯಿಗೌಡ ನಡುವೆ ತೀವ್ರ ಪೈಪೋಟಿ
- ಪಕ್ಷಗಳ ಬಲಾಬಲದ ಆಧಾರದ ಮೇಲೆ ಕಾಂಗ್ರೆಸ್ 7, ಬಿಜೆಪಿ 3, ಜೆಡಿಎಸ್‌ಗೆ 1 ಸ್ಥಾನ ಲಭ್ಯ

ಬೆಂಗಳೂರು, ಮೇ 22(ಕೆಎಂಶಿ)–ರಾಜ್ಯ ವಿಧಾನಸಭೆಯಿಂದ ವಿಧಾನಪರಿಷತ್ತಿನ 11 ಸ್ಥಾನಗಳಿಗೆ ಜೂನ್ 6ರಂದು ನಡೆಯಲಿರುವ ಚುನಾವಣೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪುತ್ರ ಡಾ.ಯತೀಂದ್ರ ಸಿದ್ದರಾಮಯ್ಯ, ಸಚಿವ ಎನ್.ಎಸ್.ಬೋಸರಾಜು, ಬಿಜೆಪಿಯಿಂದ ಅಶೋಕ್ ಹಾರ್ನಳ್ಳಿ, ರವಿಕುಮಾರ್ ಕಣಕ್ಕಿಳಿಯುವುದು ಬಹುತೇಕ ಖಚಿತವಾಗಿದೆ.

ಪರಿಷತ್ತಿನ ಹನ್ನೊಂದು ಸ್ಥಾನಗಳಿಗೆ ನಡೆಯಲಿರುವ ಚುನಾವಣೆಯಲ್ಲಿ ಆಡಳಿತಾರೂಢ ಕಾಂಗ್ರೆಸ್ 7, ಬಿಜೆಪಿಗೆ 3 ಮತ್ತು ಜೆಡಿಎಸ್‌ಗೆ 1 ಸ್ಥಾನ ಸಿಗುವುದು ನಿಶ್ಚಿತವಾಗಿದ್ದು, ಚುನಾವಣೆ ಘೋಷಣೆಯಾಗುತ್ತಿದ್ದಂತೆಯೇ ಟಿಕೆಟ್‌ಗಾಗಿ ಮೂರೂ ಪಕ್ಷಗಳಲ್ಲಿ ಬಿರುಸಿನ ಲಾಬಿ ಆರಂಭವಾಗಿದೆ. ಆಡಳಿತಾರೂಢ ಕಾಂಗ್ರೆಸ್‌ನಲ್ಲಂತೂ ಏಳು ಸ್ಥಾನಗಳಿಗೆ ನೂರಕ್ಕೂ ಹೆಚ್ಚು ಮಂದಿ ಆಕಾಂಕ್ಷಿಗಳಿದ್ದಾರೆ. ಪ್ರತಿಪಕ್ಷ ಬಿಜೆಪಿಗೆ ಮೂರು ಸ್ಥಾನ ದಕ್ಕಲಿದ್ದು, ಇದಕ್ಕಾಗಿ 10 ಮಂದಿ ಪ್ರಬಲ ಪೈಪೋಟಿ ನಡೆಸಿದ್ದಾರೆ. ಇನ್ನು ಜೆಡಿಎಸ್‌ಗೆ ಒಂದು ಸ್ಥಾನ ದೊರೆಯಲಿದ್ದು ಅದಕ್ಕೆ ನಾಲ್ವರು ಭಾರಿ ಪ್ರಬಲರೇ ಪೈಪೋಟಿ ನಡೆಸಿದ್ದು, ಮೂರೂ ಪಕ್ಷಗಳು ಇನ್ನೂ ಅಭ್ಯರ್ಥಿಗಳ ಆಯ್ಕೆ ಅಂತಿಮಗೊಳಿಸಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಅಭ್ಯರ್ಥಿಗಳ ಆಯ್ಕೆ ಹಾಗೂ ● 6ನೇ ಪುಟಕ್ಕೆ



ಪ್ರಜ್ವಲ್ ಪೆನ್‌ಡ್ರೈವ್ ಪ್ರಕರಣ; SIT ತನಿಖೆ ಹಳ್ಳ ಹಿಡಿಯುತ್ತೆ...!

ಇದುವರೆಗೆ ನಡೆದಿರುವ ಯಾವ ತನಿಖೆಯೂ ತಾರ್ಕಿಕ ಅಂತ್ಯ ಕಂಡಿಲ್ಲ: ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಆರೋಪ

- ಅರೆ, ದೇವರಾಜೇಗೌಡ ಹುಚ್ಚನಾದರೆ ಹೇಗೆ ವಿಚಾರಣೆ ಮಾಡುತ್ತಿದ್ದೀರಾ...!?
- ಡಿ.ಕೆ.ಶಿವಕುಮಾರ್ ಸೇರಿ ಮೂಲ ಕಾರಣಕರ್ತರನ್ನು ವಿಚಾರಣೆ ಮಾಡಿ
- ಕಾರ್ತಿಕ್ ಸುರಕ್ಷತೆಗಾಗಿ 8 ಪೊಲೀಸರ ರಕ್ಷಣೆ ಒದಗಿಸಲಾಗಿದೆ



ಮೈಸೂರು, ಮೇ 22(ಬಿಎಲ್‌ಯು)– ಕರ್ನಾಟಕದಲ್ಲಿ ಈ ತನಕ ನಡೆದಿರುವ ಎಲ್ಲಾ ಎಸ್‌ಐಟಿ (ವಿಶೇಷ ತನಿಖಾ ತಂಡ) ತನಿಖೆ ಹಳ್ಳ ಹಿಡಿದಿದ್ದು, ಪ್ರಜ್ವಲ್ ರೇವಣ್ಣ ಪ್ರಕರಣವನ್ನು ಅದು ಹಳ್ಳ ಹಿಡಿಸುತ್ತದೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ.

ಮೈಸೂರಿನ ರ್‍ಯಾಡಿಸನ್ ಬ್ಲ್ಯೂ ಹೋಟೆಲ್‌ನಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಪ್ರಜ್ವಲ್ ರೇವಣ್ಣ ಪ್ರಕರಣದಲ್ಲಿ ಒಂದಿಬ್ಬರನ್ನು ಮಾತ್ರ ಹಿಡಿದು ವಿಚಾರಣೆ ಮಾಡುತ್ತಿದ್ದು, ಎಸ್‌ಐಟಿ ತನಿಖಾ ಹಾದಿಯೇ ಸರಿಇಲ್ಲ. ಕರ್ನಾಟಕದಲ್ಲಿ ಈ ತನಕ ನಡೆದಿರುವ ಎಸ್‌ಐಟಿ ತನಿಖೆಗಳು ತಾರ್ಕಿಕ ಅಂತ್ಯ ಕಂಡಿಲ್ಲ. ಅದರಂತೆ ಪ್ರಜ್ವಲ್ ರೇವಣ್ಣ ಪ್ರಕರಣವನ್ನು ಹಳ್ಳ ಹಿಡಿಸುತ್ತಾರೆ. ಆದರೆ ಯಾವುದೇ ಕಾರಣಕ್ಕೂ ಸರ್ಕಾರ ಈ ವಿಚಾರದಲ್ಲಿ ಗಂಭೀರತೆ ಕಳೆದುಕೊಳ್ಳಬಾರದು. ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸಬೇಕು ಎಂದು ಆಗ್ರಹಿಸಿದರು. ನಾನು ಮುಖ್ಯಮಂತ್ರಿ ಆಗಿದ್ದ ಕಾಲದಲ್ಲಿ ಇಂತಹ ಯಾವುದೇ ಪ್ರಕರಣ ನಡೆದಿರಲಿಲ್ಲ. ಜೊತೆಗೆ ನಾನು ಯಾವುದೇ ಪ್ರಕರಣವನ್ನು ಎಸ್‌ಐಟಿಗೆ ಕೊಟ್ಟಿರಲಿಲ್ಲ ಎಂದು ಇದೇ ವೇಳೆ ಕುಮಾರಸ್ವಾಮಿ ಸ್ಪಷ್ಟಪಡಿಸಿದರು.

● 5ನೇ ಪುಟಕ್ಕೆ

ಡಿಕೆಶಿ ಅಕ್ಕಪಕ್ಕ ಕುಳಿತಿರುವವರೆಲ್ಲ ಟೆರರಿಸ್ಟ್‌ಗಳೇ...!?

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಕ್ಕಪಕ್ಕ ಕುಳಿತಿರುವವರೆಲ್ಲಾ ಟೆರರಿಸ್ಟ್‌ಗಳೇ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ತಿರುಗೇಟು ನೀಡಿದರು. ಕುಮಾರಸ್ವಾಮಿ ಸೇರಿದಂತೆ 45 ಜನರ ಫೋನ್ ಟ್ಯಾಪಿಂಗ್ ಮಾಡಲು ಅವರೇನು ಟೆರರಿಸ್ಟ್‌ಗಳಾ ಎಂಬ ಡಿ.ಕೆ.ಶಿವಕುಮಾರ್ ಹೇಳಿಕೆಗೆ ಕುಮಾರಸ್ವಾಮಿ ಟಾಂಗ್ ನೀಡಿದರು. ನನ್ನ ಫೋನ್ ಸೇರಿದಂತೆ 45 ಜನರ ಫೋನ್ ಟ್ಯಾಪಿಂಗ್ ಮಾಡಿರುವುದರಲ್ಲಿ ಅನುಮಾನವೇ ಇಲ್ಲ. ಡಿ.ಕೆ.ಶಿವಕುಮಾರ್ ಜೊತೆಗಿರುವವರು ನಮಗೂ ಆಪ್ತರಾಗಿರುತ್ತಾರೆ. ಅವರಿಂದಲೂ ನಮಗೆ ಮಾಹಿತಿ ಬರುತ್ತದೆ ಎಂದು ಹೇಳಿದರು. ಡಿ.ಕೆ.ಶಿವಕುಮಾರ್ ಬಗ್ಗೆ ನಾನು ಸುಖಾಸುಮ್ಮನೆ ಆರೋಪ ಮಾಡುತ್ತಿಲ್ಲ. ಕಥೆ ಕಟ್ಟಿ ಹೇಳುತ್ತಿಲ್ಲ. ಅವರ ಜೊತೆಗಿರುವವರ ಮೂಲಕ ಮಾಹಿತಿ ಪಡೆದೆ ವಿವರ ನೀಡುತ್ತಿದ್ದೇನೆ. ಈ ಪ್ರಕರಣದಲ್ಲಿ ದೊಡ್ಡ ಗ್ಯಾಂಗ್ ಇದ್ದು, ಅವರೆಲ್ಲರ ಮುಖವಾಡ ಬಯಲಾಗಬೇಕು ಎಂದು ಒತ್ತಾಯಿಸಿದರು. ಪ್ರಜ್ವಲ್ ಪೆನ್‌ಡ್ರೈವ್ ಪ್ರಕರಣದಿಂದ ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. ಅದಕ್ಕೂ, ಇದಕ್ಕೂ ಯಾವುದೇ ಸಂಬಂಧವಿಲ್ಲ. ಮೈತ್ರಿ ಸಂಬಂಧ ಗಟ್ಟಿಯಾಗಿದೆ ಎಂದು ಕುಮಾರಸ್ವಾಮಿ ಈ ವೇಳೆ ಸ್ಪಷ್ಟಪಡಿಸಿದರು.

ಮೈಸೂರು ಮಿತ್ರ

ಇಂದು ಮೈಸೂರಲ್ಲಿ ಭಗವಾನ್ ಬುದ್ಧರ ಜನ್ಮದಿನ ಆಚರಣೆ

ಮೈಸೂರು, ಮೇ 22(ಜಿಎ)–ಮೈಸೂರಿನ ವಿಶ್ವಮೈತ್ರಿ ಬುದ್ಧ ವಿಹಾರದಲ್ಲಿ ನಾಳೆ (ಮೇ 23) ವೈಶಾಖ ಬುದ್ಧ ಪೂರ್ಣಿಮ ಅಂಗವಾಗಿ ಭಗವಾನ್ ಬುದ್ಧರ 2568ನೇ ಜನ್ಮದಿನವನ್ನು ಆಚರಿಸಲಾಗುತ್ತಿದೆ ಎಂದು ಮಾಜಿ ಮೇಯರ್ ಪುರುಷೋತ್ತಮ್ ತಿಳಿಸಿದರು.




ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಜೆ 5.30ಕ್ಕೆ ವಿಶ್ವಮೈತ್ರಿ ಬುದ್ಧ ವಿಹಾರದಲ್ಲಿ ಭಗವಾನ್ ಬುದ್ಧರ 2568ನೇ ಜನ್ಮ ದಿನಾಚರಣೆಯ ಸಭಾ ಕಾರ್ಯಕ್ರಮ ನಡೆಯಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಧ್ಯಕ್ಷತೆ ವಹಿಸುವರು. ಬೆಂಗಳೂರು ವಿಶ್ವವಿದ್ಯಾನಿಲಯದ ಮನೋವಿಜ್ಞಾನ ವಿಭಾಗದ ಬೌದ್ಧ ಉಪಾಸಕಿ ಡಾ.ಎನ್.ಮೀನಾಕ್ಷಿ ಮುಖ್ಯ ಭಾಷಣ ಮಾಡುವರು. ವಿಶ್ವಮೈತ್ರಿ ಬುದ್ಧ ವಿಹಾರದ ಡಾ.ಕಲ್ಯಾಣ ಸಿರಿ ಭಂತೇಜಿ ಉಪಸ್ಥಿತರಿರುವರು. ಅಮ್ಮರಾಮಚಂದ್ರ, ಮರಿಸ್ವಾಮಿ ತಂಡದವರಿಂದ ಬುದ್ಧ ಗಾಯನ ಪ್ರಸ್ತುತಪಡಿಸಲಿದ್ದಾರೆ ಎಂದರು. ಇದಕ್ಕೂ ಮೊದಲು ಬೆಳಗ್ಗೆ 8.30ಕ್ಕೆ ನಗರದ ಪುರಭವನದಿಂದ ವಿಶ್ವಮೈತ್ರಿ ಬುದ್ಧ ವಿಹಾರದವರೆಗೆ ಮಹಾಬೋಧಿ ಮೈತ್ರಿ ಮಂಡಲದ ಸಂಸ್ಥೆಯ ಸಹಯೋಗದೊಂದಿಗೆ ಬುದ್ಧ ಮೂರ್ತಿ ಮೆರವಣಿಗೆ ನಡೆಸಲಾಗುವುದು. ಈ ಮೆರವಣಿಗೆಗೆ ಎಲ್ಲಾ ಉಪಾಸಕ, ಉಪಾಸಕೀಯರು ಭಾಗವಹಿಸಬೇಕು ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಸಾಹಿತಿ ಚಿಕ್ಕಸ್ವಾಮಿ, ಸೋಮಯ್ಯ ಮಲೆಯೂರು, ಜೆ.ರವಿ, ರಾಮಣ್ಣ ಉಪಸ್ಥಿತರಿದ್ದರು.

ನವಚೇತನ ಬಸವೇಶ್ವರ ಟ್ರಸ್ಟ್‌ಗೆ ಚೆಕ್ ವಿತರಣೆ



ಮೈಸೂರಿನ ನವಚೇತನ ಬಸವೇಶ್ವರ ಟ್ರಸ್ಟ್‌ಗೆ ವಿಕಲಚೇತನರಿಗೆ ಸೌಕರ್ಯ ಕಲ್ಪಿಸಲು ಅನುಕೂಲವಾಗುವಂತೆ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಐವತ್ತು ಸಾವಿರ ರೂ. ಚೆಕ್ ಅನ್ನು ಟ್ರಸ್ಟ್ ಅಧ್ಯಕ್ಷ ಮರೀಗೌಡ ಅವರಿಗೆ ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ಹೊಯ್ಸಳ ಕರ್ನಾಟಕ ಸಂಘದ ನಿರ್ದೇಶಕರಾದ ಎಸ್.ರಂಗನಾಥ, ಸಾಲುಂಡಿ ಚಿಕ್ಕಣ್ಣ, ಸಿದ್ದಣ್ಣ ಉಪಸ್ಥಿತರಿದ್ದರು.

ಮೈಸೂರಲ್ಲಿ ಸೈಲೆಂಟಾಗಿಯೇ ಸುರಿದ ಮಳೆರಾಯ



ಮೈಸೂರು,ಮೇ 22(ಪಿಎಂ)– ಮೈಸೂರಿನಲ್ಲಿ ಬುಧವಾರ ಸಂಜೆಯಿಂದ ರಾತ್ರಿ ಬಹು ಹೊತ್ತಿನವರೆಗೆ ಮಳೆಯಾಗಿದ್ದು, ಸಿಡಿಲು, ಗುಡುಗು ಹಾಗೂ ಗಾಳಿಯ ಆರ್ಭಟ ಇಲ್ಲದೆ ಧಾರಾಕಾರ ಮಳೆ ಸುರಿಯಿತು. ಎಂದಿನಂತೆ ನಗರದ ಹೃದಯ ಭಾಗದ ವೃತ್ತ ಹಾಗೂ ರಸ್ತೆಗಳ ತಗ್ಗು ಸ್ಥಳಗಳಲ್ಲಿ ಹಲವು ಅಡಿಗಳಷ್ಟು ನೀರು ನಿಂತಿತ್ತು. ಬೆಳಗ್ಗೆಯಿಂದಲೂ ಬಹುತೇಕ ಮೋಡಕವಿದ ವಾತಾವರಣ ಇದ್ದರೂ ಮಳೆ ಮಾತ್ರ ಬಂದಿರಲಿಲ್ಲ. ಆದರೆ ಸಂಜೆ ಸುಮಾರು 5.45ರ ವೇಳೆಗೆ ತುಂತುರು ಹನಿಗಳೊಂದಿಗೆ ಆರಂಭಗೊಂಡ ಮಳೆ, ಕೆಲವೇ ಕ್ಷಣಗಳಲ್ಲಿ ಜೋರುಗೊಂಡಿತು.

ಕೆಲ ಹೊತ್ತಿನಲ್ಲೇ ರಸ್ತೆಯ ಹಳ್ಳಕೊಳ್ಳ, ಇಳಿಜಾರು ಹಾಗೂ ತಗ್ಗು ಸ್ಥಳಗಳಲ್ಲಿ ಮಳೆ ನೀರು ಧಾರಾಕಾರವಾಗಿ ಹರಿಯಿತು. ಜಲಾವೃತಗೊಂಡ ರಸ್ತೆ, ಫುಟ್‌ಪಾತ್‌ಗಳಲ್ಲಿ ಸಾರ್ವಜನಿಕರು ಸಂಚರಿಸಲು ಪರದಾಡಬೇಕಾಯಿತು. ಸಂಜೆ ವೇಳೆಗೆ ಮಳೆ ಬಂದ ಹಿನ್ನೆಲೆಯಲ್ಲಿ ಬೆಳಗಿನ ಪಾಳಿಯಲ್ಲಿ ನಾನಾ ಕೆಲಸ ಕಾರ್ಯ ಮುಗಿಸಿ ಮನೆಯತ್ತ ತೆರಳಿದ್ದವರು ನೆನೆಯುವಂತಾಯಿತು. ಕೊಡೆ, ಜರ್ಕಿನ್ ಹೊಂದಿದ್ದವರು ಮಳೆ ನಡುವೆಯೂ ತಮ್ಮ ಕೆಲಸ ಕಾರ್ಯಗಳಲ್ಲಿ ನಿರತರಾದರು. ಆದರೆ ಕೊಡೆ, ಜರ್ಕಿನ್ ಇಲ್ಲದವರ ಪೈಕಿ ಕೆಲವರು ಆಟೋರಿಕ್ಷಾ ಮೊರೆ ಹೋದರೆ, ಹಲವರು ಅಂಗಡಿ–ಮುಂಗಟ್ಟುಗಳ ಎದುರು ಆಶ್ರಯಪಡೆದು ಮಳೆ ಕಡಿಮೆಯಾಗುವರೆಗೂ ಕಾಯಬೇಕಾಯಿತು.

ಮೈಸೂರಿನ ಹೃದಯಭಾಗವಾದ ಕೆಆರ್ ವೃತ್ತ, ಆಯುರ್ವೇದ ಕಾಲೇಜು ವೃತ್ತ, ಸಬ್‌ಅರ್ಬನ್ ಬಸ್ ನಿಲ್ದಾಣ, ನಗರ ಬಸ್ ನಿಲ್ದಾಣ ಸೇರಿದಂತೆ ಮೊದಲಾದೆಡೆ ತಗ್ಗು ಜಾಗಗಳು ಜಲಾವೃತಗೊಂಡವು. ಗಾಳಿ ಇಲ್ಲದ ಹಿನ್ನೆಲೆಯಲ್ಲಿ ಎಲ್ಲಿಯೂ ಮರ ಅಥವಾ ಮರದ ರೆಂಬೆ–ಕೊಂಬೆಗಳು ಬಿದ್ದ ವರದಿಯಾಗಿಲ್ಲ. ಅಂತೆಯೇ ಬೇರೆ ಇನ್ನಾವುದೇ ರೀತಿಯ ಅನಾಹುತ ಆದಂತೆಯೂ ಇಲ್ಲ. ಈ ಸಂಬಂಧ ಮೈಸೂರು ಮಹಾನಗರ ಪಾಲಿಕೆ ಕಂಟ್ರೋಲ್ ರೂಮ್ ದೂರವಾಣಿ ಸಂಪರ್ಕಿಸಿದಾಗ, ಅವರೆಗೆ ಯಾವುದೇ ಅನಾಹುತದ ಬಗ್ಗೆ ದೂರು ಬಂದಿಲ್ಲ ಎಂಬ ಮಾಹಿತಿ ಲಭ್ಯವಾಯಿತು.

ಮೇ 26ರವರೆಗೆ ಹಳೇ ಮೈಸೂರು ವ್ಯಾಪ್ತಿಯಲ್ಲಿ ಸಾಧಾರಣ ಮಳೆ ಸಾಧ್ಯತೆ

ಮೈಸೂರು,ಮೇ 22(ಪಿಎಂ)– ಮೈಸೂರು, ಮಂಡ್ಯ, ಕೊಡಗು, ಚಾಮರಾಜನಗರ ಜಿಲ್ಲೆಗಳಲ್ಲಿ ಮೇ 22ರಿಂದ ಮೇ 26ರವರೆಗೆ ಮೋಡಕವಿದ ವಾತಾವರಣ ಇರಲಿದ್ದು, ಸಾಧಾರಣ ಮಳೆ ಬರುವ ಸಂಭವವಿದೆ. ಭಾರತೀಯ ಹವಾಮಾನ ಇಲಾಖೆಯ ವರದಿಯಂತೆ ನಾಗನಹಳ್ಳಿ ಕೃಷಿ ಹವಾಮಾನ ಕ್ಷೇತ್ರ ವಿಭಾಗವು ಈ ಮಾಹಿತಿ ನೀಡಿದೆ. ಅಂತೆಯೇ ಮೈಸೂರು ಜಿಲ್ಲೆಯಲ್ಲಿ ಗರಿಷ್ಠ ಉಷ್ಣಾಂಶವು 29.1ರಿಂದ 29.6 ಡಿಗ್ರಿ ಸೆಲ್ಸಿಯಸ್ ಮತ್ತು ಕನಿಷ್ಠ ಉಷ್ಣಾಂಶವು 20.6ರಿಂದ 21.2 ಡಿಗ್ರಿ ಸೆಲ್ಸಿಯಸ್‌ವರೆಗೆ ದಾಖಲಾಗುವ ಸಾಧ್ಯತೆ ಇದೆ. ಅದೇ ರೀತಿ ಮಂಡ್ಯ ಜಿಲ್ಲೆಯಲ್ಲಿ ಗರಿಷ್ಠ ಉಷ್ಣಾಂಶವು 31.1ರಿಂದ 32 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ ಉಷ್ಣಾಂಶವು 22.2ರಿಂದ 22.8 ಡಿಗ್ರಿ ಸೆಲ್ಸಿಯಸ್‌ವರೆಗೆ ದಾಖಲಾಗುವ ಸಂಭವವಿದೆ. ಕೊಡಗು ಜಿಲ್ಲೆಯಲ್ಲಿ ಗರಿಷ್ಠ ಉಷ್ಣಾಂಶವು 29ರಿಂದ 30 ಡಿಗ್ರಿ ಸೆಲ್ಸಿಯಸ್ ಮತ್ತು ಕನಿಷ್ಠ ಉಷ್ಣಾಂಶವು 21.21.8 ಡಿಗ್ರಿ ಸೆಲ್ಸಿಯಸ್‌ವರೆಗೆ ದಾಖಲಾಗುವ ಸಾಧ್ಯತೆ ಇದೆ. ಚಾಮರಾಜನಗರ ಜಿಲ್ಲೆಯಲ್ಲಿ ಗರಿಷ್ಠ ಉಷ್ಣಾಂಶವು 29.1ರಿಂದ 29.6 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ ಉಷ್ಣಾಂಶವು 20.1ರಿಂದ 20.4 ಡಿಗ್ರಿ ಸಲ್ಸಿಯಸ್‌ವರೆಗೆ ಇರಬಹುದು.

ಮೈಸೂರು ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಡೊನಾಲ್ಡ್ ನಿರ್ಮಾಣೀಕ್ ನಿಧನ

ಮೈಸೂರು, ಮೇ 22(ಎಂಕೆ)– ಮೈಸೂರು ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಹಾಗೂ ರಾಮಕೃಷ್ಣನಗರ ನಿವಾಸಿ ಡೊನಾಲ್ಡ್ ಎಫ್ ನಿರ್ಮಾಣೀಕ್ (38) ಅನಾರೋಗ್ಯದಿಂದ ಬುಧವಾರ ಮುಂಜಾನೆ ನಿಧನರಾದರು. ಮೃತರು ತಾಯಿ ಕಾಂತಮ್ಮ, ತಂದೆ ನಿರ್ಮಾಣಿಕ್, ಇಬ್ಬರು ಸಹೋದರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಸಂಜೆ 5 ಗಂಟೆಗೆ ಮಹದೇವಪುರ ಮುಖ್ಯ ರಸ್ತೆಯಲ್ಲಿರುವ ಕ್ರೈಸ್ತ ಸಮುದಾಯದ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಡೊನಾಲ್ಡ್ ನಿಧನಕ್ಕೆ ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್ ನೇತೃತ್ವದಲ್ಲಿ ಕಾಂಗ್ರೆಸ್ ಧ್ವಜ ವಂದನೆ ಸಲ್ಲಿಸಲಾಯಿತು. ಹಾಗೆಯೇ ಕಾಂಗ್ರೆಸ್ ಸ್ಥಳೀಯ ಮುಖಂಡರು, ಜಿಲ್ಲಾ ಕಾಂಗ್ರೆಸ್ ಸಮಿತಿ ಹಾಗೂ ಯುವ ಕಾಂಗ್ರೆಸ್‌ನ ಪದಾಧಿಕಾರಿಗಳು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.



ಮೈಸೂರು ಕುಪ್ಪಣ್ಣ ಪಾರ್ಕ್‌ನಲ್ಲಿ ನಾಳೆಯಿಂದ ಮೂರು ದಿನ ಮಾವು, ಹಲಸು ಮೇಳ

- ಒಂದೇ ಸೂರಿನಡಿ 10ಕ್ಕೂ ಹೆಚ್ಚು ಬಗೆಯ ಮಾವು ಮಾರಾಟ
- 40 ಮಳಿಗೆಗಳಲ್ಲಿ ಲಭ್ಯವಿದೆ ನೈಸರ್ಗಿಕವಾಗಿ ಮಾಗಿದ ಹಣ್ಣು
- ರೈತರಿಂದ ನೇರವಾಗಿ ಗ್ರಾಹಕರ ಕೈ ಸೇರಲಿವೆ ಫಲಗಳ ರಾಜ

ಮೈಸೂರು, ಮೇ 22(ಎಂಟಿವೈ)– ಮೈಸೂರಿನ ಕುಪ್ಪಣ್ಣ ಪಾರ್ಕ್‌ನಲ್ಲಿ ಮೇ 24ರಿಂದ 26ರವರೆಗೆ ತೋಟಗಾರಿಕಾ ಇಲಾಖೆ 'ಮಾವು ಮತ್ತು ಹಲಸಿನ ಮೇಳ' ಆಯೋಜಿಸಿದೆ. ತೋಟಗಾರಿಕಾ ಇಲಾಖೆ ಉಪನಿರ್ದೇಶಕ ಮಂಜುನಾಥ್ ಅಂಗಡಿ ಈ ಬಗ್ಗೆ ಮಾಹಿತಿ ನೀಡಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಾರಿಯೂ ಮಾವು ಮೇಳ ಏರ್ಪಡಿಸಲಾಗಿದ್ದು, ಮೈಸೂರು, ಮಂಡ್ಯ, ಚಾಮರಾಜನಗರದ ಮಾವು ಬೆಳೆಗಾರರು ಮೇಳದಲ್ಲಿ ಪಾಲ್ಗೊಳ್ಳಲಿದ್ದಾರೆ. ರೈತರಿಂದ ನೇರವಾಗಿ ಗ್ರಾಹಕರಿಗೆ ವಿವಿಧ ಬಗೆಯ ಹಣ್ಣುಗಳನ್ನು ತಲುಪಿಸುವ ನಿಟ್ಟಿನಲ್ಲಿ ಈ ಮೇಳ ಸಹಕಾರಿಯಾಗಲಿದೆ. ಈ ಮೇಳದಲ್ಲಿ ವಿವಿಧ ಬಗೆಯ ಹಲಸಿನ ಹಣ್ಣುಗಳ ಮಾರಾಟವೂ ಇರಲಿದೆ.

ಹಾಪ್‌ಕಾಮ್ಸ್ ದರದಂತೆ ಮಾವು ಮೇಳದಲ್ಲಿ ಮಾವಿನ ಹಣ್ಣು ಮಾರಾಟ ಮಾಡಲು ಸೂಚನೆ ನೀಡಲಾಗಿದೆ. ಬಾದಾಮಿ, ರಸಪುರಿ, ತೋತಾಪುರಿ, ಮಲಗೋವಾ, ದಶೇರಿ ಸೇರಿದಂತೆ 10 ಬಗೆಯ ಮಾವಿನ ಹಣ್ಣುಗಳು ದೊರೆಯಲಿವೆ. 40 ಮಳಿಗೆಗಳನ್ನು ಸ್ಥಾಪಿಸಲಾಗಿದ್ದು, ರಾಸಾಯನಿಕಮುಕ್ತ ಮಾವಿನ ಹಣ್ಣನ್ನು ಮೇಳಕ್ಕೆ ತರದಂತೆ ಸೂಚಿಸಲಾಗಿದೆ. ಪ್ರತಿ ವರ್ಷವೂ ತೋಟಗಾರಿಕಾ ಇಲಾಖೆ ಆಯೋಜಿಸುವ ಮಾವು ಮೇಳಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದ್ದು, ಈ ಬಾರಿಯೂ ಹೆಚ್ಚಿನ ಪ್ರಮಾಣದ ಹಣ್ಣುಗಳ ಮಾರಾಟದ ನಿರೀಕ್ಷೆ ಇದೆ ಎಂದು ತಿಳಿಸಿದರು.



ಕರ್ಜನ್ ಪಾರ್ಕ್‌ನಲ್ಲಿರುವ ತೋಟಗಾರಿಕಾ ಇಲಾಖೆ ಸಭಾಂಗಣದಲ್ಲಿ ಮಾವು ಮೇಳದ ಪೋಸ್ಟರ್ ಅನ್ನು ತೋಟಗಾರಿಕಾ ಇಲಾಖೆಯ ಉಪನಿರ್ದೇಶಕ ಮಂಜುನಾಥ್ ಅಂಗಡಿ ಪ್ರದರ್ಶಿಸಿದರು.

ಮೇ 24ರಂದು ಬೆಳಗ್ಗೆ 11ಕ್ಕೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಮಾವು ಮೇಳಕ್ಕೆ ಚಾಲನೆ ನೀಡಲಿದ್ದಾರೆ. ಜಿ.ಪಂ ಸಿಇಓ ಕೆ.ಎಂ.ಗಾಯತ್ರಿ ಸೇರಿದಂತೆ ಹಿರಿಯ ಅಧಿಕಾರಿಗಳು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದರು.

ಬಿರುಗಾಳಿಗೆ ತೋಟಗಾರಿಕಾ ಬೆಳೆಗೆ ಹಾನಿ: ಮೇ 2 ಮತ್ತು 3ರಂದು ಸುರಿದ ಭಾರಿ ಮಳೆ ಹಾಗೂ ಗಾಳಿಗೆ ಜಿಲ್ಲೆಯಲ್ಲಿ ತೋಟಗಾರಿಕಾ ಬೆಳೆಗೆ ಹಾನಿಯಾಗಿದೆ. ಮಳೆಗಿಂತ ಗಾಳಿಗೆ ಬೆಳೆ ಹಾನಿ ಹೆಚ್ಚಾಗಿದೆ. ಬಾಳೆ ತೋಟಗಳು ನೆಲಕಚ್ಚಿವೆ. ಟೊಮೆಟೊ ಸೇರಿದಂತೆ ಕೆಲ ತರಕಾರಿ ಬೆಳೆಗೂ ಹಾನಿಯಾಗಿದೆ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕ ಹೆಚ್.ಶಿಧರ್, ಸಹಾಯಕ ನಿರ್ದೇಶಕರಾದ ಅಶ್ವಿನಿ, ಹೆಚ್.ಆರ್.ಚೇತನ್, ವೆಂಕಟೇಶ್ ಮೂರ್ತಿ ಇನ್ನಿತರರು ಉಪಸ್ಥಿತರಿದ್ದರು.

ಹೆಚ್ಚಿನ ತಾಪಮಾನ, ಕೈಕೊಟ್ಟ ಮಾವು ಬೆಳೆ

ಈ ಬಾರಿ ತಾಪಮಾನ ಮಾವು ಬೆಳೆ ಮೇಲು ದುಷ್ಪರಿಣಾಮ ಬೀರಿದೆ. ಜಿಲ್ಲೆಯಲ್ಲಿ 3047 ಹೆಕ್ಟೇರ್ ಪ್ರದೇಶದಲ್ಲಿ ಮಾವು ಬೆಳೆದಿದ್ದು, ವಾರ್ಷಿಕ 30ರಿಂದ 35 ಸಾವಿರ ಟನ್ ಫಸಲು ಮಾರುಕಟ್ಟೆಗೆ ಬರುತ್ತಿತ್ತು. ಆದರೆ, ಈ ಬಾರಿ ಹೆಚ್ಚಿನ ತಾಪಮಾನದಿಂದಾಗಿ ಮಾವಿನ ಇಳುವರಿಯಲ್ಲಿ ಶೇ.35ರಿಂದ 40ರಷ್ಟು ಕುಸಿತವಾಗಿದೆ. ಜೊತೆಗೆ ಬಿಸಿಗಾಳಿಯಿಂದಲೂ ಮಾವಿನ ಫಸಲು ಕ್ಷೀಣಿಸಿದೆ.

–ಮಂಜುನಾಥ್

ಉದ್ಯಮಿ, ಪಕ್ಷಾಂತರಿ ಬಿಟ್ಟು ನನ್ನ ಆಯ್ಕೆ ಮಾಡಿ

ಪುಟ್ಟಸಿದ್ದಶೆಟ್ಟಿ ಮನವಿ

ಮೈಸೂರು, ಮೇ 22(ಜಿಎ)–ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿದ್ದು, ಮೊದಲ ಪ್ರಾಶಸ್ತ್ಯ ಮತ ನನಗೆ ನೀಡಿ ಶಿಕ್ಷಕರ ಪರವಾಗಿ ಕೆಲಸ ಮಾಡಲು ಅವಕಾಶ ನೀಡುವಂತೆ ಮಾಜಿ ಎಂಎಲ್‌ಸಿ ಕೆ.ಸಿ.ಪುಟ್ಟಸಿದ್ದಶೆಟ್ಟಿ ಮನವಿ ಮಾಡಿದ್ದಾರೆ.



ಪುಟ್ಟಸಿದ್ದಶೆಟ್ಟಿ

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಾರಿ ಚುನಾವಣೆಯಲ್ಲಿ ಸ್ಪರ್ಧಿಸಿರುವ ಜೆಡಿಎಸ್ ಅಭ್ಯರ್ಥಿ ವಿವೇಕಾನಂದ ಉದ್ಯಮಿ. ಅವರು ಶಿಕ್ಷಣ ಕ್ಷೇತ್ರದಲ್ಲಿ ಸ್ಪರ್ಧೆ ಮಾಡಿದರೆ, ಶಿಕ್ಷಣದ ಗುಣಮಟ್ಟ ಉಳಿಯುತ್ತಾ ಎಂದು ಪ್ರಶ್ನಿಸಿದರು.

ಮರಿತಿಬ್ಬೇಗೌಡರು ಮೊದಲು ಎಲ್ಲಿದ್ದರು, ಇವತ್ತು ಕಾಂಗ್ರೆಸ್ ಪಕ್ಷದಿಂದ ಸ್ಪರ್ಧೆ ಮಾಡುತ್ತಿದ್ದಾರೆ. ಇವರು ಒಬ್ಬ ಪಕ್ಷಾಂತರಿಯಾಗಿದ್ದು, ಕಳೆದ 24 ವರ್ಷಗಳಲ್ಲಿ ಅವರದು ಶೂನ್ಯ ಸಾಧನೆ. ಈ ಹಿಂದೆ ಎಂಎಲ್‌ಸಿ ಆಗಿದ್ದಾಗ ಶಿಕ್ಷಕರಿಗಾಗಿ ಸಾಕಷ್ಟು ಕಾರ್ಯಗಳನ್ನು ಮಾಡಿದ್ದು, ಮತ್ತೊಮ್ಮೆ ಆಯ್ಕೆ ಮಾಡಿದರೆ, ಶಿಕ್ಷಕರ ಸಮಸ್ಯೆಗಳನ್ನು ಬಗೆಹರಿಸಲು ಶ್ರಮಿಸುತ್ತೇನೆ ಎಂದರು.

ಇಂದು ಅಂತರ್ಜಾತಿ ವಿವಾಹಿತರ ಸಭೆ

- ಅಂತರ್ಜಾತಿ ದಂಪತಿ ನೋಂದಣಿ ವೆಬ್‌ಸೈಟ್ ಉದ್ಘಾಟನೆ
- ಮುಖ್ಯಮಂತ್ರಿ ಸಿದ್ದರಾಮಯ್ಯರಿಂದ ಕಾರ್ಯಕ್ರಮ ಉದ್ಘಾಟನೆ

ಮೈಸೂರು, ಮೇ 22(ಜಿಎ)–ಮೈಸೂರಿನ ಜನಸ್ಪಂದನ ಟ್ರಸ್ಟ್ ಹಾಗೂ ಮಾನವಮಂಟಪ ಸಂಸ್ಥೆ ವತಿಯಿಂದ ಅಂತ ರ್ಜಾತಿ ವಿವಾಹಿತರ ಸಭೆ ಮತ್ತು ಅಂತರ್ಜಾತಿ ದಂಪತಿ ನೋಂದಣಿ ವೆಬ್‌ಸೈಟ್ ಉದ್ಘಾಟನಾ ಕಾರ್ಯಕ್ರಮವನ್ನು ಮೇ 23ರಂದು ಸಂಜೆ 4 ಗಂಟೆಗೆ ಕುವೆಂಪುನಗರದ ಚಿಕ್ಕಮ್ಮಾನಿಕೇತನ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿದೆ ಎಂದು ಜನಸ್ಪಂದನ ಟ್ರಸ್ಟ್ ಅಧ್ಯಕ್ಷರೂ ಆದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಹಿರಿಯ ರಂಗಕರ್ಮಿ ಬಸವಲಿಂಗಯ್ಯ, ಹಿರಿಯ ಪತ್ರಕರ್ತ ಜಿ.ಪಿ.ಬಸವರಾಜು, ಪ್ರಗತಿಪರ ಚಿಂತಕ ಡಾ.ಬಂಜಗೆರೆ ಜಯಪ್ರಕಾಶ್, ಹಿರಿಯ ಸಾಹಿತಿ ಎಸ್.ಜಿ.ಸಿದ್ದರಾಮಯ್ಯ, ಜಾನಪದ ವಿದ್ವಾಂಸ ಪ್ರೊ.ಕಾಳೇಗೌಡ ನಾಗವಾರ ವಿಷಯ ಮಂಡಿಸಲಿದ್ದಾರೆ ಎಂದರು. ಬುದ್ಧ ಪೂರ್ಣಿಮೆ ದಿನದಲ್ಲಾದರೂ ಮನುಷ್ಯ ಮನುಷ್ಯ ನನ್ನು ನೇರವಾಗಿ ನೋಡಬೇಕಾಗಿರುವ, ಗೌರವಿಸಬೇಕಾಗಿರುವ, ಪ್ರೀತಿಸಬೇಕಾಗಿರುವ ದಾರಿಗಳನ್ನು ಹುಡುಕುವ ಪ್ರಯತ್ನವಾಗಿ ಈ ಕಾರ್ಯಕ್ರಮ ರೂಪಿಸಿದ್ದೇವೆ. ಎಲ್ಲರೂ ಬಂದು ಕೈಜೋಡಿಸಿ ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಸುಶೀಲ ಬಸವಲಿಂಗಯ್ಯ, ಕಾಂಗ್ರೆಸ್ ವಕ್ತಾರ ಹೆಚ್.ಎ.ವೆಂಕಟೇಶ್ ಮತ್ತಿತರರು ಉಪಸ್ಥಿತರಿದ್ದರು.

ಮೇ 25, 26 'ಓಪನ್ ಡೇ' ಶೈಕ್ಷಣಿಕ ಮಾಹಿತಿ

ಮೈಸೂರು, ಮೇ 22(ಜಿಎ)–ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ ಹಾಗೂ ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜು(ಜೆಸಿಇ) ವತಿಯಿಂದ ಸಿಇಟಿ ಪರೀಕ್ಷೆ ಬರೆದಿರುವ ವಿದ್ಯಾರ್ಥಿಗಳಿಗಾಗಿ ಕಾಲೇಜಿನಲ್ಲಿ ಮೇ 25, 26ರಂದು 'ಓಪನ್ ಡೇ' ಏರ್ಪಡಿಸಲಾಗಿದೆ ಎಂದು ವಿವಿ ಕುಲಸಚಿವ ಡಾ.ಎ.ಎಸ್.ಧನರಾಜ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10 ಗಂಟೆಗೆ ಕಾಲೇಜಿನ ಆವರಣದಲ್ಲಿರುವ ರಾಜೇಂದ್ರ ಶ್ರೀಗಳ ಪ್ರತಿಮೆ ಮುಂಭಾಗ ಜೆಎಸ್‌ಎಸ್ ವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ 'ಓಪನ್ ಡೇ'ಗೆ ಚಾಲನೆ ನೀಡಲಿದ್ದಾರೆ. ವಿವಿಯ ಕುಲಪತಿ ಡಾ.ಎ.ಎನ್.ಸಂತೋಷ್ ಕುಮಾರ್ ಉಪಸ್ಥಿತರಿರುವರು. ನಂತರ ಬೆಳಗ್ಗೆ 10 ಗಂಟೆಯಿಂದ ಸಂಜೆ 6ರವರೆಗೆ ವಿದ್ಯಾರ್ಥಿಗಳು ಪೋಷಕರು ಕಾಲೇಜಿನಲ್ಲಿ ಲಭ್ಯವಿರುವ ವ್ಯಾಪಕ ಶೈಕ್ಷಣಿಕ ಅವಕಾಶಗಳ ಬಗ್ಗೆ ತಿಳಿಯಲು ವಿವಿಧ ವಿಭಾಗಗಳ ಬೋಧಕರು, ವಿದ್ಯಾರ್ಥಿಗಳ ನೇರ ಸಂವಾದ, ಯೋಜಿತ ಕೆಲಸ ಮತ್ತು ಮಾದರಿ ನೇರ ಪ್ರದರ್ಶನಗಳನ್ನು ವೀಕ್ಷಿಸಲು ಅವಕಾಶವಿದೆ. ಹಲವಾರು ಮಾದರಿಗಳ ಸ್ಪರ್ಧೆಯು ಆಯೋಜಿಸಲಾಗಿದೆ ಹೆಚ್ಚಿನ ಮಾಹಿತಿಗಾಗಿ www.jssstuniv.in ಸಂಪರ್ಕಿಸಬಹುದು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಪ್ರಾಂಶುಪಾಲ ಪ್ರೊ.ನಟರಾಜ್, ಪ್ರೊ.ಅನಿಲ್‌ಕುಮಾರ್, ಪ್ರೊ.ನಾಗೇಂದ್ರ, ಪ್ರೊ.ಮಹಾನಂದ್ ಉಪಸ್ಥಿತರಿದ್ದರು.

ಲಕ್ಷ್ಮಿ ಕಟಾಕ್ಷದಿಂದ ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿಗೆ ಟಿಕೆಟ್

ಇದು ಸರಸ್ವತಿ ಕ್ಷೇತ್ರ, ಲಕ್ಷ್ಮಿ ಆಟ ನಡೆಯೊಲ್ಲ: ಹೆಚ್.ಎ.ವೆಂಕಟೇಶ್

ಮೈಸೂರು, ಮೇ 22(ಜಿಎ)–ದಕ್ಷಿಣ ಶಿಕ್ಷಕರ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿಗೆ ಟಿಕೆಟ್ ಸಿಗಲು 'ಲಕ್ಷ್ಮಿ ಕಟಾಕ್ಷ'ವೇ ಕಾರಣ. ಆದರೆ, ಇದು ಸರಸ್ವತಿ ಕ್ಷೇತ್ರ. ಇಲ್ಲಿ ಲಕ್ಷ್ಮಿ ಆಟ ನಡೆಯೋದಿಲ್ಲ ಎಂದು ಕಾಂಗ್ರೆಸ್ ವಕ್ತಾರ ಎಚ್.ಎ.ವೆಂಕಟೇಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೇಲ್ಮನೆಗೆ ಚುನಾವಣೆ ನಡೆಯುತ್ತಿದ್ದು, ಇಲ್ಲಿ ಬುದ್ಧಿವಂತರು, ವಾಗ್ಮಿಗಳು ಪ್ರವೇಶ ಪಡೆಯುವ ಸ್ಥಳ. ಆದರೆ, ಜೆಡಿಎಸ್ ಲಕ್ಷ್ಮಿ ಕಟಾಕ್ಷದಿಂದ ಯಾವ ಅರ್ಹತೆಯೂ ಇಲ್ಲದ ವ್ಯಕ್ತಿಗೆ ಟಿಕೆಟ್ ನೀಡಿದೆ. ಶಿಕ್ಷಕರನ್ನು ಪ್ರತಿನಿಧಿಸುವ ಈ ಸರಸ್ವತಿ ಕ್ಷೇತ್ರದಲ್ಲಿ ಲಕ್ಷ್ಮಿ ಆಟ ನಡೆಯಲ್ಲ ಎಂದರು.

ಒಂದು ವೇಳೆ ಮರಿತಿಬ್ಬೇಗೌಡ ಅವರು ಜೆಡಿಎಸ್‌ನಲ್ಲೇ ಇದ್ದಿದ್ದರೆ ಅವರಿಗೆ ಈ ಬಾರಿ ಚುನಾವಣೆಗೆ ಸ್ಪರ್ಧಿಸಲು ಟಿಕೆಟ್ ಸಿಗುತ್ತಿರಲಿಲ್ಲ. ಜೆಡಿಎಸ್‌ನಲ್ಲಿ ನಡೆಯುತ್ತಿರುವ ಲಕ್ಷ್ಮಿ ಪ್ರಭಾವ ಅರಿತ ಮರಿತಿಬ್ಬೇಗೌಡರು ಕಾಂಗ್ರೆಸ್ ಮುಖಂಡರ ಜತೆ ಸಮಾಲೋಚಿಸಿ ಜೆಡಿಎಸ್ ತೊರೆದು ಕಾಂಗ್ರೆಸ್ ಸೇರ್ಪಡೆಗೊಂಡರು ಎಂದರು.




ಹೆಚ್.ಎ.ವೆಂಕಟೇಶ್

ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿ ಪರ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಭಾಗವಹಿಸಿ ಮಾತನಾಡಿರುವ ಶಾಸಕ ಜಿ.ಟಿ.ದೇವೇಗೌಡ, ಕಾಂಗ್ರೆಸ್‌ನವರು ಜಿಲ್ಲೆಯಲ್ಲಿ ಅಧಿಕಾರಿಗಳನ್ನು, ಶಿಕ್ಷಕರನ್ನು ಹೆದರಿಸುತ್ತಿದ್ದಾರೆ ಎಂದಿದ್ದಾರೆ. ಆದರೆ ಇದು ಸತ್ಯಕ್ಕೂ ದೂರವಾದದ್ದು. ಓರ್ವ ಜವಾಬ್ದಾರಿ ಸ್ಥಾನದಲ್ಲಿರುವ ಹಿರಿಯ ರಾಜಕಾರಣಿ ಇಂಥ ಸುಳ್ಳು ಹೇಳಬಾರದು. ಜನರಿಗೆ ಗೊತ್ತಿದೆ ಯಾರ ಸಂಸ್ಕೃತಿ ಎಂಥದ್ದು ಎಂಬುದು. ಜೆಡಿಎಸ್ ಟಿಕೆಟ್ ವಂಚಿತ, ಕೆ.ಟಿ.ಶ್ರೀಕಂಠೇಗೌಡ ಅವರು ಬೆಂಬಲಿಗರ ಸಭೆ ನಡೆಸುವಾಗ ಸಭೆಗೆ ನುಗ್ಗಿ ಅಡ್ಡಿಪಡಿಸಿದ್ದು ಯಾರು? ಅವರನ್ನು ಎಳೆದಾಡಿ ಮೂಳೆ ಮುರಿದು ಆಸ್ಪತ್ರೆಗೆ ದಾಖಲಾಗುವಂತೆ ಮಾಡಿದ್ದು ಯಾರು? ಇದೇ ಜೆಡಿಎಸ್ ಕಾರ್ಯಕರ್ತರಲ್ಲವೇ, ಇದೇ ತಾನೆ ನಿಮ್ಮ ಗೂಂಡಾ ಸಂಸ್ಕೃತಿ. ಸಭೆಯಲ್ಲಿ ಮಾಜಿ ಸಚಿವ ದಿವಂಗತ ಗೋವಿಂದೇಗೌಡ ಅವರ ಹೆಸರು ಪ್ರಸ್ತಾಪಿಸಲಾಗಿದೆ. ಆದರೆ ಇವರು ಯಾರಿಗೂ ಗೋವಿಂದೇಗೌಡರ ಹೆಸರು ಹೇಳುವ ಯೋಗ್ಯತೆ ಇಲ್ಲ. ಅಂಥ ಶ್ರೇಷ್ಠ ವ್ಯಕ್ತಿ ಗೋವಿಂದೇಗೌಡರು ಎಂದರು. ಈ ಹಿಂದೆ ಶಿಕ್ಷಣ ಸಚಿವರಾಗಿದ್ದ ಡಾ.ಅಶ್ವಥ್ ನಾರಾಯಣ್ ಇಡೀ ಶಿಕ್ಷಣ ಕ್ಷೇತ್ರವನ್ನೇ ಕಲುಷಿತಗೊಳಿಸಿದ್ದರು. ಇಲಾಖೆ ಭ್ರಷ್ಟಾಚಾರದಲ್ಲಿ ಮುಳುಗಿತ್ತು. ಇವರ ಅವಧಿಯಲ್ಲಿ ಒಂದೇ ಒಂದು ನೇಮಕಾತಿ ನಡೆಯಲಿಲ್ಲ. ಸಿಂಡಿಕೇಟ್ ಸದಸ್ಯರನ್ನಾಗಿ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಪಡದವರನ್ನು ನೇಮಕಗೊಳಿಸಿ ಹಾಳು ಮಾಡಿದ್ದಾರೆ ಎಂದು ಹೆಚ್.ಎ.ವೆಂಕಟೇಶ್ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಜಿ.ಸೋಮಶೇಖರ್, ಎಸ್.ರವಿಶಂಕರ್ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

23.05.2024 ಗುರುವಾರ, ಮಳೆ ನಕ್ಷತ್ರ: ಕೃತ್ತಿಕ 11.05.2024ರಿಂದ 24.05.2024
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ,
ತಿಥಿ: ಹುಣ್ಣಿಮೆ, ನಕ್ಷತ್ರ: ವಿಶಾಖ, ರಾಹುಕಾಲ: ಮಧ್ಯಾಹ್ನ 1.30ರಿಂದ 3ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಮಕ್ಕಳ ಕಣ್ಣಿನ ದೃಷ್ಟಿ ಸಮಸ್ಯೆಗೆ ವಿಶೇಷ ಬೇಸಿಗೆ ಆರೋಗ್ಯ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9ರಿಂದ.
- **ರಾಮ್‌ಸನ್ಸ್ ಕಲಾ ಪ್ರತಿಷ್ಠಾನ:** ಪಾರಂಪರಿಕ ಹಾಸು ಆಟಗಳ 10ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್–ಹ್ಯಾಂಡಿಕ್ರಾಫ್ಟ್ ಸೇಲ್ಸ್ ಎಂಪೋರಿಯಂ, ಮೃಗಾಲಯ ಎದುರು, ಬೆಳಗ್ಗೆ 10 ರಿಂದ.
- **ಮೈಸೂರು ವಿಶ್ವವಿದ್ಯಾನಿಲಯ, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ:** 2568ನೇ ಬುದ್ಧ ಪೂರ್ಣಿಮೆಯ ಅಂಗವಾಗಿ ವಿಶೇಷ ಉಪನ್ಯಾಸ: ಧಮ್ಮಪದ–ಜಾಗತಿಕ ಅನಿವಾರ್ಯ, ಉದ್ಘಾಟನೆ: ಗೌರವಾನ್ವಿತ ಭಿಕ್ಕು ಜಂಪಾಗ್ಯಾಲ್ ಸ್ಟೇನ್ (ಸರಾಜೆ ಮೊನಾಸ್ಟಿಕ್ ವಿಶ್ವವಿದ್ಯಾನಿಲಯ, ಬೈಲುಕುಪ್ಪೆ), ಸಂಪನ್ಮೂಲ ವ್ಯಕ್ತಿ: ಖ್ಯಾತ ವಿಮರ್ಶಕ ಪ್ರೊ.ಡಿ.ಎ.ಶಂಕರ್, ಅಧ್ಯಕ್ಷತೆ: ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದ ನಿರ್ದೇಶಕ ಪ್ರೊ.ಜೆ.ಸೋಮಶೇಖರ್, ಸ್ಥಳ: ಡಾ.ಬೆಟ್ರಿಕ್ಸ್ ಡಿ'ಸೌಜ ಸಭಾಂಗಣ, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.
- **ಹಿರಣ್ಮಯಿ ಪ್ರತಿಷ್ಠಾನ ಮತ್ತು ಕಾವೇರಿ ಬಳಗ, ಮೈಸೂರು :** ಪ್ರತಿಭಾ ಪುರಸ್ಕಾರ, ಅಧ್ಯಕ್ಷತೆ: ವಿಶ್ರಾಂತ ಶಿಕ್ಷಕರಾದ ಗೋಪಾಲಸ್ವಾಮಿ, ಅಭಿನಂದನಾ ಭಾಷಣ: ಸಾಹಿತಿ ಬನ್ನೂರು ಕೆ.ರಾಜು, ಪುರಸ್ಕಾರ ಪ್ರದಾನ: ಶ್ರೀಮತಿ ಮೇಘನಾ ವೆಂಕಟೇಶ್, ಮತ್ತು ವೆಂಕಟೇಶ್, ವಿಶೇಷ ಆಹ್ವಾನಿತರು: ಮುಕ್ತಕ ಕವಿ ಮುತ್ತುಸ್ವಾಮಿ, ಅತಿಥಿಗಳು: ಕಾವೇರಿ ಬಳಗ ಅಧ್ಯಕ್ಷೆ ಶ್ರೀಮತಿ ಕಾವೇರಿಯಮ್ಮ ಎನ್.ಕೆ., ಹಿರಣ್ಮಯಿ ಪ್ರತಿಷ್ಠಾನದ ಅಧ್ಯಕ್ಷ ಸಂಗಪ್ಪ ವಿ., ಸ್ಥಳ: ಶ್ರೀ ಶಿರಡಿ ಸಾಯಿಬಾಬಾ ಮಂದಿರ, ರಾಮಾನುಜ ರಸ್ತೆ, ಬೆಳಗ್ಗೆ 11 ಗಂಟೆಗೆ.
- **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ :** ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 133ನೇ ಜನ್ಮದಿನಾಚರಣೆ ಅಂಗವಾಗಿ ವಿಶೇಷ ಉಪನ್ಯಾಸ, ಉದ್ಘಾಟನೆ: ರಾಜ್ಯ ಕಾನೂನು ವಿಶ್ವವಿದ್ಯಾನಿಲಯದ (ಹುಬ್ಬಳ್ಳಿ) ಕುಲಪತಿ ಪ್ರೊ.ಸಿ.ಬಸವರಾಜು, ವಿಶೇಷ ಉಪನ್ಯಾಸ: ಮುಕ್ತ ವಿವಿ ಕುಲಪತಿ (ಪರೀಕ್ಷಾಂಗ) ಡಾ.ಹೆಚ್.ವಿಶ್ವನಾಥ್, ಅಧ್ಯಕ್ಷತೆ: ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ. ಹಲಸೆ, ಸ್ಥಳ: ಕಾವೇರಿ ಸಭಾಂಗಣ, ಮುಕ್ತ ವಿವಿ, ಬೆಳಗ್ಗೆ 11 ಗಂಟೆಗೆ.
- **ಜೈಭೀಮ್ ಜನಸ್ಪಂದನ ವೇದಿಕೆ :** 2586ನೇ ಬುದ್ಧ ಜಯಂತಿ, ಸಾನ್ನಿಧ್ಯ: ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ, ಮುಖ್ಯ ಅತಿಥಿಗಳು: ಮಾಜಿ ಕಾರ್ಪೊರೇಟರ್ ಸಿದ್ದಪ್ಪ, ಮಹಾನಗರಪಾಲಿಕೆ ಗುತ್ತಿಗೆದಾರರ ಸಂಘದ ಅಧ್ಯಕ್ಷ ಉದಯಕುಮಾರ್, ಮೈಸೂರು ವಿವಿ ಮಾಜಿ ಸಿಂಡಿಕೇಟ್ ಸದಸ್ಯ ಶರತ್, ಜೈಭೀಮ್ ಜನಸ್ಪಂದನ ವೇದಿಕೆ ಅಧ್ಯಕ್ಷ ಚೇತನ್ ಕಾಂತರಾಜ್, ಸ್ಥಳ: ಉರಿಲಿಂಗಿ ಪೆದ್ದಿಮಠ, ಗಾಂಧಿನಗರ, ಬೆಳಗ್ಗೆ 11ಕ್ಕೆ
- **ಶ್ರೀ ಶ್ರೀನಿವಾಸ ಸ್ವಾಮಿ ಕೈಂಕರ್ಯ ಸಭಾ :** ಶ್ರೀ ಶ್ರೀನಿವಾಸ ಸ್ವಾಮಿಯವರ ವಾರ್ಷಿಕ ಮಹೋತ್ಸವ, ನಮ್ಮಾಳ್ವಾರ್ ತಿರು ನಕ್ಷತ್ರ, ಸ್ಥಳ: ದೇವಸ್ಥಾನದ ಆವರಣ, ತಿಲಕ್‌ನಗರ, ಬೆಳಗ್ಗೆಯಿಂದ.
- **ವಿಶ್ವಮಾನವ ಮೈಸೂರು ವಿಶ್ವವಿದ್ಯಾನಿಲಯ ನೌಕರರ ವೇದಿಕೆ, ಮೈಸೂರು ವಿವಿ ಸ್ನಾತಕ ಗ್ರಂಥಾಲಯ:** ವಿಶ್ರಾಂತ ಕುಲಪತಿ ಪ್ರೊ.ಎಂ.ಮಾದಯ್ಯ ಅವರಿಗೆ ನುಡಿನಮನ, ಮುಖ್ಯ ಅತಿಥಿಗಳು: ಶಾಸಕರಾದ ಕೆ.ಹರೀಶ್ ಗೌಡ, ಟಿ.ಎಸ್.ಶ್ರೀವತ್ಸ, ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಸ್ಥಳ: ಸ್ನಾತಕ ಗ್ರಂಥಾಲಯ, ಮಹಾರಾಜ ಕಾಲೇಜು ಒಳ ಆವರಣ, ಬೆಳಗ್ಗೆ 11.30ಕ್ಕೆ
- **ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ :** ಅಖಿಲ ಭಾರತೀಯ ಬ್ರಾಹ್ಮಣ ಮಹಾಸಂಘದ ಮೈಸೂರು ಜಿಲ್ಲಾ ನೂತನ ಅಧ್ಯಕ್ಷ ಮುಳ್ಳೂರು ಗುರುಪ್ರಸಾದ್ ಅವರಿಗೆ ಅಭಿನಂದನೆ ಕಾರ್ಯಕ್ರಮ, ಮುಖ್ಯ ಅತಿಥಿಗಳು: ಧಾರ್ಮಿಕ ಮುಖಂಡ ವೇದಬ್ರಹ್ಮ ಶ್ರೀ ಭಾನುಪ್ರಕಾಶ್ ಶರ್ಮಾ, ವೆಂಗಿಪುರ ಮಠದ ಇಳೈ ಆಳ್ವಾರ್ ಸ್ವಾಮೀಜಿ, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಹಿರಿಯ ಮುಖಂಡ ಕೆ.ರಘುರಾಂ ವಾಜಪೇಯಿ, ವಿಪ್ರ ಮುಖಂಡರಾದ ಶ್ರೀಕಂಠಕುಮಾರ್, ಎನ್.ಎಂ.ನವೀನ್‌ಕುಮಾರ್, ಮಾಜಿ ಕಾರ್ಪೊರೇಟರ್ ಮಾ.ವಿ.ರಾಮಪ್ರಸಾದ್, ಸ್ಥಳ: ಅಪೂರ್ವ ಹೋಟೆಲ್ ಸಭಾಂಗಣ, ಚಾಮುಂಡಿಪುರಂ, ಮಧ್ಯಾಹ್ನ 2 ಗಂಟೆಗೆ
- **ವೈ.ಕೆ.ಅಮೃತಾಭಾಯಿ, ಎಸ್.ಕೆ. ಸುರಾಮ ಭಾಯಿ, ಭಗಿನಿ ಸೇವಾ ಸಮಾಜ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್ ಹಾಗೂ ಶ್ರೀ ವಿಜಯ ವಿಠ್ಠಲ ಪ್ರತಿಷ್ಠಾನ :** ಬಿಎಸ್‌ಎಸ್ ವಿದ್ಯೋದಯ ಶಾಲೆ ಉದ್ಘಾಟನೆ, ಸಾನಿಧ್ಯ: ಉಡುಪಿ ಪಲಿಮಾರು ಮಠದ ವಿದ್ಯಾಧೀಶ ತೀರ್ಥ ಸ್ವಾಮೀಜಿ, ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ, ಸ್ಥಳ: ಬಿಎಸ್‌ಎಸ್ ವಿದ್ಯೋದಯ ಶಾಲಾ ಆವರಣ, ಶ್ರೀ ರಾಘವೇಂದ್ರ ಮಠದ ಬಳಿ, ಕೃಷ್ಣಮೂರ್ತಿಪುರಂ, ಸಂಜೆ 5 ಗಂಟೆಗೆ.
- **ದೀಕ್ಷಿತ್ ಆರೋಗ್ಯ ಧಾಮ :** ಬುದ್ಧ ಪೂರ್ಣಿಮೆ ಅಂಗವಾಗಿ ವಿಶೇಷ ಮಾಸದ ಆನಂದ ಆರೋಗ್ಯ ಕಾರ್ಯಕ್ರಮ, ಸಂಗೀತ: ವಿದ್ವಾನ್ ಸುಮುಖ್ ಸೂರ್ಯ, ಪಿಟೀಲು: ವಿದ್ವಾನ್ ತ್ಯಾಗರಾಜ್ ಎಂ.ಎಸ್., ಮೃದಂಗ: ವಿದ್ವಾನ್ ರಮೇಶ್ ವಿ.ಎಸ್., ಉಪನ್ಯಾಸ: 'ಅರಿವು' ಅರಳಿ ಬುದ್ಧನಾಗು; ಡಾ.ಸಿ.ಎಸ್. ಅನಿಲ್‌ಕುಮಾರ್ ಅವರಿಂದ. ಸ್ಥಳ: ದೀಕ್ಷಿತ್ ಆರೋಗ್ಯ ಧಾಮ, ವಿಜಯನಗರ, ಸಂಜೆ 6 ಗಂಟೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ, 6.15–ಗೀತಾರಾಧನ, 6.35–"ಸಂವಹನ ಸಮಾಚಾರ" ಬಾನುಲಿ ಸರಣಿ, ಪ್ರಸ್ತುತಿ: ಅಲಕಾ ಕಟ್ಟೆಮನೆ, 6.40 ಪದಸಂಸ್ಕೃತಿ–ಪ್ರಸ್ತುತಿ: ಡಾ.ಹೆಚ್.ವಿ.ನಾಗರಾಜ್‌ರಾವ್, 7.15–ಕನ್ನಡದಲ್ಲಿ ಭಾಷಣ–ವರ್ತಮಾನಕ್ಕೆ ಬುದ್ಧನ ಸಂದೇಶಗಳು. ಮಾತನಾಡುತ್ತಾರೆ: ಪ್ರೊ. ಮಹದೇವ ಶಂಕನಪುರ, 10.00–ಕರ್ನಾಟಕ ಶಾಸ್ತ್ರೀಯ ಸಂಗೀತ–ಯು.ಪಿ.ರಾಜು, ಮ್ಯಾಂಡೋಲಿನ್ ವಾದನ, 11.00–ಮಿಶ್ರಮಾಧುರ್ಯ, 12.30–ದೇವರನಾಮ, 12.45 –ಚಟ್–ಪಟ್ ಚುರುಮುರಿ, ಪ್ರಸ್ತುತಿ: ಪ್ರಭುಸ್ವಾಮಿ ಮಳಿಮಠ್ ಹಾಗೂ ಕೆ.ಬಿ.ಮೀನಾ, 1.20–ಭಾವಗೀತೆ–ರಮಾ ರಾಮಕೃಷ್ಣ, 4.00–ಜನಪದ ಸಂಗೀತ, 4.30–ಕನ್ನಡ ಭಾರತಿ: 6.10–"ಸಂವಹನ ಸಮಾಚಾರ" ಬಾನುಲಿ ಸರಣಿ, ಪ್ರಸ್ತುತಿ: ಅಲಕಾ ಕಟ್ಟೆಮನೆ, 6.55 ಕೃಷಿರಂಗ–ಕಿಸಾನ್‌ವಾಣಿ ಸುಸ್ಥಿರ ಹೈನುಗಾರಿಕೆ ಕುರಿತು ಸಂವಾದ. ಭಾಗವಹಿಸುತ್ತಾರೆ: ಗುಂಡ್ಲುಪೇಟೆ ತಾಲೂಕು ಯರಿಯೂರು ಗ್ರಾಮದ ಎಸ್.ಸುಧೀಶ್ ಹಾಗೂ ಎನ್.ಧಾತ್ರಿ, ಪ್ರಸ್ತುತಿ: ಎನ್.ಕೇಶವಮೂರ್ತಿ, 8.00–ಯುವವಾಣಿ, 10.00–ನಾಟಕ, 10.30–ಸವಿನೆನಪು

ದಿಢೀರ್ ಆಸ್ಪತ್ರೆಗೆ ದಾಖಲಾದ ನಟ ಶಾರೂಖ್ ಖಾನ್

ಅಹಮದಾಬಾದ್, ಮೇ 22– ಬಾಲಿವುಡ್ ನಟ ಶಾರೂಖ್ ಖಾನ್ ಆರೋಗ್ಯದಲ್ಲಿ ಏರುಪೇರು ಉಂಟಾಗಿದ್ದು, ಅಹಮದಾಬಾದ್ ನಗರ ಕೆಡಿ ಆಸ್ಪತ್ರೆಗೆ ದಾಖಲಾಗಿದ್ದಾರೆ.



ಬಾಲಿವುಡ್ ಕಿಂಗ್ ಖಾನ್ ಶಾರೂಖ್ ಖಾನ್ ಆಸ್ಪತ್ರೆಗೆ ದಾಖಲಾಗಿದ್ದಾರೆ. ಅನಾರೋಗ್ಯದ ಹಿನ್ನೆಲೆಯಲ್ಲಿ ನಟ ಶಾರೂಖ್ ಅಹಮದಾಬಾದ್‌ನ ಕೆಡಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ನಟ ದಿಢೀರ್ ಆಸ್ಪತ್ರೆಗೆ ದಾಖಲಾಗಿದ್ದರಿಂದ ಅಭಿಮಾನಿಗಳು ಆತಂಕಕ್ಕೆ ಒಳಗಾಗಿದ್ದಾರೆ.

ಮೊದಲ ಐಪಿಎಲ್ ಪ್ಲೇಆಫ್ ಪಂದ್ಯದ (IPL) ವೀಕ್ಷಣೆಗಾಗಿ ಶಾರುಖ್ ಖಾನ್ ಅಹಮದಾಬಾದ್‌ಗೆ ಬಂದಿದ್ದರು. ಈ ವೇಳೆ ಶಾರೂಖ್ ಖಾನ್ ಆರೋಗ್ಯದಲ್ಲಿ ಏರುಪೇರು ಉಂಟಾಗಿದೆ. ಶಾರೂಖ್ ಖಾನ್ ಕೆಕೆಆರ್ ತಂಡದ ಮಾಲೀಕರು ಸಹ ಆಗಿದ್ದಾರೆ.

ಅಹಮಾದಬಾದ್‌ನಲ್ಲಿ ಅಧಿಕ ತಾಪಮಾನ ದಾಖಲಾಗುತ್ತಿದೆ. ತೀವ್ರ ಬಿಸಿಲಿನಿಂದಾಗಿ ಕಿಂಗ್ ಖಾನ್ ಅನಾರೋಗ್ಯಕ್ಕೆ ತುತ್ತಾಗಿದ್ದಾರೆ ಎಂದು ವರದಿಯಾಗಿದೆ.

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ, ನನ್ನ ಕಕ್ಷಿದಾರರಾದ ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಹುಯಿಲಾಳು ಗ್ರಾಮದಲ್ಲಿ ವಾಸವಾಗಿರುವ ಲೇಟ್ ತಿಮ್ಮೇಗೌಡರವರ ಮಕ್ಕಳುಗಳಾದ ದೊಡ್ಡಮ್ಮ ಮತ್ತು ಇತರರು ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತಿಗೆ ಸಂಬಂಧಪಟ್ಟಂತೆ ಮೈಸೂರಿನ ಪ್ರಧಾನಪಿ.ಸಿ.ಜೆ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ದಾಸೇಗೌಡ ಮತ್ತು ಇತರರು, ಶ್ರೀಮತಿ ಗಾಯಿತ್ರಿ ರಾಜಗೋಪಾಲ್, ಸ್ಕಿಲ್ ಟೇಕ್ ಇಂಜಿನಿಯರ್ ಪ್ರೈವೇಟ್ ಲಿಮಿಟೆಡ್, ದಿ ಸಿಟಿಜನ್ ವೆಲ್‌ಫೇರ್ ಸೊಸೈಟಿ ರವರ ವಿರುದ್ಧ ಅಸಲು ದಾವಾ ಸಂಖ್ಯೆ 494/32017 ರಂತೆ ಘೋಷಣಾತ್ಮಕ ದಾವೆಯನ್ನು ಹೂಡಿದ್ದು, ಸದರಿ ದಾವೆಯು ನ್ಯಾಯಾಲಯದಲ್ಲಿ ವಿಚಾರಣಾಹಂತದಲ್ಲಿ ಇರುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ಈ ಪ್ರಕರಣ ಇತ್ಯರ್ಥವಾಗುವ ತನಕ ಸಾರ್ವಜನಿಕರಾಗಲೀ ಅಥವಾ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದವರಾಗಲೀ ಯಾರು ಸಹಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವುದೇ ರೀತಿಯಲ್ಲೂ ವ್ಯವಹರಿಸಬಾರದಾಗಿ ಈ ಮೂಲಕ ನಮ್ಮ ಕಕ್ಷಿದಾರರು ತಿಳಿಯಪಡಿಸುತ್ತಾರೆ.

ಷೆಡ್ಯೂಲ್

1. ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಕೆ. ಹೆಮ್ಮನಹಳ್ಳಿ ಗ್ರಾಮದ ಹಳಿ ಸರ್ವೆ ನಂಬರ್ 16, ಹೊಸ ಸರ್ವೆ ನಂ. 16/1ರಲ್ಲಿ ವಿಸ್ತೀರ್ಣ 39 ಗುಂಟೆ ಸರ್ವೆ ನಂ. 16/2ರಲ್ಲಿ ವಿಸ್ತೀರ್ಣ 20 ಗುಂಟೆ, ಸರ್ವೆ ನಂ. 16/3ರಲ್ಲಿ 24 ಗುಂಟೆ, ಸರ್ವೆ ನಂ.16/4ರಲ್ಲಿ 1ಎಕರೆ 10 ಗುಂಟೆ ಒಟ್ಟು ವಿಸ್ತೀರ್ಣ 3ಎಕರೆ 13ಗುಂಟೆ ಜಮೀನು ಈ ನೋಟಿಸ್‌ಗೆ ಒಳಪಟ್ಟ ಜಮೀನಾಗಿರುತ್ತದೆ. ಇದಕ್ಕೆ ಚಕ್ಕುಬಂದಿ:– ಪೂರ್ವಕ್ಕೆ: ಸರ್ವೆ ನಂ. 17ರ ಸ್ವತ್ತು. ಪಶ್ಚಿಮಕ್ಕೆ: ಹುಯಿಲಾಳು ಗ್ರಾಮದ ಬೌಂಡ್ರಿ, ಉತ್ತರಕ್ಕೆ: ಹುಯಿಲಾಳು ಗ್ರಾಮದ ಬೌಂಡ್ರಿ, ದಕ್ಷಿಣಕ್ಕೆ: ರಾಮೇಗೌಡ ಬಿನ್ ಕಾಳೇಗೌಡರವರ ಸ್ವತ್ತು.
2. ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಕೆ. ಹೆಮ್ಮನಹಳ್ಳಿ ಗ್ರಾಮದ ಹಳೆ ಸರ್ವೆ ನಂಬರ್ 17, ಹೊಸ ಸರ್ವೆ ನಂ. 17/1ರಲ್ಲಿ ವಿಸ್ತೀರ್ಣ 28 ಗುಂಟೆ ಸರ್ವೆ ನಂ. 17/2ರಲ್ಲಿ ವಿಸ್ತೀರ್ಣ 2 ಎಕರೆ 29 ಒಟ್ಟು ವಿಸ್ತೀರ್ಣ 3ಎಕರೆ 17 ಗುಂಟೆ ಜಮೀನು ಈ ನೋಟಿಸ್‌ಗೆ ಒಳಪಟ್ಟ ಜಮೀನಾಗಿರುತ್ತದೆ. ಇದಕ್ಕೆ ಚಕ್ಕುಬಂದಿ:– ಪೂರ್ವಕ್ಕೆ: ಸರ್ವೆ ನಂ. 19ರ ಸ್ವತ್ತು, ಪಶ್ಚಿಮಕ್ಕೆ: ಸರ್ವೆ ನಂ. 16ರ ಸ್ವತ್ತು ಉತ್ತರಕ್ಕೆ: ಹುಯಿಲಾಳು ಗ್ರಾಮದ ಬೌಂಡ್ರಿ, ದಕ್ಷಿಣಕ್ಕೆ: ಗಾಯಿತ್ರಿ ರಾಜಗೋಪಾಲ್‌ರವರ ಸ್ವತ್ತು.

ವಕೀಲರು:ದೊರೆಸ್ವಾಮಿ ಆರ್.
ನಂ. 1563/1ಎ, 2ನೇ ಮಹಡಿ, ಕೆ.ಆರ್ ಮೊಹಲ್ಲಾ, ಮೈಸೂರು.















ನಕ್ಕರೆ ಅದೇ ಸ್ವರ್ಗ

ಹೆಂಡತಿ : ಸನ್ಯಾಸಿಗೂ, ಸಂಸಾರಿಗೂ ಏನು ವ್ಯತ್ಯಾಸ ರೀ?
ಗಂಡ : ಹುಲಿ ಚರ್ಮದ ಮೇಲೆ ಸನ್ಯಾಸಿ ಆದ್ರೆ, ಹುಲಿ ಜೊತೆಗೇ ಮಲಗೋನು ಸಂಸಾರಿ...

ಮೈಸೂರು ಮಿತ್ರ

ಗುರುವಾರ, 23 ಮೇ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

'ಕರ್ಮದ ಹತ್ತಿರ ಕಾಗದವೂ ಇಲ್ಲ, ಕಾನೂನು ಇಲ್ಲ, ಪುಸ್ತಕವೂ ಇಲ್ಲ, ಆದರೂ ಎಲ್ಲರ ಪಾಪ-ಪುಣ್ಯದ ಲೆಕ್ಕಾಚಾರವಿರುತ್ತದೆ'

ವೇದ ಸುಳ್ಳಾದರೂ ಗಾದೆ ಸುಳ್ಳಾಗದು
{ ಶುಭ ನುಡಿಯೋ ಸೋಮ ಅಂದರೆ ಗೂಬೆ ಕಾಣ್ತಿದ್ಯಲ್ಲೋ ಮಾಮ ಅಂದ ಹಾಗೆ

ನಿಮ್ಮ ಪತ್ರಗಳು



■ ಬುದ್ಧನೆಡೆಗೆ.. ಮರಳಿ ಮನೆಗೆ... ತೆರಳಿದ ಸ್ವಾಭಿಮಾನಿ!

ಮಾನ್ಯರೆ,

ನೂರಾರು ಜನ ದಲಿತ ರಾಜಕಾರಣಿಗಳು ಸಿಗುತ್ತಾರೆ. ಆದರೆ ಬೌದ್ಧ ರಾಜಕಾರಣಿಗಳು ಸಿಗುವುದು ಬಹಳ ಅಪರೂಪ. ಈಗಿರುವಾಗ ಚಾಮರಾಜ ನಗರ ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರು ದಕ್ಷಿಣ ಭಾರತದ ಬೌದ್ಧರಾಜಕಾರಣಿಯಾಗಿ ಅಗ್ರಪಂಕ್ತಿಯಲ್ಲಿ ಸ್ಥಾನ ಪಡೆದಿದ್ದರು. ಈಗವರು ನಮ್ಮಿಂದ ದೂರವಾಗಿದ್ದಾರೆ. ಬೌದ್ಧಧಮ್ಮದ ಉಪಾಸಕರಾಗಿದ್ದ ವಿ.ಶ್ರೀನಿವಾಸ ಪ್ರಸಾದ್ ಅವರು ಪ್ರತಿವರ್ಷ ತಮ್ಮ ನಿವಾಸ ಭೀಮಸದನದಲ್ಲಿ ಬುದ್ಧ ಪೂರ್ಣಿಮೆ ಆಚರಣೆ ಮಾಡುತ್ತಿದ್ದರು. ಅಲ್ಲದೆ ಅಶೋಕಪುರಂ ಬಳಿ ಇರುವ ಬೌದ್ಧ ವಿಹಾರದಲ್ಲಿ ಜರುಗುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಕೊನೆಯ ಆಸೆ ಬೌದ್ಧಧರ್ಮವನ್ನು ಸ್ವೀಕರಿಸುವುದೇ ಆಗಿದೆ. ಹಾಗಾಗಿ ನಾವೆಲ್ಲರೂ ಬುದ್ಧನನ್ನು ಅಪ್ಪಿಕೊಳ್ಳುವ ಎಂದು ಜನರನ್ನು ಜಾಗೃತಿಗೊಳಿಸಿ, ಧಮ್ಮವನ್ನು ಸಾರುತ್ತಿದ್ದರು.

ಇಂದು ಬುದ್ಧ ಪೂರ್ಣಿಮೆ ಆದರೆ ವಿ.ಶ್ರೀನಿವಾಸ ಪ್ರಸಾದ್ ಅವರು ನಮ್ಮೊಂದಿಗಿಲ್ಲ. ಇದು ಅವರಿಲ್ಲದ ಮೊದಲ ಬುದ್ಧ ಪೂರ್ಣಿಮೆ. 'ಬುದ್ಧ ಮೋಕ್ಷದಾತನಲ್ಲ; ಮಾರ್ಗದಾತ' ಎನ್ನುತ್ತಿದ್ದ ಸ್ವಾಭಿಮಾನಿ ವಿ.ಶ್ರೀನಿವಾಸ ಪ್ರಸಾದ್ ಅವರು ಬುದ್ಧನ ಮಾರ್ಗದಲ್ಲಿಯೇ ಬುದ್ಧನೆಡೆಗೆ ಮರಳಿ ಮನೆಗೆ... ಸೇರಿದ್ದಾರೆ. ಏನೇ ಆಗಲಿ ಧಮ್ಮ ಬಿತ್ತುವ, ಪಸರಿಸುವ ಕಾರ್ಯದಲ್ಲಿ ಸದಾ ಮುಂಚೂಣಿಯಲ್ಲಿದ್ದ ಪ್ರಸಾದ್ ಅವರ ಅಗಲಿಕೆ ಈ ಸಂದರ್ಭದಲ್ಲಿ ಸಮಸ್ತ ಶೋಷಿತ ಸಮುದಾಯಗಳನ್ನು ಬಹುವಾಗಿ ಕಾಡದೆ ಇರದು.

– ಪ್ರಜ್ವಲ್ ಶಶಿ, ತಗಡೂರು.

■ ಆಹಾರ ಪದಾರ್ಥಗಳ ವಿತರಕರಿಗೆ ಕೋರ್ಟ್ ತೀರ್ಪಿನ ಆಘಾತ

ಮಾನ್ಯರೆ,

ಬಾಬಾ ರಾಮದೇವ್ ಅವರ ಪತಂಜಲಿ ಕಂಪನಿಯು ಸಿಹಿ ಉತ್ಪನ್ನವಾದ ಸೋನಾ ಪಾಪಡಿ ಪದಾರ್ಥದ ಲ್ಯಾಬ್ ಪರೀಕ್ಷೆಯಲ್ಲಿ ಕಳಪೆ ಗುಣಮಟ್ಟದ ಪದಾರ್ಥ ಮಾರಾಟ ಮಾಡಿದ ಪ್ರಕರಣದಲ್ಲಿ ಉತ್ತರಾಖಂಡ ನ್ಯಾಯಾಲಯ ಸಂಸ್ಥೆಯ ಹಿರಿಯ ಅಧಿಕಾರಿ, ಉತ್ಪನ್ನ ಹಂಚಿಕೆದಾರ, ಮಾರಾಟ ಮಾಡಿದ ಅಂಗಡಿ ಮಾಲೀಕ ಹೀಗೆ ಮೂವರಿಗೆ ತಲಾ 6 ತಿಂಗಳು ಜೈಲು ಶಿಕ್ಷೆ ಹಾಗೂ ದಂಡ ವಿಧಿಸಿ ಆದೇಶ ಹೊರಡಿಸಿದ ಸುದ್ದಿ ದಿನಪತ್ರಿಕೆಯೊಂದರಲ್ಲಿ ಪ್ರಕಟವಾಗಿದೆ.

ಈ ತೀರ್ಪಿನಲ್ಲಿ ಕಂಪನಿಯ ಉತ್ಪನ್ನಗಳ ಹಂಚಿಕೆದಾರರು (Distributor) ನ್ಯಾಯಾಲಯದ ತೀರ್ಪಿಗೆ ಒಳಪಟ್ಟಿರುವುದು ನಿಜಕ್ಕೂ ಆಘಾತಕಾರಿ ವಿಷಯ. ಕಾರಣ, ಸಾಮಾನ್ಯವಾಗಿ ಕಂಪನಿಯವರು ವಿತರಕರೊಂದಿಗೆ ಪ್ರಾರಂಭದಲ್ಲಿ ಮಾಡಿಕೊಳ್ಳುವ ಕರಾರಿನಂತೆ ಆಹಾರ ಪದಾರ್ಥಗಳನ್ನು ಪೂರೈಸುವಾಗ ಉತ್ತಮ ಗುಣಮಟ್ಟ ಹಾಗೂ ತಾಜಾ ಸ್ಟಾಕ್‌ಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವ ಬಗ್ಗೆ ಒಡಂಬಡಿಕೆ ಏರ್ಪಟ್ಟಿರುತ್ತದೆ. ಈ ಒಂದು ವಿಶ್ವಾಸದ ಮೇಲೆ ವಿತರಕರು ಪ್ರತಿಯೊಂದು ಸಂದರ್ಭದಲ್ಲಿಯೂ ಕಂಪನಿಗಳಿಗೆ ಲಕ್ಷಾಂತರ ರೂ.ಗಳನ್ನು ಮುಂಗಡವಾಗಿ ಪಾವತಿಸಿ ಪದಾರ್ಥಗಳನ್ನು ತರಿಸಿಕೊಂಡು ಮಾರುಕಟ್ಟೆಗಳಿಗೆ ವಿತರಿಸುವ ಜವಾಬ್ದಾರಿ ನಿರ್ವಹಿಸುತ್ತಾ ಬರುತ್ತಿದ್ದಾರೆ. ಪದಾರ್ಥಗಳ ಗುಣಮಟ್ಟ ಕಾಪಾಡಿಕೊಳ್ಳುವ ಹೊಣೆಗಾರಿಕೆ ಕಂಪನಿಯವರ ಜವಾಬ್ದಾರಿಯಾಗಿದ್ದು, ಮಾರುಕಟ್ಟೆಯಲ್ಲಿ ಬೇಡಿಕೆ ಹಾಗೂ ತನ್ನ ಕಂಪನಿ ವಹಿವಾಟಿನಲ್ಲಿ ಉತ್ತಮ ಸಾಧನೆ ತೋರುವ ಒಂದೇ ಮಾನದಂಡ ಇಟ್ಟುಕೊಂಡು ವಿತರಕರಿಂದ ಕಂಪನಿಯ ಸಂಬಂಧಪಟ್ಟ ಅಧಿಕಾರಿಗಳು ಇನ್ನಿಲ್ಲದ ಒತ್ತಡ ಹೇರಿ ತಮ್ಮ ಪ್ರತಿನಿಧಿ ಮೂಲಕ ಮಾರುಕಟ್ಟೆಗಳಿಗೆ ಪೂರೈಕೆ ಮಾಡುವ ಹೊಣೆಗಾರಿಕೆಯನ್ನು ಅತ್ಯಂತ ಶಿಸ್ತುಬದ್ಧವಾಗಿ ನಿರ್ವಹಿಸುತ್ತಾ ಬರುತ್ತಿದ್ದಾರೆ ವಿನಃ ವಿತರಕರಾದವರಿಗೆ ಮಾರುಕಟ್ಟೆಗಳಲ್ಲಿ ತಮ್ಮ ಪದಾರ್ಥಗಳ ಬೇಡಿಕೆ ಹೆಚ್ಚಿಸಿಕೊಳ್ಳಲು ಇನ್ನಿಲ್ಲದ ಪ್ರಯತ್ನ ಮತ್ತು ಒತ್ತಡ ಹೇರಿ ಸಾಲದ ರೂಪದಲ್ಲಿ ಪೂರೈಕೆ ಮಾಡಿಸಿ ತಮ್ಮ ಕಾರ್ಯವನ್ನು ಸಾಧಿಸುವಲ್ಲಿ ಯಶಸ್ಸು ಕಾಣುವಲ್ಲಿ ಸಫಲರಾಗಿ ನ್ಯಾಯಯುತವಾಗಿ ವಿತರಕರಿಗೆ ಸಿಗಬೇಕಾದ ಕಮೀಶನ್ ಹಣದಲ್ಲೂ ಇತ್ತೀಚೆಗೆ ಕಡಿತಗೊಳಿಸಿ (ಶೇ.4ರಿಂದ 5) ಇನ್ನಿಲ್ಲದ ತೊಂದರೆಯಲ್ಲಿ ಈ ವೃತ್ತಿಯಲ್ಲಿ ಬದುಕು ಸಾಗಿಸುವ ಪರಿಸ್ಥಿತಿ ತಂದೊಡ್ಡಿದ್ದಾರೆ.

ಈ ಪ್ರಕರಣದಲ್ಲಿ ಹೇಳುವುದಾದರೆ ಮಾನ್ಯ ನ್ಯಾಯಾಲಯ ಕಂಪನಿಯ ಹಂಚಿಕೆದಾರರು/ವಿತರಕರು ತಪ್ಪಿತಸ್ಥರೆಂದು ಭಾವಿಸಿ ನೀಡಿದ ಶಿಕ್ಷೆ ನಿಜಕ್ಕೂ ಆಘಾತಕಾರಿ ಎಂಬ ಭಾವನೆ ವಿತರಕ ವೃಂದದಲ್ಲಿ ಮೂಡುತ್ತಿದೆ ಹಾಗೂ ಈ ವೃತ್ತಿಯಲ್ಲಿ ಅವಲಂಬಿತರಾದವರಲ್ಲಿ ಆತ್ಮಸ್ಥೈರ್ಯ ಕುಗ್ಗುವಂತಾಗಿದೆ. ಮಾನ್ಯ ನ್ಯಾಯಾಲಯದ ಆದೇಶವನ್ನು ಗೌರವಿಸುವ ಹಾಗೂ ಕಾಪಾಡಿಕೊಂಡು ಬರುವ ನಿಟ್ಟಿನಲ್ಲಿ ಕಂಪನಿಗಳೂ ಈ ವಿಷಯದಲ್ಲಿ ಹೆಚ್ಚಿನ ಮುತುವರ್ಜಿ ವಹಿಸಿ ಪದಾರ್ಥಗಳ ಪೂರೈಕೆಯಲ್ಲಿ ಮುಂದಿನ ದಿನಗಳಲ್ಲಿ ಉತ್ತಮ ಗುಣಮಟ್ಟ ಕಾಪಾಡಿಕೊಂಡು ಬರುವ ಬಗ್ಗೆ ಗಮನ ಹರಿಸುವಲ್ಲಿ ಈ ಒಂದು ತೀರ್ಪು ಎಚ್ಚರಿಕೆಯ ಗಂಟೆ ಎಂದು ಹೇಳಬಹುದು. **–ಜಿ.ಎಸ್.ಗಣೇಶ್‌ರಾವ್, ಶಿವರಾಂಪೇಟೆ.**

■ ಬದುಕು-ಬಿಂದು

ಮಾನ್ಯರೆ,

ಕಾಲ	: ನಮಗೆ ಇಷ್ಟವಾದವರನ್ನು "ನೂರ್ಕಾಲ ಬಾಳಿ" ಎಂದು ಹರಸಿದರೆ ಸಾಲದು, "ಇನ್ನೂರ್ಕಾಲ ಬಾಳಿ!" ಎಂದು ಹರಸಬೇಕು.
ಲಗ್ಗೆ	: ಮಂಗನಿಂದಾದ ಮಾನವ ಈಗ ಮಂಗಳಕ್ಕೆ ಹಾಕುತ್ತಿದ್ದಾರೆ ಲಗ್ಗೆ: ವಿಸ್ಮಯದ ಬುಗ್ಗೆ!
ವ್ಯತ್ಯಾಸ	: ಗಂಡಿನದು ಬರಿಯ ಎದೆ; ಹೆಣ್ಣಿನದೊ ಹೃದಯ!
ಅಸ್ತಿತ್ವ	: ನಾಸ್ತಿಕನೊಬ್ಬ ಹೀಗೆ ಬರೆದನಂತೆ: "God si nowhere" (ದೇವರು ಎಲ್ಲಿಯೂ ಇಲ್ಲ). ಆಸ್ತಿಕನೊಬ್ಬ ಹೀಗೆ ತಿದ್ದಿದನಂತೆ: "God is now here" (ದೇವರೀಗ ಇಲ್ಲಿದ್ದಾನೆ).
ಏನಿದೆ?	: "ಹೆಸರಿನಲ್ಲೇನಿದೆ?" ಎಂದು ಕೇಳಿದ ಷೇಕ್ಸ್‌ಪಿಯರ್; ಅಂತೆಯೆ, "ಬಣ್ಣದಲ್ಲೇನಿದೆ?"
ಲಾಯಕ್ಕು	: "ಮಹಿಳೆಯರು ಅಡುಗೆಗೇ ಲಾಯಕ್ಕೂ" ಎಂದೊಬ್ಬರ ಟೀಕೆ. ಅಡುಗೆಗೂ ಅಲ್ಲ; ಈಗ ಉಡುಗೆಗೇ ಲಾಯಕ್ಕು!
ವಾಯ್ಸ್	: ವಯಸ್ಸಾದರೂ 'ವಾಯ್ಸ್' (Voice) ಚೆನ್ನಾಗಿರಬೇಕು; noise ಆಗಬಾರದು.
ಹೊಲ(ಲು)ಸು	: ಇಂದಿನ ರಾಜಕೀಯ ಕ್ಷೇತ್ರ ಹೊಲಸಾಗಿದೆ; ಬೆಳೆಗಿಂತ ಕಳೆ ಹುಲುಸಾಗಿದೆ.
ಕೌತುಕ	: ಸ್ತ್ರೀಯ ಶ್ರೀಮುಖ ಎಂದೂ ಎಲ್ಲಿಯೂ ಮಧುರ ಕೌತುಕ!
ಪಾಠ	: ಕುವೆಂಪು ನನಗೆ ಪಾಠ ಹೇಳಿದ ಗುರುಗಳಲ್ಲ, ಅನೇಕರು ತಿಳಿದಿರುವಂತೆ (ಸ್ವಾರಸ್ಯವೆಂದರೆ) ನನ್ನ ತಂದೆಗೆ ಪಾಠ ಹೇಳಿದವರು.
ಶಿವ	: ಪ್ರೊ. ಕೆ. ಭೈರವಮೂರ್ತಿ ಎಂಬವರೊಬ್ಬರಿದ್ದರು; ಅವರಲ್ಲಿ ಶಿವಾಂಶದ ವಿನಾ ಭೈರವಾಂಶ ಲೇಶವೂ ಇರಲಿಲ್ಲ!
ಗುಡ್ಡೆ	: ಬಹಳ ಹಿಂದೆ ನನ್ನ ಪುಟ್ಟ ಮೊಮ್ಮಗಳು 'ಗುಡ್ಡೇ' (Good Day) ಬಿಸ್ಕತ್, 'ಗುಡ್ಡೇ ಬಿಸ್ಕತ್' ಎಂದಾಗ, ನನಗೆ ಗ್ರಾಮೀಣ ಗುಡ್ಡೆ ಮಾಂಸದ ನೆನಪಾಯಿತು!

– ಸಿಪಿಕೆ, ಮೈಸೂರು.

ಬಹುಮುಖಿ




ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ: 94815 33167

ಜಗದ ಬೆಳಕಾಗಿ ಬಂದ ಭಗವಾನ್ ಬುದ್ಧ

> ಸರ್ವರಲ್ಲೂ ಲೇಸನ್ನೇ ಬಯಸುವ ಬೌದ್ಧ ಧರ್ಮ ಲೋಕಪ್ರಿಯ. ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು ಎಂಬ ಮಾನವ ಧರ್ಮವನ್ನು ಪ್ರತಿಪಾದಿಸುವ ಸಮಾಜವಾದದ ಬೆಳಕಿನ ಜೀವಧಾತು ಬೇರುಗಳು ಬೌದ್ಧಧರ್ಮದಲ್ಲುಂಟು. ಹಾಗಾಗಿ ಬೌದ್ಧಧರ್ಮ ಬಹುಆಕರ್ಷಣೀಯ. ಇದರ ಪ್ರವರ್ತಕ ಬುದ್ಧದೇವನೂ ಅಷ್ಟೇ ಲೋಕಮಾನ್ಯ.

ಇಂದು ಬುದ್ಧ ಪೂರ್ಣಿಮೆ. ತನ್ನಿಮಿತ್ತ ಈ ಲೇಖನ.



ಬುದ್ಧ ಸ್ಥಾಪಿಸಿದ ಧರ್ಮ ದೇವರಿಲ್ಲದ ಧರ್ಮವಾಗಿತ್ತು. ದೇವರ ಮೇಲಿನ ನಂಬಿಕೆ ಧರ್ಮಕ್ಕೆ ಅನಿವಾರ್ಯವಾದುದೇನಲ್ಲ. ಕಣ್ಣಮುಂದೆ ದುಃಖ ಭರಿತವಾದ ಜಗತ್ತಿರುವಾಗ ಅದನ್ನು ನಿರ್ಲಕ್ಷಿಸಿ ದೇವರನ್ನು ಕುರಿತು ಯೋಚಿಸುವುದು ನಿಷ್ಪ್ರಯೋಜಕ ಎಂದು ಬುದ್ಧ ಹೇಳಿದ. ದೇವರು, ಗುರು, ಶಾಸ್ತ್ರ, ಇತ್ಯಾದಿಗಳ ನೆರವಿಲ್ಲದೆ ಮನುಷ್ಯ ತನ್ನ ಬಿಡುಗಡೆಯ ದಾರಿ ಕಂಡುಕೊಳ್ಳಬಲ್ಲ ಎಂದು ಜಗತ್ತಿನ ಇತಿಹಾಸದಲ್ಲಿ ಮೊಟ್ಟ ಮೊದಲು ಹೇಳಿದವನು ಬುದ್ಧ. ಮಾನವರೆಲ್ಲ ಸಮಾನರು ಎಂದು ಜಗತ್ತಿನ ಚರಿತ್ರೆಯಲ್ಲಿ ಮೊಟ್ಟ ಮೊದಲು ಸಾರಿದವನು ಬುದ್ಧ. ನಮ್ಮ ರಾಷ್ಟ್ರಕವಿ ಡಾ.ಜಿ.ಎಸ್.ಶಿವರುದ್ರಪ್ಪ ಅವರು ಹೇಳಿರುವ ಈ ಮಾತುಗಳ ಹಿನ್ನೆಲೆಯಲ್ಲಿ ನಾವು ಬುದ್ಧನನ್ನು ಅರಿಯಬೇಕು. ಜಗತ್ತು ಬುದ್ಧನಂತಾಗಬೇಕು. ಜಗದೊಡನೆ ಬುದ್ಧ ಯಾವತ್ತೂ ಇದ್ದೇ ಇರುತ್ತಾನೆ. ಬುದ್ಧಶಕ್ತಿ ಹಾಗೂ ಬುದ್ಧಬೆಳಕು ಅಂಥದ್ದು! ಜೀವನ ಮೌಲ್ಯಗಳನ್ನು ಇಡೀ ಜಗತ್ತಿಗೆ ಸಾರಿದ ಬುದ್ಧನ ಅರಿವು ಜಗತ್ತನ್ನು ಜಾಗೃತಿಗೊಳಿಸುವುದೇ ಬುದ್ಧ ಪ್ರಜ್ಞೆ.

ಬುದ್ಧ ಆಗಲೂ ಇದ್ದ
ಈಗಲೂ ಇದ್ದಾನೆ;
ಕರುಣಾಳುಗಳ ಎದೆಗಡಲಲ್ಲಿ
ಕಾರುಣ್ಯದ ನದಿಯಾಗಿ
ತಣ್ಣಗೆ ಹರಿಯುತ್ತಿದ್ದಾನೆ
ಅಹಿಂಸೆಯ
ಹೂವರಳಿಸುವವರ
ಹೂ ಮನದಲ್ಲಿ
ದೇವ ಮಲ್ಲಿಗೆಯಾಗಿ
ನಗುತ್ತಿದ್ದಾನೆ.

ಸುಮಾರು ಎರಡೂವರೆ ಸಾವಿರ ವರ್ಷಗಳ ಹಿಂದೆಯೇ ಭರತ ಖಂಡದಲ್ಲಿ ಜನ್ಮ ತಳೆದ ಬೌದ್ಧ ಧರ್ಮ ಇವತ್ತಿಗೂ ಜಗತ್ತಿನ ಪ್ರಮುಖ ಧರ್ಮಗಳಲ್ಲೊಂದಾಗಿದೆ. ಸರ್ವರಲ್ಲೂ ಲೇಸನ್ನೇ ಬಯಸುವ ಬೌದ್ಧಧರ್ಮ ಲೋಕಪ್ರಿಯ. ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು ಎಂಬ ಮಾನವಧರ್ಮವನ್ನು ಪ್ರತಿಪಾದಿಸುವ ಸಮಾಜವಾದದ ಬೆಳಕಿನ ಜೀವಧಾತು ಬೇರುಗಳು ಬೌದ್ಧಧರ್ಮದಲ್ಲುಂಟು. ಹಾಗಾಗಿ ಬೌದ್ಧಧರ್ಮ ಬಹು ಆಕರ್ಷಣೀಯ. ಇದರ ಪ್ರವರ್ತಕ ಬುದ್ಧದೇವನೂ ಅಷ್ಟೇ ಲೋಕಮಾನ್ಯ.

ಬುದ್ಧ ಪೂರ್ಣಿಮೆಯ ಮಹತ್ವ: ಬುದ್ಧ ಜನಿಸಿದ್ದು ಲುಂಬಿಣಿ ಎಂಬ ವನದ ಶಾಲ ವೃಕ್ಷದ ಕೆಳಗೆ. ಅಂದು ವೈಶಾಖ ಮಾಸದ ಶುದ್ಧ ಹುಣ್ಣಿಮೆ. ಆಶ್ಚರ್ಯವೆಂದರೆ ಅವನು ಬೋಧಿ ವೃಕ್ಷದ ಕೆಳಗೆ ಭವ್ಯ ತಪಸ್ಸು ಕೈಗೊಂಡು ದಿವ್ಯಜ್ಞಾನ ಪಡೆದದ್ದು ಸಹ ವೈಶಾಖ ಮಾಸದ ಶುದ್ಧ ಹುಣ್ಣಿಮೆಯಂದೇ. ಇನ್ನೂ ಆಶ್ಚರ್ಯವೆಂದರೆ ಅವನು ಮಹಾ ಪರಿನಿರ್ವಾಣ ಹೊಂದಿದ್ದು ಕೂಡ ಎರಡು ವೃಕ್ಷಗಳ ಕೆಳಗೆ.ಅಂದೂ ಸಹ ವೈಶಾಖ ಮಾಸದ ಶುದ್ಧ ಹುಣ್ಣಿಮೆ. ವೃಕ್ಷಕ್ಕೂ, ಹುಣ್ಣಿಮೆಗೂ, ಬುದ್ಧನಿಗೂ ಬಹಳ ನಂಟು. ಹೀಗೆ ಬುದ್ಧ ಜನನವಾದದ್ದು, ಬುದ್ಧ ಜ್ಞಾನಿಯಾದದ್ದು, ಬುದ್ಧ ಮಹಾ ಪರಿನಿರ್ವಾಣ ಹೊಂದಿದ್ದು ಈ ಮೂರೂ ಪ್ರಮುಖ ಘಟನೆಗಳೂ ಬುದ್ಧನ ಜೀವನದಲ್ಲಿ ವೈಶಾಖ ಮಾಸದ ಶುದ್ಧ ಹುಣ್ಣಿಮೆಯಂದೇ ಘಟಿಸಿರುವುದರಿಂದ ಅದು ಬುದ್ಧ ಪೂರ್ಣಿಮೆಯಾಗಿಯೇ ಪ್ರಸಿದ್ಧಿ. ಈ ದಿನ ಅತ್ಯಂತ ವಿಶಿಷ್ಟವಾದದ್ದು ಅದರಲ್ಲೂ ವಿಶೇಷವಾಗಿ ಬೌದ್ಧ ಧರ್ಮೀಯರಿಗೆ ಮಹಾ ಪವಿತ್ರದಿನ. ಇದನ್ನು ಬುದ್ಧ ಜಯಂತಿಯ ಮಹಾಹಬ್ಬವಾಗಿ ಬಹಳ ಶ್ರದ್ಧಾಭಕ್ತಿಗಳಿಂದ ಜಗತ್ತಿನಾದ್ಯಂತ ಆಚರಿಸಲಾಗುತ್ತದೆ.

ಆಚರಣೆಯ ವಿಧಾನ: ಬುದ್ಧ ಪೂರ್ಣಿಮೆಯ ಪೂಜ್ಯ ದಿನದಂದು ಬೌದ್ಧರು ಮುಂಜಾನೆ ಸ್ನಾನ ಮಾಡಿ ಶ್ವೇತ ವಸ್ತ್ರಧರಿಸಿ ಬೌದ್ಧ ವಿಹಾರದಲ್ಲಿ ಸಂಗಮಗೊಳ್ಳುತ್ತಾರೆ. ಅಲ್ಲಿ ಬುದ್ಧನ ಬದುಕು, ಬುದ್ಧೋಪದೇಶ, ಬುದ್ಧ ತತ್ವಾದರ್ಶಗಳೆಲ್ಲದರ ಚಿಂತನ-ಮಂಥನ ನಡೆಸುತ್ತಾರೆ. ಕೊಲೆ ಮಾಡುವುದಿಲ್ಲ, ಕಳ್ಳತನ ಮಾಡುವುದಿಲ್ಲ, ಮದ್ಯಪಾನ ಮಾಡುವುದಿಲ್ಲ, ವ್ಯಭಿಚಾರ ಮಾಡುವುದಿಲ್ಲ, ಸುಳ್ಳು ನುಡಿಯುವುದಿಲ್ಲ ಎಂಬ ಬುದ್ಧನ ಪಂಚಶೀಲ ತತ್ವಗಳ ಪ್ರತಿಜ್ಞೆ ಮಾಡುತ್ತಾರೆ. ಅಂದು ಮನೆಗಳನ್ನು ಶುದ್ಧ ಮನದಿಂದ ಸ್ವಚ್ಛಗೊಳಿಸಿ ಅಲಂಕರಿಸಿ ಗೋಡೆಗಳ ಮೇಲೆ ಬುದ್ಧನ ಜಾತಕ ಕಥೆಗಳನ್ನು ಹೇಳುವ ಚಿತ್ರಗಳನ್ನು ಬಿಡಿಸಿ ತೂಗು ಹಾಕುತ್ತಾರೆ. ಪಾಯಸದಂತಹ ಸಿಹಿ ಅಡುಗೆ ಮಾಡಿ ತಾವೂ ಉಂಡು ಇತರರಿಗೂ ಉಣಿಸಿ ವಿಶೇಷವಾಗಿ ಬಡಬಗ್ಗರಿಗೆ, ದೀನದಲಿತರಿಗೆ ಬಡಿಸಿ ಬುದ್ಧನ ಹೆಸರಿನ ಹಬ್ಬದ ಸಂತಸವನ್ನು ಹಂಚಿಕೊಳ್ಳುತ್ತಾರೆ. ಬೋಧಿವೃಕ್ಷದ ಕೆಳಗೆ ಬುದ್ಧನಿಗೆ ಜ್ಞಾನೋದಯವಾದ ಕಾರಣ ಅಂದು ಬೋಧಿ ವೃಕ್ಷವನ್ನು ಭಕ್ತಿಯಿಂದ ಪೂಜಿಸುತ್ತಾರೆ.

ಬುದ್ಧನೆಂದರೆ: ಬುದ್ಧ ಎಂಬುದು ಬುದ್ಧನ ಹುಟ್ಟು ಹೆಸರಲ್ಲ. ಹಲವು ಜನ್ಮಗಳ ತಪಸ್ಸಾಧನೆಯಿಂದ ಅವನು ಪಡೆದ ಮಹಾಸ್ಥಾನ ಅದು. ಬುದ್ಧ ಎಂದರೆ ಶ್ರೇಷ್ಠ ಜ್ಞಾನಿ. ಜ್ಞಾನದ ಮಹಾಬೆಳಕನ್ನು ಕಂಡವನು ಎಂದರ್ಥ. ಬುದ್ಧ ಎಂದರೆ ಸ್ವಪ್ರಯತ್ನ, ಸ್ವಶಕ್ತಿಯಿಂದ ತಮ್ಮ ಅಂತಃಶಕ್ತಿಯ ಸತ್ವದಿಂದಲೇ ಶ್ರೇಷ್ಠ ಜ್ಞಾನಗಳಿಸಿ ಎಲ್ಲರ ಹಿತಕ್ಕಾಗಿ, ಎಲ್ಲರ ನೆಮ್ಮದಿಗಾಗಿ ಅಪಾರ ಕರುಣೆಯಿಂದ ಆ ಜ್ಞಾನವನ್ನು ಜನರಿಗೆ ತಿಳಿಸಿದವನು ಎಂದರ್ಥ.ಸತ್ಯದ ಸ್ವರೂಪವನ್ನು ಅರಿತವನು ಎಂಬ ಅರ್ಥದಲ್ಲಿ ಬುದ್ಧನನ್ನು 'ತಥಾಗತ' ಎಂಬುದಾಗಿಯೂ ಕರೆಯಲ್ಪಡಲಾಗಿದೆ.

ಬುದ್ಧನ ಹುಟ್ಟು ಹೆಸರು ಸಿದ್ಧಾರ್ಥ, ತಂದೆ ಹಿಮಾಲಯದ ತಪ್ಪಲಿನಲ್ಲಿದ್ದ ಕಪಿಲವಸ್ತು ಎಂಬ ಪಟ್ಟಣದ ಗೌತಮ ಕುಲದ, ಶಾಕ್ಯವಂಶದ ಮಹಾರಾಜ ಶುದ್ಧೋದನ. ತಾಯಿ ಮಹಾ ಸಾಧ್ವೀಮಣಿ ಮಹಾಮಾಯಾದೇವಿ. ಜನನ ಕ್ರಿ.ಪೂ. 563ನೇ ವರ್ಷ. ಸಿದ್ಧಾರ್ಥ ಇನ್ನೂ ತಾಯಿ ಗರ್ಭದಲ್ಲಿದ್ದಾಗ ತಾಯಿ ಮಾಯಾದೇವಿ ತವರು ಮನೆಗೆ ಹೊರಟಿದ್ದಳು. ಮಾರ್ಗದಲ್ಲಿ ಆಕೆ ಲುಂಬಿಣಿ ಎಂಬ ವನವನ್ನು ತಲುಪಿದಾಗ ಆಯಾಸಗೊಂಡು ಸಖಿಯರ ಸಲಹೆಯಂತೆ ಅಲ್ಲೇ ಇದ್ದ ಒಂದು ಶಾಲ ವೃಕ್ಷದ ಕೆಳಗೆ ವಿಶ್ರಮಿಸಿಕೊಳ್ಳತೊಡಗುತ್ತಾಳೆ. ಆಗಲೇ ಸಿದ್ಧಾರ್ಥ ಆ ಮರದ ಕೆಳಗೆಯೇ ಜನಿಸಿದ. ಅಂದು ವೈಶಾಖ ಶುದ್ಧ ಪೂರ್ಣಿಮೆ. ಬೆಳದಿಂಗಳಿನಂಥ ಸಿದ್ಧಾರ್ಥ ಜನಿಸಿದ ಆ ಕ್ಷಣ ಇಡೀ ಪ್ರಪಂಚವೇ ಬೆಳ್ಳಂಬೆಳಕಾಗಿ ಆನಂದಗೊಂಡಿತ್ತು. ಎಲ್ಲೆಲ್ಲೂ ಶಾಂತಿ ಪ್ರಸರಿಸಿ ಎಲ್ಲೆಡೆ ಬೆಳಕು ಪ್ರವಹಿಸಿತ್ತು. ತಾಯಿ ಮಾಯಾದೇವಿಗಂತೂ ಮಹದಾನಂದವಾಗಿ ಅಂದು ಮಗುವನ್ನು ಎದೆಗಪ್ಪಿಕೊಂಡರೆ ನಂತರದ ದಿನಗಳಲ್ಲಿ ಆ ಮಗುವೇ ಇಡೀ ಜಗತ್ತನ್ನು ಅಪ್ಪಿಕೊಂಡು ಬಿಟ್ಟಿತ್ತು.

ಹುಟ್ಟುತ್ತಿದ್ದಂತೆಯೇ ಜಗತ್ತಿಗೆ ಶುಭ ಸೂಚಕಗಳನ್ನು ಹೊತ್ತು ತಂದ ಇಂಥ ಪುಣ್ಯ ಶಿಶುವನ್ನು ನೋಡಲು ಜಾತ್ರೆಯೋಪಾದಿಯಲ್ಲಿ ಜನರು ಬಂದರು. ಮಹಾರಾಜ ಶುದ್ಧೋದನನಂತೂ ತನ್ನ ಏಕಮಾತ್ರ ಸುಪುತ್ರ ಸಿದ್ಧಾರ್ಥನನ್ನು ಕಂಡು ಅತಿಶಯವಾದ ಆನಂದದಿಂದ ಉಬ್ಬಿಹೋಗಿದ್ದ. ಕೂಡಲೇ ಸಾಮುದ್ರಿಕಾ ಶಾಸ್ತ್ರವನ್ನು ಅರಿತಿದ್ದ ಆಸಿಕ ಎಂಬ ಋಷಿಯನ್ನು ಕರೆಸಿ ಪುತ್ರನ ಜಾತಕವನ್ನೂ ವಿಚಾರಿಸಿದ. ಕೂಲಂಕಷವಾಗಿ ಪರಿಶೀಲಿಸಿದ ಆಸಿಕ ಋಷಿ ನಿಮ್ಮ ಮಗ ಪ್ರಪಂಚಕ್ಕೇ ದೊಡ್ಡ ಚಕ್ರವರ್ತಿಯಾಗುತ್ತಾನೆ. ಇಲ್ಲವೇ ಸಕಲ ಜೀವರಾಶಿಗಳಿಗೆ ಲೇಸನ್ನು ಬಯಸುವ ಸರ್ವರ ಸುಖಕ್ಕೆ ಕಾರಣವಾಗುವಂತಹ ಧರ್ಮ ಚಕ್ರವರ್ತಿಯಾಗುತ್ತಾನೆ ಎಂದು ಹೇಳಿದಾಗ ಶುದ್ಧೋದನ ಮಹಾರಾಜನು ತನ್ನ ಮಗ ಭೂಚಕ್ರವರ್ತಿಯಾಗಬೇಕೇ ಹೊರತು ಧರ್ಮಚಕ್ರವರ್ತಿ ಆಗಬಾರದೆಂದು ಮನಸ್ಸಿನಲ್ಲೇ ನಿರ್ಧರಿಸಿಕೊಂಡು ಅದರಂತೆ ಮಗನನ್ನು ತಯಾರು ಮಾಡಲು ಸಿದ್ಧತೆ ನಡೆಸುತ್ತರಾದರೂ ಮಗ ಸಿದ್ಧಾರ್ಥ ಬುದ್ಧನಾಗುವುದನ್ನು ತಡೆಯಲಾಗುವುದಿಲ್ಲ. ದುರಂತವೆಂದರೆ ಸಿದ್ಧಾರ್ಥ ಜನಿಸಿದ ಏಳು ದಿನಗಳಲ್ಲೇ ತಾಯಿ ಮಾಯಾದೇವಿ ತೀರಿಕೊಂಡಳು. ಮುಂದೆ ಮಗು ಸಿದ್ಧಾರ್ಥ ತನ್ನ ತಾಯಿಯ ತಂಗಿಯಾದ ಚಿಕ್ಕಮ್ಮ ಪ್ರಜಾಪತಿಯ ಪೋಷಣೆಯಲ್ಲಿ ಬೆಳೆದು ರಾಜಾರ್ಹತೆಯ ಸಕಲ ವಿದ್ಯೆಗಳನ್ನೂ ಕಲಿತು ಪ್ರಾಯವಂತನಾಗುತ್ತಾನೆ.

ಹದಿನಾರು ವರ್ಷ ತುಂಬುತ್ತಿದ್ದಂತೆಯೇ ಮಗ ಸಿದ್ಧಾರ್ಥನಿಗೆ ಕೋಲಿರಾಜನ ಮಗಳಾದ ಚೆಲುವೆ ಯಶೋಧರಾಳನ್ನು ತಂದು ಶುದ್ಧೋದನ ಮಹಾರಾಜ ವಿವಾಹ ಮಾಡಿ ಮಗ ಸಿದ್ಧಾರ್ಥನನ್ನು ಸಂಸಾರ ಬಂಧನಕ್ಕೆ ಸಿಲುಕಿಸಿದ. ಕೆಲ ಕಾಲಾನಂತರ ಯಶೋಧರೆಗೆ ಒಂದು ಮುದ್ದಾದ ಗಂಡು ಮಗು ಜನಿಸಿದಾಗ ಅದಕ್ಕೆ 'ರಾಹುಲ' ಎಂದು ನಾಮಕರಣ ಮಾಡಲಾಯಿತು.ರಾಹುಲ ಎಂದರೆ ಪಾಳಿ ಭಾಷೆಯಲ್ಲಿ ಬಂಧನ ಅಥವಾ ಕಟ್ಟು ಎಂದರ್ಥ. ಎಲ್ಲಿ ತನ್ನ ಏಕಮಾತ್ರ ಪುತ್ರ ಭೂಚಕ್ರವರ್ತಿಯಾಗದೆ ಧರ್ಮಚಕ್ರವರ್ತಿಯಾಗಿಬಿಡುತ್ತಾನೋ ಎಂಬ ಆತಂಕದಲ್ಲಿದ್ದ ಶುದ್ಧೋದನ ಮಹಾರಾಜ ಮಗ ಸಿದ್ಧಾರ್ಥನಿಗೆ ಜಗತ್ತಿನ ಕಷ್ಟ-ಕಾರ್ಪಣ್ಯಗಳು ಕಣ್ಣಿಗೆ ಬೀಳದಂತೆ ಎಚ್ಚರವಹಿಸಿ ಪ್ರೀತಿ ಪ್ರೇಮಗಳು ಹಾಗೂ ಭೋಗ ಭಾಗ್ಯಗಳ ಸಿರಿ ಸುಪ್ಪತ್ತಿಗೆಯ ನಡುವೆ ಸುಖ ಸಂಪತ್ತಿನಲ್ಲಿ ಅರಮನೆಯಲ್ಲೇ ಇರಲು ಸಕಲ ವ್ಯವಸ್ಥೆ ಮಾಡಿದ್ದ. ಆದರೆ ಇದಾವ ಸುಖ ಭೋಗಗಳಲ್ಲೂ ಸಿದ್ಧಾರ್ಥನಿಗೆ ಆಸಕ್ತಿ ಇರಲಿಲ್ಲ. ಮತ್ತಾವುದೋ ಲೋಕದತ್ತ ಅವನ ಮನಸ್ಸು ಸೆಳೆಯುತ್ತಿತ್ತು.

ಸಿದ್ಧಾರ್ಥ ಬುದ್ಧನಾದ: ಒಮ್ಮೆ ತನ್ನ ಆಪ್ತ ಸಹಾಯಕ ಚೆನ್ನನೊಡನೆ ನಗರ ವೀಕ್ಷಣೆಗೆ ಹೊರಟ ಸಿದ್ಧಾರ್ಥ ಬೇರೆ ಬೇರೆ ದಿನಗಳಲ್ಲಿ ಓರ್ವ ಹಣ್ಣು ಹಣ್ಣು ಮುದುಕ, ಒಬ್ಬ ರೋಗಿ ಹಾಗೂ ಒಂದು ಹೆಣವನ್ನು ಕಂಡಾಗ ಮನುಷ್ಯನ ಹುಟ್ಟು-ಸಾವು, ಜೀವನದ ಬಗ್ಗೆ ಗಾಢವಾಗಿ ಚಿಂತಿಸಿದ. ಮನಸ್ಸು ವಿಚಲಿತಗೊಂಡು ಇದರ ಬಗೆಯಾಗಿಯೇ ಬಹಳ ಬಹಳ ಚಿಂತನ-ಮಂಥನ ನಡೆಸಿದ. ಮನಸ್ಸು ಮತ್ತಷ್ಟು ಕದಡಿತು. ಮತ್ತೊಂದು ದಿನ ತೇಜೋಮಯ ಸನ್ಯಾಸಿಯೊಬ್ಬನನ್ನು ಸಿದ್ಧಾರ್ಥ ನೋಡಿದ. ಆ ಕ್ಷಣವೇ ಅವನಿಗೆ ವೈರಾಗ್ಯ ಮೂಡಿತು. ತಾನೂ ಅವನಂತಾಗಬೇಕೆಂದು ದೃಢ ನಿರ್ಧಾರ ಮಾಡಿದ. ಸಿದ್ಧಾರ್ಥ ರಾಹುಲನ ತಂದೆಯಾದ ಕಾರಣಕ್ಕೆ ಅರಮನೆಯಲ್ಲಿ ಒಂದು ಕಡೆ ಪುತ್ರ ಜನ್ಮೋತ್ಸವ ನಡೆಯುತ್ತಿದ್ದರೆ ಮತ್ತೊಂದು ಕಡೆ ಸಿದ್ಧಾರ್ಥನ ಮನಸ್ಸಿನಲ್ಲಿ ವೈರಾಗ್ಯೋತ್ಸವ ನಡೆಯುತ್ತಿತ್ತು.

ಅದೊಂದು ದಿನ ಜಗವೆಲ್ಲಾ ಮಲಗಿರಲು ಅವನೊಬ್ಬನೆದ್ದ. ಎದ್ದವನು ಎಲ್ಲಾ ಭೋಗ-ಭಾಗ್ಯಗಳನ್ನೂ ತೊರೆದು, ಪ್ರೇಮದ ಪತ್ನೀ ಪುತ್ರರನ್ನೂ ಬಿಟ್ಟು ಇಡೀ ರಾಜ್ಯವನ್ನು ತೃಣ ಸಮಾನವಾಗಿ ಭಾವಿಸಿ, ತಾನು ಸನ್ಯಾಸಿಯಾದ ಸುದ್ದಿಯನ್ನು ತನ್ನ ತಂದೆಗೆ ತಿಳಿಸಲು ಸೇವಕ ಚೆನ್ನನಿಗೆ ಹೇಳಿ ಸಿದ್ಧಾರ್ಥ ಹೊರಟೇಬಿಟ್ಟ.ತನ್ನ ಮೆಚ್ಚಿನ ಕುದುರೆ ಕಂಟಕನ ಮೇಲೆ. ಮುಂದೆ ಸಿದ್ಧಾರ್ಥ, ಹಿಂದೆ ಚೆನ್ನ. ಕಣ್ತುಂಬ ಜಗದ ಕಲ್ಯಾಣವೇ ತುಂಬಿ ತುಳುಕಿತ್ತು. ಗುರಿ ಯಾವುದೋ ಮಹಾ ಬೆಳಕನ್ನು ಅರಸುತ್ತಾ ಸಾಗಿತ್ತು. ಸಿದ್ಧಾರ್ಥ ಕಾಡುಮೇಡುಗಳೆನ್ನದೆ ಹಲವಾರು ವರ್ಷಗಳ ಕಾಲ ಚಿಂತನಶೀಲನಾಗಿ, ಸತ್ಯಶೋಧಕನಾಗಿ ತನ್ನ ಗುರಿ ಸಾಧಿಸಲು ಅಲೆದಾಡಿದ. ಆದರೆ ತನ್ನೊಳಗೆ ಉದ್ಭವಿಸಿದ್ದ ಪ್ರಶ್ನೆಗಳಿಗೆ ಉತ್ತರ ಸಿಗಲಿಲ್ಲ. ಆದರೆ ಹಠ ಬಿಡದ ಸಿದ್ಧಾರ್ಥ ಗಯಾದ ಬಳಿ ಬೋಧಿ ವೃಕ್ಷದಡಿ ಕುಳಿತು ದಿವ್ಯ ತಪಸ್ಸು ಕೈಗೊಂಡ. 'ಜ್ಞಾನದ ಬೆಳಕು ಕಾಣದೆ ಎದ್ದೇಳುವುದಿಲ್ಲ' ಎಂದು ಪ್ರತಿಜ್ಞೆಗೈದ. ಅವನ ದೃಢ ಸಂಕಲ್ಪ ಫಲ ನೀಡಿತು. 35ನೇ ವಯಸ್ಸಿನಲ್ಲಿ (ಕ್ರಿ.ಪೂ. 528) ಗಯಾ ಬಳಿ ಬೋಧಿ ವೃಕ್ಷದಡಿಯಲ್ಲಿ ತಪೋನಿರತ ಸಿದ್ಧಾರ್ಥನಿಗೆ ವೈಶಾಖ ಶುಕ್ಲ ಪೂರ್ಣಿಮೆಯಂದು ಜ್ಞಾನೋದಯವಾಗಿ ಬುದ್ಧನಾದ. ಆನಂತರ ಧರ್ಮೋಪದೇಶಕ್ಕೆ, ಧರ್ಮಚಕ್ರ ಪ್ರವರ್ತನೆಗೆ ಹೊರಟ.

ಜ್ಞಾನದ ಮೇರು ಪರ್ವತವಾದ ಬುದ್ಧ ಆಷಾಡ ಹುಣ್ಣಿಮೆಯ ದಿನದಂದು ಕಾಶಿ ಬಳಿಯ ಜಿಂಕೆ ವನಕ್ಕೆ ಬಂದ. ಈಗ ಅದನ್ನು ಸಾರನಾಥ ಎನ್ನುತ್ತಾರೆ. ಜ್ಞಾನಸಿಂಧುವಾದ ಬುದ್ಧ ಪ್ರಪ್ರಥಮವಾಗಿ ಇಲ್ಲಿ ಉಪದೇಶ ಮಾಡಿದ. ಅನಂತರ ತಮ್ಮ ಶಿಷ್ಯರೊಡಗೂಡಿ ದೇಶಾದ್ಯಂತ, ಜಗದಾದ್ಯಂತ ಸಂಚರಿಸುತ್ತಾ ತಾನು ಕಂಡ ಜ್ಞಾನದ ಸಿಹಿಯನ್ನು ಬೋಧನೆಯ ಮೂಲಕ ಎಲ್ಲರಿಗೂ ಹಂಚಿದ.ಸುಮಾರು ನಲವತ್ತೈದು ವರ್ಷಗಳ ಕಾಲ ಬೋಧನೆಗಳನ್ನು ನಿರಂತರವಾಗಿ ಮಾಡಿದ ಭಗವಾನ್ ಬುದ್ಧ ಜಗದ ಕಣ್ಣಾದ. ಅವನು ಬೋಧಿಸಿದ ಬೌದ್ಧ ತತ್ವ, ಬೌದ್ಧ ಮತ ವಿಶ್ವದೆಲ್ಲೆಡೆ ಹರಡಿತು. ಬೌದ್ಧ ಮತದ ಅನುಯಾಯಿಗಳನ್ನು ಬೌದ್ಧರು ಎಂದು ಕರೆಯಲಾಗುತ್ತದೆ. ಭಗವಾನ್ ಬುದ್ಧ ಅಜ್ಞಾನವನ್ನು ದೂರ ಸರಿಸಿ ಮೈತ್ರಿ ಮತ್ತು ಕರುಣೆಗಳನ್ನು ಬೆಳೆಸುವ ತಾವು ಬೋಧಿಸಿದ ಧರ್ಮದ ಸಾರವನ್ನೆಲ್ಲಾ ಈ ಒಂದು ಪದ್ಯದಲ್ಲಿ ಹಿಡಿದಿಟ್ಟು ಹೀಗೆ ಹೇಳಿದ್ದಾರೆ –

"ಸಬ್ಬ ಪಾಪಸ್ಸಅಕರಣಂ।
ಕುಸಲಸ್ಸಉಪಸಂಪದಾ॥
ಸಚಿತ್ತ ಪರಿಯೋದ ಪರನಂ।
ಏತಂ ಬುದ್ಧಾನುಸಾಸನಂ॥"

ಈ ಪದ್ಯವು ಪಾಳಿ ಭಾಷೆಯಲ್ಲಿದೆ. ಇದರ ಅರ್ಥ ಯಾವ ಪಾಪವನ್ನೂ ಮಾಡದಿರುವುದು, ಕುಶಲವನ್ನು ಸಂಪಾದಿಸುವುದು, ಚಿತ್ತವನ್ನು ಶುದ್ಧಿಗೊಳಿಸುವುದು, ಇದೇ ಬುದ್ಧನ ಶಾಸನ. 'ಧಮ್ಮಪದ' ಎಂಬ ಗ್ರಂಥದಲ್ಲಿ 26 ವರ್ಗ ಮತ್ತು ಮೇಲಿನ ಪದ್ಯದಂಥ 423 ಪದ್ಯಗಳು ಸಂಗ್ರಹಿಸಲ್ಪಟ್ಟಿವೆ. ವೈದಿಕ ಧರ್ಮದಲ್ಲಿ ಗೀತೆ ಹೇಗೋ ಬೌದ್ಧ ಧರ್ಮದಲ್ಲಿ 'ಧಮ್ಮಪದ' ಹಾಗೆ. ಬೌದ್ಧ ಧರ್ಮವನ್ನು ಅರಿತುಕೊಳ್ಳಲು ಧಮ್ಮ ಪದವೊಂದೇ ಸಾಕು. ಮಾನವನನ್ನು ಕತ್ತಲಿಂದ ಬೆಳಕಿನತ್ತ ನಡೆಸುವ ಜ್ಞಾನ ದೀಪವಿದು. ಬುದ್ಧನ ಹಿಂದಿನ ಜನ್ಮಗಳನ್ನು 'ಬೋಧಿಸತ್ವ' ಎನ್ನುತ್ತಾರೆ. ಮುಂದೆ ಬುದ್ಧ ಭಗವಾನ್ ಆದ. ಸಿದ್ಧಾರ್ಥ ಗೌತಮನೂ ಅನೇಕ ಬೋಧಿಸತ್ವ ಜನ್ಮಗಳನ್ನೆತ್ತಿದ್ದ. ಇಂತಹ 547 ಕಥೆಗಳು 'ತ್ರಿಪಿಟಕ'ದಲ್ಲಿವೆ. ಅವನ್ನು 'ಬುದ್ಧನ ಜಾತಕ ಕಥೆಗಳು' ಎನ್ನುತ್ತಾರೆ.ಇದು ಪಾಳಿ ಭಾಷೆಯಲ್ಲಿದ್ದು ಇದರ ಮೂರು ಭಾಗಗಳೇ ಒಂದನೆಯದು ಸುತ್ತ ಪಿಟಕ, ಎರಡನೆಯದು ವಿನಯ ಪಿಟಕ, ಮೂರನೆಯದು ಅಭಿಧರ್ಮ ಪಿಟಕ.

'ಬಹುಜನ ಹಿತಾಯ ಬಹುಜನ ಸುಖಾಯ' ಇದು ಬುದ್ಧ ದೇವನ ಮಹಾವಾಕ್ಯ. ಜಗತ್ತನ್ನು ಬೆಳಕಿನತ್ತ ಕೊಂಡೊಯ್ಯಲು ತಾವು ಬದುಕಿರುವವರೆಗೂ ಅಂದಿನ ಬಹುಜನರ ಭಾಷೆ ಪಾಳಿಯಲ್ಲೇ ಧರ್ಮ ಪ್ರಚಾರ ಮಾಡಿ ಜನಮನ ಸ್ಪರ್ಶಿಸಿ ಬುದ್ಧ ತನ್ನ 80ನೇ ವಯಸ್ಸಿನಲ್ಲಿ ಉತ್ತರ ಪ್ರದೇಶದ ಕುಶೀನಗರದಲ್ಲಿ ಕ್ರಿ.ಪೂ.483 ರಲ್ಲಿ ವೈಶಾಖ ಪೂರ್ಣಿಮೆಯಂದು ಮಹಾಪರಿನಿರ್ವಾಣ ಹೊಂದಿದರು.ಹೀಗೆ ತಮ್ಮ ಉಜ್ವಲ ಧ್ಯೇಯೋದ್ದೇಶ, ಪ್ರಜ್ವಲ ತತ್ವಾದರ್ಶಗಳಿಂದ, ಶೋಧನೆ-ಬೋಧನೆಗಳ ಮೂಲಕ 'ಸರ್ವೇಜನೋಸುಖಿನೋಭವಂತು' ಎಂಬಂತೆ ಎಲ್ಲರ ಮನಸ್ಸುಗಳನ್ನು ಗೆದ್ದ ಬುದ್ಧ ನಿತ್ಯ ಸ್ಮರಣೀಯ. ಬುದ್ಧನಂಥ ಮಹಾತ್ಮನನ್ನು ಪಡೆದ ಭಾರತ ಮಾತ್ರವಲ್ಲ ಇಡೀ ವಿಶ್ವವೇ ಧನ್ಯಾತಿ ಧನ್ಯ, ಪುಣ್ಯಾತಿ ಪುಣ್ಯ.

ಸಾಂಕ್ರಾಮಿಕ ರೋಗಗಳು ಹರಡದಂತೆ ಮಾರ್ಗಸೂಚಿ ಬಿಡುಗಡೆ

ಮೈಸೂರು, ಮೇ 22-ಮೈಸೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಕಾಲರಾ ರೋಗವು ಪತ್ತೆಯಾಗಿದ್ದು, ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಾಂಕ್ರಾಮಿಕ ರೋಗಗಳು ಹರಡದಂತೆ ಸರ್ಕಾರದ ಮಾರ್ಗಸೂಚಿಗಳನ್ನು ಅನುಸರಿಸಲು ಸೂಚಿಸಲಾಗಿದೆ.

ಸಾರ್ವಜನಿಕ ನೀರಿನ ಕೊಳಾಯಿ ಮತ್ತು ಕುಡಿಯುವ ನೀರನ್ನು ಸಂಗ್ರಹಿಸುವ ಸ್ಥಳವನ್ನು ಸ್ವಚ್ಛವಾಗಿಡುವುದು, ಕುದಿಸಿ ಆರಿಸಿದ ನೀರನ್ನೇ ಕುಡಿಯುವುದು, ಶುದ್ಧ ನೀರಿನ ಘಟಕದಲ್ಲಿನ ನೀರನ್ನು ಉಪಯೋಗಿಸುವುದು, ಹೋಟೆಲ್‌ಗಳಲ್ಲಿ ಕಡ್ಡಾಯವಾಗಿ ಕುಡಿಯಲು ಬಿಸಿನೀರನ್ನು ಗ್ರಾಹಕರಿಗೆ ನೀಡುವುದು, ರಸ್ತೆ ಬದಿಯಲ್ಲಿ ಮಾರಾಟ ಮಾಡುವ ತಂಪು ಪಾನೀಯ ಮತ್ತು ಸೋಡಾಗಳನ್ನು, ಸಾರ್ವಜನಿಕರು ಸಾಧ್ಯವಾದಷ್ಟು ಜಾಗೃತೆಯಿಂದ ಉಪಯೋಗಿಸುವುದು, ಊಟ ಮಾಡುವ ಮುನ್ನ ಕೈಗಳನ್ನು ಸಾಬೂನು ಮತ್ತು ನೀರಿನಿಂದ ಸ್ವಚ್ಛಗೊಳಿಸಬೇಕು. ಹೋಟೆಲ್ ಅಥವಾ ರೆಸ್ಟೋರೆಂಟ್ ಅಥವಾ ಬೇಕರಿಗಳಲ್ಲಿ ಬಿಸಿಯಾದ ಆಹಾರ ಪದಾರ್ಥಗಳನ್ನ ಗ್ರಾಹಕರಿಗೆ ನೀಡುವುದು ಮತ್ತು ತಿಂಡಿ ತಿನಿಸು ಮಾರಾಟ ಮಾಡುವ ಎಲ್ಲಾ ವ್ಯಾಪಾರಸ್ಥರು ಮತ್ತು ಹೋಟೆಲ್‌ನಲ್ಲಿ ಕೆಲಸ ನಿರ್ವಹಿಸುವ ಎಲ್ಲಾ ಕಾರ್ಮಿಕರು ಕಡ್ಡಾಯವಾಗಿ ಸುರಕ್ಷಾ ಧಿರಿಸುಗಳನ್ನು ಧರಿಸುವುದು. ರಸ್ತೆ ಬದಿಯಲ್ಲಿ ತೆರೆದ ರೀತಿಯಲ್ಲಿ ಮಾರಾಟ ಮಾಡುವ ಆಹಾರ ಪದಾರ್ಥ, ತಿಂಡಿ ತಿನಿಸುಗಳು, ಕತ್ತರಿಸಿದ ಹಣ್ಣು ಹಂಪಲುಗಳನ್ನು ತಿನ್ನಬಾರದು. ಹೊರಗಡೆ ಬಂದಾಗ ಬಾಟಲ್‌ಗಳಲ್ಲಿ ನೀರನ್ನು ಸಂಗ್ರಹಿಸಿ ಸಾಧ್ಯವಾದಷ್ಟು ಮನೆಯ ನೀರನ್ನು ಬಳಸುವುದು. ಹಾಗೂ ಸಿದ್ಧಪಡಿಸಿದ ಆಹಾರ ಪದಾರ್ಥಗಳ ಮೇಲೆ ಕ್ರಿಮಿಕೀಟಗಳು ಕುಳಿತುಕೊಳ್ಳದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವುದು. ಪಾಲಿಕೆ ವ್ಯಾಪ್ತಿಯಲ್ಲಿನ ಎಲ್ಲಾ ಸಾರ್ವಜನಿಕರು ಹೋಟೆಲ್ ಮಾಲೀಕರು ಮತ್ತು ಬೀದಿಬದಿ ವ್ಯಾಪಾರಸ್ಥರು ಸಾಂಕ್ರಾಮಿಕ ರೋಗಗಳು ಹರಡದಂತೆ ಮೈಸೂರು ಮಹಾನಗರಪಾಲಿಕೆಯೊಂದಿಗೆ ಸಹಕರಿಸುವಂತೆ ಮೈಸೂರು ಮಹಾನಗರಪಾಲಿಕೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಂಬೇಡ್ಕರ್ 133ನೇ ಜನ್ಮದಿನಾಚರಣೆ; ಇಂದು ವಿಶೇಷ ಉಪನ್ಯಾಸ ಕಾರ್ಯಕ್ರಮ

ಮೈಸೂರು, ಮೇ 22-ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಡಾ.ಬಿ.ಆರ್ ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ವತಿಯಿಂದ ಮೇ.23ರಂದು ಬೆಳಗ್ಗೆ 11 ಗಂಟೆಗೆ ಕಾವೇರಿ ಸಭಾಂಗಣದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ 133ನೇ ಜನ್ಮದಿನಾಚರಣೆ ಅಂಗವಾಗಿ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮವನ್ನು ಹುಬ್ಬಳ್ಳಿಯ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಸಿ.ಬಸವರಾಜು ಉದ್ಘಾಟಿಸುವರು. ಕ.ರಾ.ಮು.ವಿಯ ಕುಲಪತಿ ಪ್ರೊ.ಶರಣಪ್ಪ ವಿ. ಹಲಸೆ ಅಧ್ಯಕ್ಷತೆ ವಹಿಸುವರು. ಕುಲಸಚಿವರು ಹಾಗೂ ಹಣಕಾಸು ಅಧಿಕಾರಿ ಪ್ರೊ. ಕೆ.ಬಿ.ಪ್ರವೀಣ್ ಉಪಸ್ಥಿತರಿರುವರು ಹಾಗೂ ಕುಲಸಚಿವ (ಪರಿಕ್ಷಾಂಗ) ಡಾ. ಹೆಚ್. ವಿಶ್ವನಾಥ್ ವಿಶೇಷ ಉಪನ್ಯಾಸ ಮಾಡಲಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಒಂದನೇ ಪುಟದಿಂದ

SIT ತನಿಖೆ ಹಳ್ಳ ಹಿಡಿಯುತ್ತೆ...!

ಹುಚ್ಚನ ವಿಚಾರಣೆ ಮಾಡುತ್ತಿದ್ದೀರಾ!: ಬಿಜೆಪಿ ಮುಖಂಡ ದೇವರಾಜೇಗೌಡ ಹುಚ್ಚ, ಮೆಂಟಲ್ ಎಂದೆಲ್ಲಾ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ದೇವರಾಜೇಗೌಡ ಹುಚ್ಚನಾದರೆ ಅವನನ್ನು ಎಸ್‌ಐಟಿಯವರು ಯಾವ ರೀತಿ ವಿಚಾರಣೆಗೊಳಪಡಿಸುತ್ತಿದ್ದಾರೆ. ಪೆನ್‌ಡ್ರೈವ್ ಫೋಟೋ ಮತ್ತು ವಿಡಿಯೋ ಬಗ್ಗೆ ಯಾವ ರೀತಿ ಮಾಹಿತಿ ಪಡೆಯುತ್ತಿದ್ದಾರೆ ಎಂದು ಪ್ರಶ್ನಿಸಿದರು.

ಮೂಲ ಕಾರಣಕರ್ತರ ತನಿಖೆ ಮಾಡಿ: ಪೆನ್‌ಡ್ರೈವ್ ಹಂಚಿಕೆ ಪ್ರಕರಣದ ಹಿಂದಿನ ಮೂಲ ಪತ್ತೆ ಹಚ್ಚಬೇಕಿದೆ. ಒಂದಿಬ್ಬರನ್ನು ವಿಚಾರಣೆ ಮಾಡಿ ಇದರ ಮೂಲವನ್ನೇ ಎಸ್‌ಐಟಿ ಬಿಟ್ಟಿದೆ. ಸರ್ಕಾರಕ್ಕೆ ಈ ಪ್ರಕರಣದಲ್ಲಿ ಗಂಭೀರತೆ ಇದ್ದರೆ ಡಿ.ಕೆ.ಶಿವಕುಮಾರ್ ಸೇರಿದಂತೆ ಇದರ ಮೂಲ ಕಾರಣಕರ್ತರನ್ನು ವಿಚಾರಣೆ ಮಾಡಬೇಕು ಎಂದು ಒತ್ತಾಯಿಸಿದರು. ದೇವರಾಜೇಗೌಡನ ಜೊತೆ ನಾನು ಅರ್ಧ ನಿಮಿಷ ಮಾತನಾಡಿದ್ದೇನೆ ಎಂದು ಸ್ವತಃ ಡಿ.ಕೆ.ಶಿವಕುಮಾರ್ ಅವರೇ ಒಪ್ಪಿ ಕೊಂಡಿದ್ದಾರೆ. ಅವರೇ ಹೇಳಿದಂತೆ ಅರ್ಧ ನಿಮಿಷ ಏನೇನು ಚರ್ಚೆ ನಡೆದಿದೆ ಎಂದು ಕುಮಾರಸ್ವಾಮಿ ಹೇಳಿದರು.

ಇಷ್ಟೆಲ್ಲಾ ಅವಾಂತರ ಆದ ಮೇಲೆ ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಪ್ರಕರಣದ ಬಗ್ಗೆ ಬಹಿರಂಗ ಹೇಳಿಕೆ ನೀಡದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಸಚಿವರಿಗೆ ತಾಕೀತು ಮಾಡಿದ್ದಾರೆ. ತಮ್ಮ ಬುಡಕ್ಕೆ ಸುತ್ತಿಕೊಳ್ಳುತ್ತಿರುವ ಕಾರಣ ಈಗ ಮಾತನಾಡದಂತೆ ಹೇಳಿದ್ದಾರೆ ಎಂದು ಆಪಾದಿಸಿದರು. ನನಗೆ ಬಂದಿರುವ ಮಾಹಿತಿ ಪ್ರಕಾರ ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಕೊಟ್ಟಿರುವ ಕಾರ್ತಿಕ್ ಎಸ್‌ಐಟಿ ವಶದಲ್ಲೇ ಇದ್ದಾನೆ. ಕಾರ್ತಿಕ್ ಬಂಧನ ತೋರಿಸದೆ ಅನಧಿಕೃತವಾಗಿ ಇಟ್ಟುಕೊಂಡಿದ್ದಾರೆ. ಎಂಟು ಪೊಲೀಸರ ರಕ್ಷಣೆಯಲ್ಲಿ ಕಾರ್ತಿಕ್ ಇದ್ದಾನೆ ಎಂದು ಕುಮಾರಸ್ವಾಮಿ ಮಾಹಿತಿ ನೀಡಿದರು. ಎಸ್‌ಐಟಿ ತನಿಖೆ ಸರಿಯಾದ ಹಾದಿಯಲ್ಲಿ ಸಾಗದ ಕಾರಣ ನ್ಯಾಯಕ್ಕಾಗಿ ನಾವು ಅನಿವಾರ್ಯವಾಗಿ ಕಾನೂನು ಹೋರಾಟ ಮಾಡುತ್ತೇವೆ ಎಂದು ಸ್ಪಷ್ಟಪಡಿಸಿದರು.

ಸಿ.ಡಿ.ಶಿವಕುಮಾರ್ 1980ರಲ್ಲೇ ಸಿಡಿ ಫ್ಯಾಕ್ಟರಿ ಆರಂಭಿಸಿದ್ದಾರೆ..!

ಸಿ.ಡಿ.ಶಿವಕುಮಾರ್ 1980 ರಲ್ಲಿ ಸಿಡಿ ಫ್ಯಾಕ್ಟರಿ ಆರಂಭಿಸಿದ್ದಾರೆ ಎಂದು ಮಾಜಿ ಮುಖ್ಯ ಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಆಪಾದಿಸಿದರು. ನಿಮ್ಮ ಗುರುಗಳನ್ನ ಕೇಳಿದರೆ ಸಿಡಿ ಫ್ಯಾಕ್ಟರಿ ಆರಂಭಿಸಿರುವ ಬಗ್ಗೆ ವಿವರ ನೀಡುತ್ತಾರೆ ಎಂದು ಡಿ.ಕೆ.ಶಿವಕುಮಾರ್ ಪರ ವಕಾಲತು ವಹಿಸಿದ ಶಿಷ್ಯನಿಗೆ ಸಲಹೆ ನೀಡುತ್ತಿದ್ದೇನೆ ಎಂದು ಹೇಳಿದರು. ಹೆಚ್.ಡಿ.ರೇವಣ್ಣ ಮನೆಯಲ್ಲಿ ಕೆಲಸಕ್ಕಿದ್ದ ಕಾರ್ತಿಕ್ ಮೊದಲು ಹಾಸನದ ಕಾಂಗ್ರೆಸ್ ಅಭ್ಯರ್ಥಿ ಭೇಟಿ ಮಾಡಿದ್ದಾನೆ. ತರುವಾಯ ಆತನ ಮೂಲಕ ಕಾರ್ತಿಕ್, ಡಿ.ಕೆ.ಸುರೇಶ್ ಭೇಟಿಯಾಗಿದ್ದಾನೆ. ನಂತರ ಡಿ.ಕೆ.ಶಿವ ಕುಮಾರ್ ಭೇಟಿ ಮಾಡಿದ್ದಾನೆ ಎಂದು ತಿಳಿಸಿದರು. ಕಾರ್ತಿಕ್ ನಿಂದ ಪೆನ್‌ಡ್ರೈವ್ ಪಡೆದ ಡಿ.ಕೆ.ಶಿವಕುಮಾರ್ ಡೌನ್‌ಲೋಡ್ ಮಾಡಿಕೊಂಡು ಪೆನ್‌ಡ್ರೈವ್ ವಾಪಾಸ್ಸು ಕೊಟ್ಟಿದ್ದಾರೆ. ತರುವಾಯ ಡಿ.ಕೆ.ಶಿವಕುಮಾರ್ ಮೂಲಕ ಪೆನ್‌ಡ್ರೈವ್ ಹಂಚಿಕೆಯಾಗಿದೆ ಎಂದು ನೇರವಾಗಿ ಆರೋಪಿಸಿದರು. ಮಹಿಳೆಯರ ಫೋಟೋ ಹಾಗೂ ವಿಡಿಯೋ ಮಿಕ್ಸ್ ಮಾಡಿ ಪೆನ್‌ಡ್ರೈವ್‌ನಲ್ಲಿರುವ ದೃಶ್ಯಗಳನ್ನು ತಯಾರಿಸಿದ್ದಾರೆ. ಮಹಿಳೆಯರ ದೃಶ್ಯಗಳನ್ನು ಬ್ಲರ್ ಕೂಡ ಮಾಡದೆ ವೈರಲ್ ಮಾಡಿದ್ದಾರೆ ಎಂದು ಆರೋಪಿಸಿದರು. ನಾನು ಒಂದಂತೂ ಸ್ಪಷ್ಟಪಡಿಸುತ್ತೇನೆ. ಯಾವುದೇ ಕಾರಣಕ್ಕೂ ನಾನು ಪ್ರಜ್ವಲ್ ಪರ ಮಾತನಾಡುವುದಿಲ್ಲ. ಆತ ತಪ್ಪು ಮಾಡಿದ್ದರೆ ಶಿಕ್ಷೆ ಕೊಡಿ. ಆದರೆ ಪೆನ್ ಡ್ರೈವ್ ಹಂಚಿಕೆಯಲ್ಲಿ ಮೂಲ ಕಾರಣಕರ್ತರು ಯಾರಿದ್ದಾರೋ ಅವರನ್ನು ಕೂಡ ವಿಚಾರಣೆ ಮಾಡಿ ಎಂದು ಕುಮಾರಸ್ವಾಮಿ ಆಗ್ರಹಿಸಿದರು. ವಿಡಿಯೋ ಮಾಡಿರುವುದು ಒಂದು ಭಾಗವಾದರೆ, ವಿಡಿಯೋ ಹಂಚಿಕೆ ಮಾಡಿರುವುದು ಮತ್ತೊಂದು ಭಾಗ. ಅದೂ ಚುನಾವಣೆಗೆ ನಾಲ್ಕು ದಿನ ಮುಂಚಿತವಾಗಿ ಪೆನ್‌ಡ್ರೈವ್ ಹಂಚಿಕೆ ಮಾಡಲಾಗಿದೆ ಎಂದು ದೂರಿದರು. ಈ ಮಾಹಿತಿ ಆಧರಿಸಿ ಎಸ್‌ಐಟಿ ಮೂಲ ಕಾರಣಕರ್ತರನ್ನು ಹಿಡಿಯುವುದು ಬಿಟ್ಟು ಸಿಕ್ಕ ಸಿಕ್ಕವರನ್ನು ಹಿಡಿಯುತ್ತಿದ್ದಾರೆ. ಜೊತೆಗೆ ಮಾಧ್ಯಮದವರನ್ನು ವಿಚಾರಣೆ ಮಾಡುತ್ತಾರಂತೆ. ಹೀಗಾದರೆ ಎಸ್‌ಐಟಿ ತನಿಖೆ ಹಳ್ಳ ಹಿಡಿಯದೆ ಮತ್ತೇನಾಗಲಿದೆ ಎಂದು ಕುಮಾರಸ್ವಾಮಿ ಪ್ರಶ್ನಿಸಿದರು.

ನಾನು ವಿದೇಶಕ್ಕೆ ಹೋದರೆ ಪ್ರಜ್ವಲ್ ರಕ್ಷಣೆಗೆ ಹೋಗಿದ್ದೇನೆ ಅಂತಾರೆ!

ನಾನೇನಾದರೂ ಈಗ ವಿದೇಶಕ್ಕೆ ಹೋದರೆ, ಪ್ರಜ್ವಲ್ ರಕ್ಷಣೆಗೆ ಹೋಗಿದ್ದಾರೆ ಎಂದು ಸುಳ್ಳು ಸುದ್ದಿ ಹಬ್ಬಿಸುತ್ತಾರೆ. ಈ ಗ್ರಹಚಾರ ನನಗೇಕೆ ಬೇಕು! ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿಯವರ ಮತ್ತೊಂದು ಸಮಸ್ಯೆ ಇದು.

ವಿದೇಶದಲ್ಲಿರುವ ಪ್ರಜ್ವಲ್ ಈ ತನಕ ನನ್ನ ಅಥವಾ ರೇವಣ್ಣ ಸಂಪರ್ಕಕ್ಕೆ ಬಂದಿಲ್ಲ. ಅವನು ಎಲ್ಲಿದ್ದಾನೆಂಬ ಮಾಹಿತಿ ಕೂಡ ನಮಗಿಲ್ಲ. ಕರ್ನಾಟಕದಲ್ಲಿರುವಾಗಲೇ ಪ್ರಜ್ವಲ್ ನನ್ನ ಸಂಪರ್ಕದಲ್ಲಿ ಇರಲಿಲ್ಲ. ಈಗ ವಿದೇಶದಲ್ಲಿದ್ದಾಗ ನನ್ನ ಸಂಪರ್ಕದಲ್ಲಿ ಹೇಗೆ ಇರಲು ಸಾಧ್ಯ ಎಂದು ಮರು ಪ್ರಶ್ನಿಸಿದರು.

ಪ್ರಜ್ವಲ್‌ನನ್ನು ನಾನು ಹುಡುಕುವ ಗೋಜಿಗೆ ಹೋಗುವುದಿಲ್ಲ. ಇಂತಹ ಸಮಯದಲ್ಲಿ ವಿದೇಶಕ್ಕೂ ಹೋಗುವುದಿಲ್ಲ. ಈಗ ಏನಾದರೂ ವಿದೇಶಕ್ಕೆ ಹೋದರೆ ಪಜ್ವಲ್ ರಕ್ಷಣೆಗೆ ಹೋಗಿದ್ದಾರೆ ಎಂದು ಸುಳ್ಳು ಸುದ್ದಿ ಹಬ್ಬಿಸುತ್ತಾರೆ. ಈ ಗ್ರಹಚಾರ ನನಗೇಕೆ ಬೇಕು ಎಂದರು. ಪ್ರಜ್ವಲ್ ವಿದೇಶಕ್ಕೆ ಹೋಗುವುದು ನನಗೆ ತಿಳಿದಿದ್ದರೆ ನಾನೇ ಅವನನ್ನು ತಡೆಯುತ್ತಿದ್ದೆ. ನಾನು ಯಾವುದೇ ತಪ್ಪು ಮಾಡಿಲ್ಲ ಎಂದಾದರೆ ಎಸ್‌ಐಟಿ ಮುಂದೆ ವಿಚಾರಣೆಗೆ ಹಾಜರಾಗು ಎಂದು ಸಲಹೆ ನೀಡುತ್ತಿದ್ದೆ. ಆದರೆ ಆತ ವಿದೇಶಕ್ಕೆ ಹೋಗುವ ಮಾಹಿತಿ ನನಗೆ ಇರಲಿಲ್ಲ ಎಂದು ಸ್ಪಷ್ಟಪಡಿಸಿದರು. ಇತ್ತೀಚಿನ ಬೆಳವಣಿಗೆಗಳಿಂದ ಪ್ರಜ್ವಲ್ ಭಯ ಬಿದ್ದಿರಬೇಕು. ಹಾಗಾಗಿ ಆತ ವಿದೇಶದಿಂದ ಇಲ್ಲಿಗೆ ಬರಲು ಹಿಂದೇಟು ಹಾಕುತ್ತಿರಬಹುದು ಎಂದು ಅಭಿಪ್ರಾಯಪಟ್ಟ ಕುಮಾರಸ್ವಾಮಿ, ಈಗಲೂ ಪ್ರಜ್ವಲ್‌ಗೆ ಹೇಳುತ್ತೇನೆ; ಈ ವಿಚಾರದಲ್ಲಿ ವಕೀಲರ ಸಲಹೆ ಬೇಡ, ನೈತಿಕತೆ ಉಳಿಸಿಕೊಳ್ಳಲು ದೇಶಕ್ಕೆ ವಾಪಾಸ್ಸು ಬಾ ಎಂದು ಕಿವಿಮಾತು ಹೇಳಿದರು.

ಸಿದ್ದರಾಮಯ್ಯ, ಸಿ.ಡಿ.ಶಿವು ಅವರೇ ಅಧಿಕಾರ ಯಾವತ್ತೂ ಶಾಶ್ವತವಲ್ಲ

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಿ.ಡಿ.ಶಿವಕುಮಾರ್ ಅವರೇ; ಅಧಿಕಾರ ಯಾವತ್ತೂ ಶಾಶ್ವತವಲ್ಲ. ರಾಜಕಾರಣದಲ್ಲಿ ಏಳು–ಬೀಳು ಸಹಜ. ನಮ್ಮ ಕುಟುಂಬದವರಂತೂ ಅಧಿಕಾರಕ್ಕೆ ಯಾವತ್ತೂ ಅಂಟಿಕೊಂಡಿಲ್ಲ. ಯಾವುದೇ ಅಡ್ಡದಾರಿ ಹಿಡಿಯದೆ ಹೆಚ್.ಡಿ.ದೇವೇಗೌಡರು ಪ್ರಧಾನಿ ಹುದ್ದೆ ಬಿಟ್ಟು ಬಂದವರು. ನಿಮ್ಮಂತೆ ನಾವು ಯಾವತ್ತೂ ಅಧಿಕಾರಕ್ಕೆ ಅಡ್ಡ ದಾರಿ ಹಿಡಿದಿಲ್ಲ ಎಂದು ಆರೋಪಿಸಿದರು.

ನಮ್ಮನ್ನು ಹುಡುಕಿಕೊಂಡು ಅಧಿಕಾರ ಬಂದಿದೆ. ನಾವು ಯಾವತ್ತೂ ಅಧಿಕಾರ ಹುಡುಕಿಕೊಂಡು ಹೋಗಿಲ್ಲ. ಎಲ್ಲಾ ಅಧಿಕಾರ ನೋಡಿದ್ದೇವೆ. ಸಿಡಿ ಶಿವು ಅವರೇ ಇದು ನಿಮಗೆ ನೆನಪಿರಲಿ ಎಂದು ಡಿ.ಕೆ.ಶಿವಕುಮಾರ್‌ಗೆ ಕಿವಿಮಾತು ಹೇಳಿದರು. ನಾನು ಡಿ.ಕೆ.ಶಿವಕುಮಾರ್ ಕಂಡು ಹೊಟ್ಟೆ ಕಿಚ್ಚು, ಅಸೂಯೆ ಏಕೆ ಪಡಲಿ ಎಂದು ಪ್ರಶ್ನಿಸಿದ ಕುಮಾರಸ್ವಾಮಿ, ನೀವು ನ್ಯಾಯಯುತ ದಾರಿಯಲ್ಲಿ ಸಾಗಿದರೆ ನಮ್ಮ ಅಭ್ಯಂತರವೇನಿಲ್ಲ ಎಂದು ಹೇಳಿದರು. ಪ್ರಜ್ವಲ್ ಪ್ರಕರಣ ಸಂಬಂಧ ಸಂಘ ಸಂಸ್ಥೆಗಳನ್ನು ಎತ್ತಿಕಟ್ಟಿ ಮೇ 30 ರಂದು ಪ್ರತಿಭಟನೆ ಮಾಡಿಸುತ್ತಿದ್ದಾರೆ. ಇವರ ಪ್ರಾಯೋಜಕತ್ವದಲ್ಲಿ ನಡೆಯುತ್ತಿರುವ ಪ್ರತಿಭಟನೆಗೆ ಅಂಗನವಾಡಿ ಕಾರ್ಯಕರ್ತರನ್ನು ಕರೆ ತರಲು ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ ಎಂದು ಆರೋಪಿಸಿದರು. ಪ್ರಜ್ವಲ್ ಪ್ರಕರಣ ಸಂಬಂಧ ಸಂಘ ಸಂಸ್ಥೆಗಳನ್ನು ಎತ್ತಿಕಟ್ಟಿ ಮೇ 30 ರಂದು ಪ್ರತಿಭಟನೆ ಮಾಡಿಸುತ್ತಿದ್ದಾರೆ. ಇವರ ಪ್ರಾಯೋಜಕತ್ವದಲ್ಲಿ ನಡೆಯುತ್ತಿರುವ ಪ್ರತಿಭಟನೆಗೆ ಅಂಗನವಾಡಿ ಕಾರ್ಯಕರ್ತರನ್ನು ಕರೆ ತರಲು ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ ಎಂದು ದೂರಿದರು. ಕಾಂಗ್ರೆಸ್‌ನವರು ಇಂತಹ ಕೀಳು ಮಟ್ಟಕ್ಕೆ ಇಳಿಯಬಾರದಿತ್ತು. ನನಗೆ ಹೇಳಿದ್ದರೆ ಪ್ರತಿಭಟನೆಗೆ ಮಹಿಳೆಯರನ್ನು ಕಳುಹಿಸುತ್ತಿದ್ದೆ. ಅದು ಬಿಟ್ಟು ನಿಮ್ಮ ಸ್ವಾರ್ಥ ರಾಜಕಾರಣಕ್ಕಾಗಿ ಅಂಗನವಾಡಿ ಕಾರ್ಯಕರ್ತೆಯರನ್ನು ಬಳಸಿಕೊಳ್ಳುವುದೇ? ಎಂದು ಪ್ರಶ್ನಿಸಿದರು. ಪ್ರಜ್ವಲ್ ಪೆನ್‌ಡ್ರೈವ್ ಪ್ರಕರಣದಿಂದ ನಮ್ಮ ಕುಟುಂಬಕ್ಕೆ ಸ್ವಲ್ಪ ಡ್ಯಾಮೇಜ್ ಆಗಿದೆ. ಡ್ಯಾಮೇಜ್ ಆಗಿದೆ ಎಂಬುದಕ್ಕಿಂತ ಡ್ಯಾಮೇಜ್ ಮಾಡಿದ್ದಾರೆ ಎಂದು ಕಿಡಿಕಾರಿದರು.

ಮೈಸೂರಿಗೆ ಅಧಿಕಾರದ ಕೊನೆ ಹಂತದಲ್ಲಾದರೂ ಏನಾದರೂ ಕೊಡುಗೆ ನೀಡಿ

ನಿಮ್ಮ ರಾಜಕೀಯದ ಕೊನೆ ಹಂತದಲ್ಲಾದರೂ ತವರು ಜಿಲ್ಲೆ ಮೈಸೂರಿಗೆ ಅಭಿವೃದ್ಧಿ ಕೊಡುಗೆ ನೀಡಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಮಾಜಿ ಸಿಎಂ ಕುಮಾರಸ್ವಾಮಿ ಸಲಹೆ ನೀಡಿದರು. ಇಷ್ಟು ವರ್ಷಗಳ ಕಾಲ ರಾಜಕಾರಣ ಮಾಡಿರುವ ಸಿದ್ದರಾಮಯ್ಯ, ಮುಖ್ಯಮಂತ್ರಿಯಾಗಿ ಕೂಡ ಮೈಸೂರು ಜಿಲ್ಲೆಗೆ ನೀಡಿರುವ ಕೊಡುಗೆ ಶೂನ್ಯ. ನಾಲ್ಕು ಬಾರಿ ಪ್ರತಿನಿಧಿಸಿದ್ದ ಚಾಮುಂಡೇಶ್ವರಿ ಕ್ಷೇತ್ರಕ್ಕೆ ಏನೂ ಕೊಡುಗೆ ನೀಡಿಲ್ಲ. ಕಲುಷಿತ ನೀರು ಕುಡಿದು ವ್ಯಕ್ತಿಯೊಬ್ಬ ಮೃತಪಟ್ಟಿದ್ದಾನೆ. ಇದಕ್ಕೆಲ್ಲಾ ಯಾರು ಹೊಣೆ ಎಂದು ಪ್ರಶ್ನಿಸಿದರು. ನಿಮ್ಮ ತವರು ಜಿಲ್ಲೆ ಮೈಸೂರಿನಲ್ಲೇ ಈ ಪರಿಸ್ಥಿತಿಯಾದರೆ ಇನ್ನು ರಾಜ್ಯದಲ್ಲಿ ಎಂತಹ ಪರಿಸ್ಥಿತಿ ಇರಬಹುದು ಎಂದು ಮರು ಪ್ರಶ್ನಿಸಿದರು. ದಿನ ಬೆಳಗಾದರೆ ಕೇಂದ್ರದ ಬಿಜೆಪಿ ಸರ್ಕಾರ ಟೀಕಿಸುವುದು, ವಿರೋಧಿಗಳಿಗೆ ತೊಂದರೆ ಕೊಡುತ್ತಾ ದ್ವೇಷ ರಾಜಕಾರಣ ಮಾಡುವುದರಲ್ಲೇ ಒಂದು ವರ್ಷ ಕಳೆದರೆ ಹೊರತು ಯಾವುದೇ ಅಭಿವೃದ್ಧಿ ಮಾಡಿಲ್ಲ ಎಂದು ದೂರಿದರು. ಇವರೇ ಹೇಳಿಕೊಳ್ಳುವಂತೆ ಗ್ಯಾರಂಟಿ ಬಿಟ್ಟು ಏನು ಸಾಧನೆ ಮಾಡಿಲ್ಲ. ಇವರ ದುರಾಡಳಿತದಿಂದ ರೈತರ ಸರಣಿ ಆತ್ಮಹತ್ಯೆಗಳಾಗುತ್ತಿದೆ. ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿದ್ದು, ಪ್ರತಿದಿನ ಅಪರಾಧ ಕೃತ್ಯ ನಡೆಯುತ್ತಿದೆ. ಕನಿಷ್ಠ ಇದಕ್ಕಾದರೂ ಕಡಿವಾಣ ಹಾಕಿ ಜನರು ನೆಮ್ಮದಿಯಿಂದ ಬದುಕುವ ವಾತಾವರಣ ನಿರ್ಮಾಣ ಮಾಡಿ ಎಂದು ಸಲಹೆ ನೀಡಿದರು.

ಸಂಸದ ಪ್ರಜ್ವಲ್ ರೇವಣ್ಣ ಮಾಸ್ ರೇಪ್ ಮಾಡಿದ್ದಾರೆ....!

ರಾಹುಲ್ ಗಾಂಧಿ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸಲು ಜೆಡಿಎಸ್ ಆಗ್ರಹ

● ಪಕ್ಷದ ನಿಯೋಗದಿಂದ ರಾಜ್ಯ ಪೊಲೀಸ್ ಮಹಾ ನಿರ್ದೇಶಕರಿಗೆ ದೂರು ● ರಾಹುಲ್ ಗಾಂಧಿ ಪ್ರಸ್ತಾಪಿಸಿರುವ 400 ಮಹಿಳೆಯರ ಮಾಹಿತಿ ಅವರಿಗಿದೆ; ಸಮನ್ಸ್ ನೀಡಿ, ಎಸ್‌ಐಟಿ ವಿಚಾರಣೆಗೆ ಆಗ್ರಹ

ಬೆಂಗಳೂರು, ಮೇ 22(ಕೆಎಂಶಿ)– ನಾಲ್ಕು ನೂರು ಮಹಿಳೆಯರ ಮೇಲೆ ಸಂಸದ ಪ್ರಜ್ವಲ್ ರೇವಣ್ಣ ಮಾಸ್ ರೇಪ್ ಮಾಡಿದ್ದಾರೆ ಎಂದು ಬಹಿರಂಗ ಸಭೆಗಳಲ್ಲಿ ಮಾಡಿದ ಭಾಷಣದಲ್ಲಿ ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ಪ್ರಸ್ತಾಪಿಸಿದ್ದು, ಅವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳುವಂತೆ ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ಜೆಡಿಎಸ್ ಇಂದಿಲ್ಲಿ ದೂರು ನೀಡಿದೆ.

ಜವಾಬ್ದಾರಿಯುತ ಸ್ಥಾನದಲ್ಲಿರುವ ರಾಹುಲ್ ಗಾಂಧಿ, ಶಿವಮೊಗ್ಗ ಹಾಗೂ ರಾಯಚೂರಿನಲ್ಲಿ ಕಾಂಗ್ರೆಸ್ ಪಕ್ಷದ ಬಹಿರಂಗ ಸಭೆಗಳಲ್ಲಿ ಮಾಸ್‌ರೇಪ್ ಬಗ್ಗೆ ಹೇಳಿದ್ದರು. ಇದೇ ಮಾಹಿತಿಯನ್ನು ಮಾಧ್ಯಮಗಳ ಮುಂದೆಯೂ ನೀಡಿದ್ದಾರೆ. ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಹಾಗೂ ಎಸ್‌ಐಟಿ ಅವರಿಗೆ ಕೂಡಲೆ ಸಮನ್ಸ್ ನೀಡಬೇಕು ಎಂದು ಜೆಡಿಎಸ್ ಒತ್ತಾಯ ಮಾಡಿದೆ.

ವಿಧಾನಪರಿಷತ್ ಸದಸ್ಯರಾದ ಕೆ.ಎ.ತಿಪ್ಪೇಸ್ವಾಮಿ, ಮಂಜೇಗೌಡ, ಪರಿಷತ್ ಮಾಜಿ ಸದಸ್ಯ ಚೌಡರೆಡ್ಡಿ ತೂಪಲ್ಲಿ, ಜೆಡಿಎಸ್ ಕಾನೂನು ಘಟಕದ ರಾಜ್ಯಾಧ್ಯಕ್ಷ ಎ.ಪಿ.ರಂಗನಾಥ್, ಬೆಂಗಳೂರು ನಗರದ ಘಟಕದ ಮಹಾ ಪ್ರಧಾನ ಕಾರ್ಯದರ್ಶಿ ಎಸ್.ರಮೇಶ್ ಒಳಗೊಂಡ ನಿಯೋಗ ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಅವರನ್ನು ಭೇಟಿಯಾಗಿ ದೂರು ಸಲ್ಲಿಸಿದೆ. ಕಾಂಗ್ರೆಸ್ ನಾಯಕ ಹಾಗೂ ವಯನಾಡು ಲೋಕಸಭಾ ಕ್ಷೇತ್ರದ ಸಂಸದ ರಾಹುಲ್ ಗಾಂಧಿ ಅವರು, ಪ್ರಜ್ವಲ್ ರೇವಣ್ಣ 400 ಮಹಿಳೆಯರ ಮೇಲೆ ಮಾಸ್ ರೇಪ್ ಮಾಡಿ, ಅದನ್ನು ವಿಡಿಯೋ ಚಿತ್ರೀಕರಣ ಮಾಡಿಕೊಂಡಿದ್ದಾರೆ. ಇದು ಕೇವಲ ಅತ್ಯಾಚಾರ ಅಷ್ಟೇ ಅಲ್ಲ, ಇದೊಂದು ಸಾಮೂಹಿಕ ಅತ್ಯಾಚಾರ. ಒಬ್ಬ ಮಾಸ್ ರೇಪಿಸ್ಟ್ ಪರ ಪ್ರಧಾನಿ ನರೇಂದ್ರ ಮೋದಿ ಅವರು ಮತ ಯಾಚಿಸಿರುವುದು ಇಡೀ ಜಗತ್ತಿಗೆ ಗೊತ್ತಾಗಿದೆ ಎಂದು ಮೇ 2ರಂದು ಹೇಳಿಕೆ ನೀಡಿದ್ದರು. ರಾಹುಲ್ ಗಾಂಧಿ ಅವರ ಹೇಳಿಕೆ, ಭಾಷಣ ಎಲ್ಲವೂ ವಿದ್ಯುನ್ಮಾನ ಮಾಧ್ಯಮಗಳಲ್ಲಿ ಪ್ರಸಾರವಾಗಿದೆ, ಮುದ್ರಣ ಮಾಧ್ಯಮದಲ್ಲಿಯೂ ವರದಿಯಾಗಿದೆ ಎಂದು ಪೊಲೀಸ್ ಮಹಾನಿರ್ದೇಶಕರಿಗೆ ನೀಡಿದ ದೂರಿನಲ್ಲಿ ತಿಳಿಸಲಾಗಿದ್ದು, ಅದಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಜೆಡಿಎಸ್ ನಿಯೋಗ ಸಲ್ಲಿಸಿದೆ.

ನೊಂದ ಮಹಿಳೆಯರಿಗೆ ನ್ಯಾಯ ಕೊಡಿಸುವುದರ ಬಗ್ಗೆ ಮಾತನಾಡದೆ, ಒಬ್ಬ ಜನಪ್ರತಿನಿಧಿಯಾಗಿ ರಾಹುಲ್ ಗಾಂಧಿ ಅವರು ಇಂಥ ಹೇಳಿಕೆ ನೀಡಿರುವುದು ಕಾನೂನು ಉಲ್ಲಂಘನೆಯಾಗಿದೆ, ನಾಲ್ಕು ನೂರು ಮಹಿಳೆಯರ ಮೇಲೆ ಮಾಸ್ ರೇಪ್ ಆಗಿರುವ ಬಗ್ಗೆ ರಾಹುಲ್ ಗಾಂಧಿ ಅವರಿಗೆ ಎಲ್ಲಾ ಮಾಹಿತಿ ಇದೆ. ಅಷ್ಟೂ ಮಹಿಳೆಯರ ಮಾಹಿತಿ ಅವರಲ್ಲಿ ಇದೆ ಎನ್ನುವುದು ಅವರದೇ ಹೇಳಿಕೆಯಿಂದ ಸ್ಪಷ್ಟವಾಗಿದೆ. ಈ ಹಿನ್ನೆಲೆಯಲ್ಲಿ ರಾಹುಲ್ ಗಾಂಧಿ ಅವರ ವಿರುದ್ಧ ಭಾರತೀಯ ದಂಡ ಸಂಹಿತೆ ಸೆಕ್ಷನ್ 1860ರ ಅಡಿ ಕೇಸ್ ದಾಖಲಿಸಬೇಕು ಎಂದು ಜೆಡಿಎಸ್ ಒತ್ತಾಯಿಸಿದೆ. ಪ್ರಕರಣದ ತನಿಖೆಗೆ ರಾಜ್ಯ ಸರ್ಕಾರ ವಿಶೇಷ ತನಿಖಾ ತಂಡ ರಚಿಸಿದ್ದು, ಈ ತಂಡ ರಾಹುಲ್ ಗಾಂಧಿ ಅವರಿಗೆ ಸಮನ್ಸ್ ಜಾರಿ ಮಾಡಿ ಕರೆಸಬೇಕು. ನಾಲ್ಕು ನೂರು ಮಹಿಳೆಯರ ರೇಪ್ ಎಂಬುದಾಗಿ ಹೇಳಿದ್ದು ಸಮಾಜಕ್ಕೆ ಕೆಟ್ಟ ಸಂದೇಶ ಹೋಗುವಂತೆ ಮಾಡಿದ್ದಾರೆ. ಅವರ ವಿರುದ್ಧ ಕೂಡಲೆ ಸೆಕ್ಷನ್ 202, 1860ರ ಅಡಿಯಲ್ಲಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು.



ವಿಧಾನಪರಿಷತ್ ಸದಸ್ಯರಾದ ಕೆ.ಎ.ತಿಪ್ಪೇಸ್ವಾಮಿ, ಮಂಜೇಗೌಡ, ಪರಿಷತ್ ಮಾಜಿ ಸದಸ್ಯ ಚೌಡರೆಡ್ಡಿ ತೂಪಲ್ಲಿ, ಜೆಡಿಎಸ್ ಕಾನೂನು ಘಟಕದ ರಾಜ್ಯಾಧ್ಯಕ್ಷ ಎ.ಪಿ.ರಂಗನಾಥ್, ಬೆಂಗಳೂರು ನಗರ ಘಟಕದ ಮಹಾ ಪ್ರಧಾನ ಕಾರ್ಯದರ್ಶಿ ಎಸ್.ರಮೇಶ್ ಒಳಗೊಂಡ ನಿಯೋಗ ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಅವರನ್ನು ಭೇಟಿಯಾಗಿ, ದೂರು ಸಲ್ಲಿಸಿತು.

ಪೆನ್‌ಡ್ರೈವ್ ಹಂಚಿದವರ ಮೇಲೆ ಕ್ರಮವಿಲ್ಲ

ಪೆನ್‌ಡ್ರೈವ್ ಹಂಚಿಕೆ ಬಗ್ಗೆ ಜೆಡಿಎಸ್ ನಿಯೋಗ ಮಾತನಾಡಿ, ಎಸ್‌ಐಟಿ ಏಕಪಕ್ಷೀಯ ತನಿಖೆ ನಡೆಸುತ್ತಿದೆ. ಪ್ರಜ್ವಲ್ ಪ್ರಕರಣಕ್ಕೆ ಸಂಬಂಧಿಸಿದಂತೆ ಪಕ್ಷದ ಕಾರ್ಯಕರ್ತರಿಗೆ ವಿನಾ ಕಾರಣ ಕಿರುಕುಳ ನೀಡುತ್ತಿದೆ. ಪೆನ್‌ಡ್ರೈವ್ ಹಂಚಿದ ಆರೋಪಿಗಳ ಬಗ್ಗೆ ಮೌನ ವಹಿಸಿದೆ. ನ್ಯಾಯಾಲಯ ಜಾಮೀನು ನಿರಾಕರಿಸಿದ್ದರೂ ಈವರೆಗೂ ಅವರನ್ನು ಎಸ್‌ಐಟಿ ಬಂಧನ ಮಾಡಿಲ್ಲ ಎಂದು ಜೆಡಿಎಸ್ ತಿಳಿಸಿದೆ.

ಆರ್‌ಸಿಬಿಗೆ ಹೀನಾಯ ಸೋಲು

● ಈ ಬಾರಿಯೂ ಕಪ್ ಕನಸು ಬರೀ ಕನಸ್ಸೇ!
● ಎಲಿಮಿನೇಟರ್ ಪಂದ್ಯದಲ್ಲಿ ರಾಜಸ್ಥಾನ್ ರಾಯಲ್ಸ್‌ಗೆ ಸುಲಭ ತುತ್ತು ● ಆರ್‌ಸಿಬಿ ಅಭಿಮಾನಿಗಳಿಗೆ ತೀವ್ರ ನಿರಾಸೆ



ಅಹಮದಾಬಾದ್, ಮೇ 22– ಐಪಿಎಲ್ 17ನೇ ಆವೃತ್ತಿಯ ಎಲಿಮಿನೇಟರ್ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ರಾಜಸ್ಥಾನ್ ರಾಯಲ್ಸ್ ತಂಡದ ವಿರುದ್ಧ ಹೀನಾಯ ಸೋಲು ಅನುಭವಿಸುವ ಮೂಲಕ ಈ ಬಾರಿಯೂ ಕಪ್ ಗೆಲ್ಲುವ ಅದರ ಕನಸನ್ನು ಕನಸಾಗಿಯೇ ಉಳಿಸಿಕೊಂಡಿದೆ.

ಇಲ್ಲಿನ ನರೇಂದ್ರ ಮೋದಿ ಸ್ಟೇಡಿಯಂನಲ್ಲಿ ಬುಧವಾರ ನಡೆದ ರೋಚಕ ಎಲಿಮಿನೇಟರ್ ಪಂದ್ಯದಲ್ಲಿ ಬ್ಯಾಟಿಂಗ್ ವೈಫಲ್ಯ ಅನುಭವಿಸಿದ ಆರ್‌ಸಿಬಿ ತಂಡ, ಈ ಬಾರಿಯೂ ಕಪ್ ಗೆಲ್ಲದೆ ಟೂರ್ನಿಯಿಂದ ಹೊರಬಿದ್ದಿದೆ. ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು, ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 172 ರನ್ ಪೇರಿಸಲಷ್ಟೇ ಶಕ್ತವಾಯಿತು.

ತಂಡದ ಪರ ರಜತ್ ಪಾಟೀದಾರ್ 34, ವಿರಾಟ್ ಕೊಹ್ಲಿ 32, ಮಹಿಪಾಲ್ ಲೋಮ್ರೋರ್ 32 ರನ್ ಗಳಿಸಿದ್ದು ಬಿಟ್ಟರೆ, ಮತ್ತ್ಯಾವ ಬ್ಯಾಟ್ಸ್‌ಮನ್ ತಮ್ಮ ಸಾಮರ್ಥ್ಯಕ್ಕೆ ತಕ್ಕ ಪ್ರದರ್ಶನ ನೀಡಲಿಲ್ಲ. ಎಂದಿನಂತೆ ಟೂರ್ನಿಯುದ್ದಕ್ಕೂ ವೈಫಲ್ಯ ಅನುಭವಿಸಿದ ಸ್ಫೋಟಕ ಬ್ಯಾಟ್ಸ್‌ಮನ್ ಗ್ಲೆನ್ ಮ್ಯಾಕ್ಸ್‌ವೆಲ್ ಮೊದಲ ಎಸೆತದಲ್ಲೇ ದೊಡ್ಡ ಹೊಡೆತಕ್ಕೆ ಯತ್ನಿಸಿ ಜುರೆಲ್‌ಗೆ ಕ್ಯಾಚಿತ್ತು ಪೆವಿಲಿಯನ್ ಸೇರಿದರು. ಮ್ಯಾಕ್ಸ್‌ವೆಲ್ ಈ ಆವೃತ್ತಿಯ ಐಪಿಎಲ್ ಟೂರ್ನಿಯಲ್ಲಿ 4ನೇ ಬಾರಿ ಶೂನ್ಯ ಸಂಪಾದನೆ ಮಾಡಿ ನಿರಾಸೆ ಮೂಡಿಸಿದರು. ನಾಯಕ ಫಾಫ್ ಡು ಪ್ಲೆಸಿಸ್ 17, ಕ್ಯಾಮರೂನ್ ಗ್ರೀನ್ 27, ದಿನೇಶ್ ಕಾರ್ತಿಕ್ 11 ರನ್‌ಗೆ ಔಟಾಗುವ ಮೂಲಕ ಅಭಿಮಾನಿಗಳಿಗೆ ತೀವ್ರ ನಿರಾಸೆ ಉಂಟು ಮಾಡಿದರು. ಇತ್ತ ಬೌಲಿಂಗ್‌ನಲ್ಲಿ ರಾಜಸ್ಥಾನ ಪರ ಅವೇಶ್ ಖಾನ್ 3, ಅಶ್ವಿನ್ 2 ವಿಕೆಟ್ ಪಡೆದು ಗಮನ ಸೆಳೆದರು. 173 ರನ್‌ಗಳ ಗೆಲುವಿನ ಗುರಿ ಪಡೆದ ರಾಜಸ್ಥಾನ ರಾಯಲ್ಸ್ ತಂಡ ಇನ್ನೂ ಒಂದು ಓವರ್ ಬಾಕಿ ಇರುವಂತೆ 4 ವಿಕೆಟ್‌ಗಳ ಭರ್ಜರಿ ಗೆಲುವು ಸಾಧಿಸುವ ಮೂಲಕ 2ನೇ ಕ್ವಾಲಿಫೈಯರ್ ಪಂದ್ಯಕ್ಕೆ ಎಂಟ್ರಿಕೊಟ್ಟಿತು. ತಂಡದ ಆರಂಭಿಕ ಆಟಗಾರರಾದ ಯಶಸ್ವಿ ಜೈಸ್ವಾಲ್(45 ರನ್) ಮತ್ತು ಟಾಮ್ ಕೊಹ್ಲರ್–ಕ್ಯಾಡ್ಮೋರ್ (20 ರನ್) ಉತ್ತಮ ಆರಂಭ ಒದಗಿಸಿದರು. ಮೊದಲ ವಿಕೆಟ್‌ಗೆ 46 ರನ್ ಗಳಿಸುವ ಮೂಲಕ ಭದ್ರ–ಬುನಾದಿ ಹಾಕಿದರು. ಬಳಿಕ ನಾಯಕ ಸಂಜು ಸ್ಯಾಮ್ಸನ್ 17 ರನ್, ಧ್ರುವ್ ಜುರೆಲ್ 8 ರನ್ ಗಳಿಸಿ ನಿರ್ಗಮಿಸಿದರು. ನಂತರ ಜೊತೆಯಾದ ರಿಯಾನ್ ಪರಾಗ್(36 ರನ್) ಮತ್ತು ಶಿಮ್ರಾನ್ ಹೆಟ್ಮೆಯರ್ (26 ರನ್) 45 ರನ್ ಜೊತೆಯಾಟದ ಮೂಲಕ ಗೆಲುವಿನ ಸನಿಹಕ್ಕೆ ತಂದರೆ, ಕಡೆ ಹಂತದಲ್ಲಿ ಬಿರುಸಿನ ಬ್ಯಾಟಿಂಗ್ ಮೂಲಕ ರೋವ್ಮನ್ ಪೊವೆಲ್ 8 ಎಸೆತಗಳಲ್ಲಿ 1 ಸಿಕ್ಸ್, 2 ಬೌಂಡರಿ ಸಹಿತ 16 ರನ್ ಗಳಿಸುವ ಮೂಲಕ ಇನ್ನೂ ಒಂದು ಓವರ್ ಬಾಕಿ ಇರುವಂತೆ ತಂಡಕ್ಕೆ ಜಯ ತಂದರು. ಬೌಲಿಂಗ್‌ನಲ್ಲಿ ಆರ್‌ಸಿಬಿ ಪರ ಸಿರಾಜ್ 2 ವಿಕೆಟ್ ಪಡೆದು ಗಮನ ಸೆಳೆದರೆ, ಕಳೆದ ಪಂದ್ಯದಲ್ಲಿ ಕಮಾಲ್ ಮಾಡಿದ್ದ ಯಶ್ ದಯಾಲ್ 3 ಓವರ್‌ನಲ್ಲಿ 37 ರನ್ ನೀಡುವ ಮೂಲಕ ದುಬಾರಿ ಬೌಲರ್ ಎನಿಸಿದರು. ಇತ್ತ 4 ಓವರ್ ಬೌಲಿಂಗ್ ಮಾಡಿ 2 ವಿಕೆಟ್ ಜೊತೆಗೆ ಕೇವಲ 19ರನ್ ನೀಡಿದ ರಾಯಲ್ಸ್‌ನ ಅನುಭವಿ ಆಲ್‌ರೌಂಡರ್ ರವಿ ಚಂದ್ರನ್ ಅಶ್ವಿನ್ ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಮೇ 24ಕ್ಕೆ ಕ್ವಾಲಿಫೈಯರ್ ಪಂದ್ಯ. ಚೆನ್ನೈನ ಎಂಎ ಚಿದಂಬರು ಸ್ಟೇಡಿಯಂನಲ್ಲಿ ಮೇ 24ರ ಸಂಜೆ 7.30ಕ್ಕೆ ರಾಜಸ್ಥಾನ್ ರಾಯಲ್ಸ್ ಹಾಗೂ ಸನ್ ರೈಸರ್ಸ್ ಹೈದರಾಬಾದ್ ನಡುವೆ 2ನೇ ಕ್ವಾಲಿಫೈಯರ್ ಪಂದ್ಯ ನಡೆಯಲಿದೆ.

ನೂತನ ಪ್ರಾರ್ಥನ ಮಂದಿರ ಉದ್ಘಾಟನೆಗೆ ಆಹ್ವಾನ



ಮೈಸೂರಿನ ಆಲನಹಳ್ಳಿಯಲ್ಲಿರುವ ಶ್ರೀ ಕುದೇರು ಶಾಖಾ ಮಠದ ನೂತನ ಪ್ರಾರ್ಥನ ಮಂದಿರ ಉದ್ಘಾಟನೆಗೆ ಆಗಮಿಸುವಂತೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರಿಗೆ ಬೆಂಗಳೂರಿನ ಅವರ ನಿವಾಸದಲ್ಲಿ ಆಹ್ವಾನಿಸಲಾಯಿತು. ಈ ವೇಳೆ ಮಠದ ಶ್ರೀ ಗುರುಶಾಂತ ಮಹಾಸ್ವಾಮಿ, ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾ ಅಧ್ಯಕ್ಷ ಕಾನ್ಯ ಶಿವಮೂರ್ತಿ, ಬಿಜೆಪಿ ಮುಖಂಡರಾದ ಸದಾನಂದ, ಸಿ.ಬಿ.ಬಸವರಾಜಪ್ಪ, ಡಿ.ಲೋಹಿತ್, ಸಮಾಜ ಸೇವಕರಾದ ಚಿಕ್ಕಹಳ್ಳಿ ಕುಮಾರ್, ಅಡಿಗೆ ರಾಜಣ್ಣ, ಚಿಕ್ಕಹಳ್ಳಿ ಮಹದೇವು, ಮಾದಪ್ಪಣ್ಣ, ಎಂ.ಎನ್.ಗಜೇಂದ್ರ, ಬ್ರಹ್ಮ ದೇವಣ್ಣ, ಹರೀಶ್ ಉಪಸ್ಥಿತರಿದ್ದರು.

ಗ್ಯಾಸ್ ಸೋರಿಕೆ, ಕಲುಷಿತ ನೀರು ಸೇವನೆಯಿಂದ ದುರಂತ

ಸಂತ್ರಸ್ತರ ಮನೆಗಳಿಗೆ ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭೇಟಿ



ಮೈಸೂರು, ಮೇ 22(ಎಂಟಿವೈ)– ಅನಿಲ ಸೋರಿಕೆಯಾಗಿ ಒಂದೇ ಕುಟುಂಬದ ನಾಲ್ವರು ಮೃತಪಟ್ಟ ಮೈಸೂರಿನ ಯರಗನಹಳ್ಳಿ ಹಾಗೂ ಕಲುಷಿತ ನೀರು ಸೇವಿಸಿ ಓರ್ವ ಮೃತಪಟ್ಟು ಹಲವರು ಅಸ್ವಸ್ಥರಾಗಿರುವ ಕೆ.ಸಾಲುಂಡಿ ಗ್ರಾಮದ ಸಂತ್ರಸ್ತರ ಮನೆಗಳಿಗೆ ನಾಳೆ (ಮೇ 23) ಸಂಜೆ ಮುಖ್ಯಮಂತ್ರಿ ಸಿದ್ದರಾಮಯ್ಯ ಭೇಟಿ ನೀಡಿ ಸಾಂತ್ವನ ಹೇಳುವುದರೊಂದಿಗೆ, ಪರಿಸ್ಥಿತಿ ಅವಲೋಕನ ನಡೆಸಲಿದ್ದಾರೆ.

ಬೆಂಗಳೂರಿನ ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ನಾಳೆ ಮಧ್ಯಾಹ್ನ 3 ಗಂಟೆಗೆ ಹೊರಟು ಮಧ್ಯಾಹ್ನ 3.25ಕ್ಕೆ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣ ತಲುಪಲಿದ್ದಾರೆ. ವಿಮಾನ ನಿಲ್ದಾಣದಿಂದ ರಸ್ತೆ ಮಾರ್ಗವಾಗಿ ಸಂಜೆ 4 ಗಂಟೆಗೆ ಮೈಸೂರಿನ ಯರಗನಹಳ್ಳಿಗೆ ಆಗಮಿಸಿ, ಅನಿಲ ಸೋರಿಕೆಯಾಗಿ ಒಂದೇ ಕುಟುಂಬದ ನಾಲ್ವರು ಮೃತಪಟ್ಟಿರುವ (ಕುಮಾರ್) ಅವರ ಮನೆಗೆ ಭೇಟಿ ನೀಡಿ, ಸಂಬಂಧಿಕರಿಗೆ ಸಾಂತ್ವನ ಹೇಳಲಿದ್ದಾರೆ. ಬಳಿಕ ಸಂಜೆ. 4.15ಕ್ಕೆ ಕಲುಷಿತ ನೀರು ಸೇವಿಸಿ ಓರ್ವ ಮೃತಪಟ್ಟು, ಹಲವರು ಅಸ್ವಸ್ಥರಾಗಿರುವ ಕೆ.ಸಾಲುಂಡಿ ಗ್ರಾಮಕ್ಕೆ ತೆರಳಿ ಅನಾರೋಗ್ಯಕ್ಕೀಡಾಗಿರುವವರ ಮಾಹಿತಿ ಪಡೆಯಲಿದ್ದಾರೆ. ಈ ವೇಳೆ ಗ್ರಾಮಸ್ಥರ ಆರೋಗ್ಯ ಕಾಪಾಡಲು ಕೈಗೊಂಡಿರುವ ಕ್ರಮಗಳ ಕುರಿತಂತೆಯೂ ಅಧಿಕಾರಿಗಳಿಂದ ಮಾಹಿತಿ ಪಡೆಯಲಿದ್ದಾರೆ.

ಬಳಿಕ ಸಂಜೆ 5 ಗಂಟೆಗೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ನೇತೃತ್ವದ ಜನಸ್ಪಂದನ ಟ್ರಸ್ಟ್ ಹಾಗೂ ಮಾನವ ಮಂಟಪ ಸಂಸ್ಥೆ ಕುವೆಂಪುನಗರದ ಚಿಕ್ಕಮ್ಮಾನಿಕೇತನ ಕಲ್ಯಾಣ ಮಂಟಪದಲ್ಲಿ ಆಯೋಜಿಸಿರುವ ಅಂತರ್ಜಾತಿ ವಿವಾಹಿತರ ಸಭೆ ಹಾಗೂ ಅಂತರ್ಜಾತಿ ದಂಪತಿಗಳ ನೋಂದಣಿ ವೆಬ್‌ಸೈಟ್ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ. ಸಂಜೆ 6ಕ್ಕೆ ಅಶೋಕ ವೃತ್ತ(ಬಲ್ಲಾಳ್ ವೃತ್ತ)ದಲ್ಲಿರುವ ವಿಶ್ವಮಿತ್ರ ಬುದ್ಧ ವಿಹಾರದಲ್ಲಿ ಆಯೋಜಿಸಿರುವ ಭಗವಾನ್ ಬುದ್ಧರ 2568ನೇ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ರಾತ್ರಿ ಮೈಸೂರಲ್ಲೇ ವಾಸ್ತವ್ಯ ಹೂಡಲಿದ್ದಾರೆ.

ಎನ್‌ಡಿಎ ಅಭ್ಯರ್ಥಿ ಕೆ.ವಿವೇಕಾನಂದ ಪರ ಪತ್ನಿ ಗೀತಾ ಮತಯಾಚನೆ



ವಿಧಾನಪರಿಷತ್ ಚುನಾವಣೆಯ ದಕ್ಷಿಣ ಶಿಕ್ಷಕರ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಕೆ.ವಿವೇಕಾನಂದ ಪರವಾಗಿ ಅವರ ಪತ್ನಿ ಗೀತಾ ವಿವೇಕಾನಂದ ಅವರು ಮೈಸೂರಿನ ಮರಿಮಲ್ಲಪ್ಪ, ಮಹಾರಾಣಿ ಸೈನ್ಸ್ ಕಾಲೇಜ್ ಸೇರಿದಂತೆ ಇನ್ನಿತರ ಕಾಲೇಜುಗಳಿಗೆ ಭೇಟಿ ನೀಡಿ, ಅಧ್ಯಾಪಕರು ಹಾಗೂ ಶಿಕ್ಷಕರಲ್ಲಿ ಕರಪತ್ರ ವಿತರಿಸಿ, ಮತ ಯಾಚಿಸಿದರು. ಇದೇ ಸಂದರ್ಭದಲ್ಲಿ ಕೃಷ್ಣಕುಮಾರ್, ನಾಗಾರ್ಜುನ್, ಪ್ರದೀಪ್, ಕೇಶವಮೂರ್ತಿ, ಯಶ್‌ಪಾಲ್, ಹನುಮಂತ್, ಪ್ರವಾಸಿ ಮಂಜು, ಮೈಸೂರು ನಗರ ಬಿಜೆಪಿ ಉಪಾಧ್ಯಕ್ಷರಾದ ಹೇಮಾನಂದೀಶ್, ನವೀನ್‌ಕುಮಾರ್, ರಶ್ಮಿ, ಕಾವೇರಿ, ಅನು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಅನ್ನ ನೀಡುವ ರೈತ, ದೇಶ ಕಾಯುವ ಸೈನಿಕ ಎರಡು ಕಣ್ಣುಗಳಿದ್ದಂತೆ

ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಅಭಿಮತ



ಮೈಸೂರು, ಮೇ 22–ದೇಶ ಕಾಯುವ ಸೈನಿಕ ಹಾಗೂ ಅನ್ನ ನೀಡುವ ರೈತರ ತ್ಯಾಗಕ್ಕೆ ಬೆಲೆ ಕಟ್ಟಲಾಗುವುದಿಲ್ಲ ಎಂದು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಅಭಿಪ್ರಾಯಪಟ್ಟರು.

ನಗರದ ಬೆಳವಾಡಿಯಲ್ಲಿರುವ ಸೈನಿಕ ಅಕಾಡೆಮಿಯಲ್ಲಿ ಸೈನಿಕ ಅಕಾಡೆಮಿ ಹಾಗೂ ಜೀವಧಾರ ರಕ್ತ ನಿಧಿ ಕೇಂದ್ರದ ಸಹಯೋಗದಲ್ಲಿ ಸೈನಿಕ ತರಬೇತಿಗಾಗಿ ಬಂದಂತಹ ಮಕ್ಕಳಿಗೆ ಉಚಿತ ರಕ್ತ ಪರೀಕ್ಷೆ ಮಾಡಿ, ರಕ್ತ ಗುಂಪಿನ ಗುರುತಿನ ಚೀಟಿಯನ್ನು ವಿತರಿಸಿ ಮಾತನಾಡಿದ ಅವರು, ರೈತರು ಮತ್ತು ಸೈನಿಕರು ಎರಡು ಕಣ್ಣುಗಳಿದ್ದಂತೆ, ಯಾವೊಂದನ್ನೂ ಕಡೆಗಾಣಿಸಲಾಗದು. ಪ್ರಾಣ ಪಣಕ್ಕಿಟ್ಟು ನಮ್ಮನ್ನು ಕಾಯುವವನು ಸೈನಿಕನಾದರೆ, ಹೊಟ್ಟೆ ತುಂಬಿಸುವ ಕಾರ್ಯವನ್ನು ರೈತ ಮಾಡುತ್ತಾನೆ ಎಂದು ಹೇಳಿದರು.

ದೇಶಕ್ಕಾಗಿ ಜೀವ ತ್ಯಾಗ ಮಾಡಿದ ಹುತಾತ್ಮರನ್ನು ಸ್ಮರಿಸುವ ಜವಾಬ್ದಾರಿ ಮಾಧ್ಯಮಗಳ ಮೇಲಿದೆ. ದೇಶಪ್ರೇಮಿಗಳನ್ನು ಬೆಳಕಿಗೆ ತರುವ, ಅವರಿಗೆ ಸೂಕ್ತ ಗೌರವ ಸಿಗುವಂತೆ ಮಾಡುವಲ್ಲಿ ಮಾಧ್ಯಮಗಳ ಕೊಡುಗೆ ಅಪಾರ ಎಂದರು.

ನಂತರ ಮಾತನಾಡಿದ ಸೈನಿಕ ಅಕಾಡೆಮಿ ಮೈಸೂರು ಸಂಸ್ಥಾಪಕರು ಹಾಗೂ ಮಾಜಿ ಕಮಾಂಡೋ ಶ್ರೀಧರ್ ಸಿ ಎಂ, ದೇಶದ ರಕ್ಷಣೆಗಾಗಿ ಸಾವಿರಾರು ಯೋಧರು ತಮ್ಮ ಜೀವವನ್ನೇ ಮುಡಿಪಾಗಿಟ್ಟಿದ್ದಾರೆ. ಅವರನ್ನು ನೆನೆಯುವುದು ಅತೀ ಮುಖ್ಯ. ಆ ದಿಸೆಯಲ್ಲಿ ಪೋಷಕರು ತಮ್ಮ ಮಕ್ಕಳನ್ನು ಯೋಧರನ್ನಾಗಿಸಬೇಕು. ಈ ಮೂಲಕವಾದರೂ ದೇಶಸೇವೆ ಮಾಡುವ ಭಾಗ್ಯ ಸಿಕ್ಕಿತಲ್ಲ ಎಂಬ ಧನ್ಯತೆ ಕಾಣಬೇಕು ಎಂದು ನುಡಿದರು.

ನಂತರ ಮಾತನಾಡಿದ ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಪ್ರತಿಯೊಬ್ಬರೂ ರಕ್ತದ ಗುಂಪನ್ನು ತಿಳಿದುಕೊಳ್ಳುವುದರಿಂದ ತುರ್ತು ಸಂದರ್ಭದಲ್ಲಿ ಶೀಘ್ರವಾಗಿ ರಕ್ತ ಪಡೆಯಲು ಹಾಗೂ ದಾನ ಮಾಡಲು ಸಹಕಾರಿಯಾಗುತ್ತದೆ. ಕೆಲವರಿಗೆ ಕಾಯಿಲೆಗಳು ಬಂದಾಗ ರಕ್ತ ಕಡಿಮೆ ಆಗುತ್ತದೆ. ಇಂತಹ ಸಂದರ್ಭದಲ್ಲಿ ಬೇರೊಬ್ಬರಿಂದ ತಕ್ಷಣವೇ ರಕ್ತ ಪಡೆಯಲು ರಕ್ತದ ಗುಂಪು ತಿಳಿದಿದ್ದರೆ ತುಂಬಾ ಅನುಕೂಲ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಮ ಅಯ್ಯಂಗಾರ್, ಬೈರತಿ ಲಿಂಗರಾಜು, ರವಿಚಂದ್ರ, ಅನಿತಾ ಶ್ರೀಧರ್, ಅಧ್ಯಾಪಕ ರಘು ಇತರರು ಉಪಸ್ಥಿತರಿದ್ದರು.

5 ದಿನದ ಮಗುವನ್ನು ಆಸ್ಪತ್ರೆಯಲ್ಲಿ ಬಿಟ್ಟು ಹೋದ ಮಹಿಳೆ

ಮಂಡ್ಯ, ಮೇ 22– ಮಂಡ್ಯ ಜಿಲ್ಲಾ ಆಸ್ಪತ್ರೆಯಲ್ಲಿ 5 ದಿನದ ಗಂಡು ಮಗುವೊಂದನ್ನು ಮಹಿಳೆಯೊಬ್ಬರು ಬಿಟ್ಟು ಹೋಗಿದ್ದು, ಮಗುವನ್ನು ರಕ್ಷಿಸಿ ಮಕ್ಕಳ ಕಲ್ಯಾಣ ಸಮಿತಿ ಮುಂದೆ ಹಾಜರುಪಡಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಗುವಿನ ಪೋಷಕರು ಇದ್ದಲ್ಲಿ ಪತ್ರಿಕೆಯಲ್ಲಿ ವರದಿ ಪ್ರಕಟವಾದ 60 ದಿನಗಳೊಳಗೆ ಮಗುವಿಗೆ ಸಂಬಂಧಿಸಿದ ದಾಖಲಾತಿಗಳೊಂದಿಗೆ ಮಕ್ಕಳ ಕಲ್ಯಾಣ ಸಮಿತಿ, ಬಾಲಕರ ಬಾಲ ಮಂದಿರ, 6ನೇ ಕ್ರಾಸ್, ಮರೀಗೌಡ ಬಡಾವಣೆ, ಮಂಡ್ಯ (ದೂರವಾಣಿ ಸಂ: 08232–220743) ಇಲ್ಲಿಗೆ ಭೇಟಿ ನೀಡುವಂತೆ ಪ್ರಕಟಣೆಯಲ್ಲಿ ಪೊಲೀಸರು ಮನವಿ ಮಾಡಿದ್ದಾರೆ.

ವಿದ್ಯುತ್ ಸ್ಪರ್ಶದಿಂದ ರೈತ ಸಾವು



ಭಾರತೀನಗರ: ಇಲ್ಲಿಗೆ ಸಮೀಪದ ಅಣ್ಣೂರು ಗ್ರಾಮದಲ್ಲಿ ರೈತನೋರ್ವ ವಿದ್ಯುತ್ ಸ್ಪರ್ಶದಿಂದ ಮೃತಪಟ್ಟಿರುವ ಘಟನೆ ಜರುಗಿದೆ.

ಅಣ್ಣೂರು ಗ್ರಾಮದ ಶಿವು(35) ಎಂಬುವವರು ಬೋರ್‌ವೆಲ್ ವಿದ್ಯುತ್ ಸ್ಪರ್ಶದಿಂದ ಮೃತಪಟ್ಟ ದುರ್ದೈವಿ.

ಬುಧವಾರ ಸಂಜೆ ಗ್ರಾಮದ ಹೊರವಲಯದಲ್ಲಿರುವ ತಮ್ಮ ಜಮೀನಿಗೆ ನೀರು ಬಿಡಲು ಬೋರ್‌ವೆಲ್ ಸ್ವಿಚ್ ಆನ್ ಮಾಡಲು ಹೋದಾಗ ವಿದ್ಯುತ್ ಸ್ಪರ್ಶ ಉಂಟಾಗಿ ಅಸ್ವಸ್ಥಗೊಂಡಿದ್ದರು. ತಕ್ಷಣ ಜಮೀನಿನ ಅಕ್ಕಪಕ್ಕದಲ್ಲಿದ್ದ ರೈತರು ಶಿವು ಅವರನ್ನು ಸ್ಥಳೀಯ ಆಸ್ಪರ್ ಜಿ.ಮಾದೇಗೌಡ ಆಸ್ಪತ್ರೆಗೆ ದಾಖಲು ಮಾಡಿದರಾದರೂ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದರು.

ಕೆ.ಎಂ.ದೊಡ್ಡಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮಕೈಗೊಂಡಿದ್ದಾರೆ. ಸೆಸ್ಕಾಂ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದರು.

ಜೂ.6 ರಂದು ಅಂಚೆ ಅದಾಲತ್

ಮಂಡ್ಯ, ಮೇ 22– ಜೂನ್ 6 ರಂದು ಮಧ್ಯಹ್ನ 3 ಗಂಟೆಗೆ ಮಂಡ್ಯ ವಿಭಾಗದ ಅಂಚೆ ಅಧೀಕ್ಷಕರ ಕಚೇರಿಯಲ್ಲಿ ಅಂಚೆ ಅದಾಲತ್ ಏರ್ಪಡಿಸಲಾಗಿದೆ.

ಸಾರ್ವಜನಿಕರು ಅಂಚೆ ಸೇವೆಗಳ ಬಗ್ಗೆ ಕುಂದು ಕೊರತೆಗಳಿದ್ದರೆ ಮೇ 28 ರೊಳಗೆ ಅಂಚೆ ಅಧೀಕ್ಷಕರ ಕಚೇರಿಗೆ ಲಿಖಿತ ರೂಪದಲ್ಲಿ ತಲುಪಿಸುವಂತೆ ತಿಳಿಸಲಾಗಿದೆ. ಇಚ್ಛೆಯುಳ್ಳ ಸಾರ್ವಜನಿಕರು ಅಂಚೆ ಅದಾಲತ್‌ನಲ್ಲಿ ತಮ್ಮ ಸ್ವಂತ ಖರ್ಚಿನಲ್ಲಿ ಭಾಗವಹಿಸಬಹುದು ಎಂದು ಮಂಡ್ಯ ವಿಭಾಗದ ಅಂಚೆ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಾಪಂ, ತಾಲೂಕು ಕಚೇರಿಗೆ ಡಿಸಿ ದಿಢೀರ್ ಭೇಟಿ

ಕುಂದು-ಕೊರತೆ ಕುರಿತು ಸಾರ್ವಜನಿಕರಿಂದ ಅಹವಾಲು ಸ್ವೀಕಾರ

ಮಂಡ್ಯ, ಮೇ22–ಜಿಲ್ಲಾಧಿಕಾರಿ ಡಾ.ಕುಮಾರ ಬುಧವಾರ ಮಂಡ್ಯ ತಹಶೀಲ್ದಾರ್ ಹಾಗೂ ತಾಲೂಕು ಪಂಚಾಯತ್ ಕಚೇರಿಗಳಿಗೆ ದಿಢೀರ್ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ತಾಲೂಕು ಕಚೇರಿಯಲ್ಲಿ ಸಾರ್ವಜನಿಕರೊಂದಿಗೆ ಕುಂದುಕೊರತೆಗಳ ಬಗ್ಗೆ ಚರ್ಚಿಸಿ, ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದರು. ತಾಲೂಕು ಕಚೇರಿಯಲ್ಲಿ ಕಳೆದ ಒಂದು ವಾರದಿಂದ ರೈತರಿಗೆ ಸುಂಬಂಧಪಟ್ಟಂತೆ ಆಧಾರ್ ಸೀಡಿಂಗ್ ನಡೆಯುತ್ತಿದೆ ಕೆಲಸಗಳನ್ನು ಪರಿಶೀಲಿಸಿದರು.

ಮಳೆ ಹೆಚ್ಚಿನ ಪ್ರಮಾಣದಲ್ಲಿ ಬಂದಿರುವ ಹಿನ್ನೆಲೆಯಲ್ಲಿ ಯಾವುದಾದರೂ ಮನೆ ಹಾನಿ ಅಥವಾ ಬೆಳೆ ಹಾನಿಯ ಬಗ್ಗೆ ವರದಿ ಸಿದ್ಧಪಡಿಸುತ್ತಿರುವ ಬಗ್ಗೆ ಅಧಿಕಾರಿಗಳು ಹಾಗೂ



ಜಿಲ್ಲಾಧಿಕಾರಿ ಡಾ.ಕುಮಾರ ಕಚೇರಿಗಳಿಗೆ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಸಿಬ್ಬಂದಿಗಳೊಂದಿಗೆ ಚರ್ಚಿಸಿದರು. ಕಂದಾಯ ಗ್ರಾಮಗಳಿಗೆ ಹಕ್ಕುಪತ್ರ ನೀಡುವ ಬಾಕಿ ಇರುವ ಪ್ರಕರಣಗಳು, ರಸ್ತೆ ಒತ್ತುವರಿ, 1 ಮತ್ತು 5 ತಿದ್ದುಪಡಿ, ಪಡಿತರ ಚೀಟಿ ಕುರಿತು ದೂರು ಬರುತ್ತಿದ್ದು, ಪರಿಶೀಲನೆ ನಡೆಸಿದರು. ಮಂಡ್ಯ ತಾಲೂಕಿನಲ್ಲಿ 410 ಹಕ್ಕು ಪತ್ರಗಳಿಗೆ ಡೇಟಾ ಎಂಟ್ರಿ ನಡೆಯುತ್ತಿದೆ. ಅವುಗಳನ್ನು ಸಹ ಪರಿಶೀಲಿಸಿದರು.


ರೈತರು ತಮ್ಮ ಪಹಣಿಗಳಿಗೆ ದಾಖಲೆಗಳಿಗೆ ಕಡ್ಡಾಯವಾಗಿ ಆಧಾರ್ ಸೀಡಿಂಗ್ ಆಗಬೇಕು ಎಂದು ಸರ್ಕಾರ ಆದೇಶ ಹೊರಡಿಸಿದೆ. ಅದರಂತೆ ಮಂಡ್ಯ ಜಿಲ್ಲೆಯಲ್ಲಿ ಕೂಡ ಈಗಾಗಲೇ 21 ಲಕ್ಷ ರೈತರ ಪೈಕಿ ಸುಮಾರು 1 ಲಕ್ಷದ 10 ಸಾವಿರ ಆಧಾರ್ ಸೀಡಿಂಗ್‌ನ್ನು ಕಳೆದ ಒಂದು ವಾರದಿಂದ ಮಾಡಲಾಗಿದೆ. ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾಧಿಕಾರಿಗಳು, ಸರ್ಕಾರದ ಆದೇಶದಂತೆ ಖಾತೆದಾರ ರೈತರ ಆಧಾರ್ ಸೀಡಿಂಗ್ ಯೋಜನೆಯಡಿ ಜಿಲ್ಲೆಯ 21 ಲಕ್ಷ ಖಾತೆದಾರ ರೈತರ ಪೈಕಿ ಈಗಾಗಲೇ 1.10 ಲಕ್ಷ ರೈತರ ಆಧಾರ್ ಲಿಂಕ್ ಮುಗಿಸಲಾಗಿದ್ದು ಜೂನ್ ಅಂತ್ಯದೊಳಗೆ ಆಧಾರ್ ಸೀಡಿಂಗ್ ಯೋಜನೆ ಪೂರ್ಣಗೊಳಿಸಲಾಗುವುದೆಂದರು.

ಈ ಸಂದರ್ಭದಲ್ಲಿ ಉಪವಿಭಾಗಾಧಿಕಾರಿ ಮಹೇಶ್, ತಹಶೀಲ್ದಾರ್ ಶಿವಕುಮಾರ್ ಬಿರಾದಾರ್, ಎಡಿಎಲ್ಆರ್ ಮಮತಾ, ಭೂಮಿ ಶಾಖೆ ಸಲಹೆಗಾರ ಲೋಹಿತ್, ಗ್ರಾಮ ಲೆಕ್ಕಾಧಿಕಾರಿ ತೇಜಸ್ ಗೌಡ ಇತರರು ಉಪಸ್ಥಿತರಿದ್ದರು.

ಮೇಲುಕೋಟೆಯಲ್ಲಿ ವೈಭವದ ನರಸಿಂಹ ಜಯಂತಿ

ಮೇಲುಕೋಟೆ : ರಾಜ್ಯದ ಪ್ರಖ್ಯಾತ ನಾರಸಿಂಹನ ಸನ್ನಿಧಿಯಲ್ಲೊಂದಾದ ಮೇಲುಕೋಟೆ ಯೋಗನರಸಿಂಹಸ್ವಾಮಿ ಬೆಟ್ಟದ ದೇಗುಲದಲ್ಲಿ ಬುಧವಾರ ನರಸಿಂಹ ಜಯಂತಿ ವೈಭವದಿಂದ ನೆರವೇರಿತು. ಸಹಸ್ರಾರು ಭಕ್ತರು ಭವ್ಯವಾಗಿ ಅಲಂಕೃತನಾದ ಯೋಗ ನರಸಿಂಹಸ್ವಾಮಿಯ ದರ್ಶನ ಪಡೆದರು.

ನರಸಿಂಹ ಜಯಂತಿ ಪ್ರಯುಕ್ತ ಬೆಟ್ಟದ ದೇವಾಲಯದ ಗರ್ಭಾಂಕಣ ಮತ್ತು ಸುಕನಾಸಿಯ ಮೇಲ್ಛಾವಣಿಯನ್ನು ಫಲವಸ್ತ್ರದಿಂದ ಭವ್ಯವಾಗಿ ಅಲಂಕಾರ ಮಾಡಲಾಗಿತ್ತು. ನರಸಿಂಹಾವತಾರ ಅವಿರ್ಭವಿಸಿದ ವೈಶಾಖ ಶುಕ್ಲ ಚತುರ್ದಶಿ ಸ್ವಾತಿ ನಕ್ಷತ್ರದ ಅಂಗವಾಗಿ ಯೋಗಾನರಸಿಂಹಸ್ವಾಮಿಗೆ ಹಾಲು, ಮೊಸರು, ಜೇನು ಮುಂತಾದ ಮಂಗಳ ದ್ರವ್ಯಗಳಿಂದ ವೇದಮಂತ್ರಗಳೊಂದಿಗೆ ಮಹಾಭಿಷೇಕ ನೆರವೇರಿಸಿ ಮಳೆ ಬೆಳೆ ಉಂಟಾಗಿ ನಾಡಿನಲ್ಲಿ ಸುಭಿಕ್ಷ ಉಂಟಾಗಲಿ ಎಂದು ಲೋಕಕಲ್ಯಾಣಾರ್ಥವಾಗಿ ಪ್ರಾರ್ಥಿಸಲಾಯಿತು. ನಂತರ ಸಂಜೆ ದಿವ್ಯಪ್ರಬಂಧ ಪಾರಾಯಣ ಶಾತ್ತುಮೊರೆ ಮಹಾಮಂಗಳಾರತಿ ನೆರವೇರಿತು ಇದಾದ ನಂತರ ಚೆಲುವನಾರಾಯಣ



ಸ್ವಾಮಿಗೆ ನರಸಿಂಹಾವತಾರ ಉತ್ಸವ ವೈಭವದಿಂದ ನೆರವೇರಿತು ಇದೇ ದಿನ ಮೇಲುಕೋಟೆ ಚೆಲುವನಾರಾಯಣಸ್ವಾಮಿ ದೇವಾಲಯದಲ್ಲಿ ನಮ್ಮಾಳ್ವಾರ್ ತಿರುನಕ್ಷತ್ರ ಮಹೋತ್ಸವ ಸಹ ವೈಭವದಿಂದ ಆಚರಿಸಲಾಯಿತು.

ಕಲ್ಯಾಣಿಯ ತೀರದಲ್ಲಿ ಬೃಹತ್ ಬೆಟ್ಟದ ಮೇಲೆ ನಿರ್ಮಾಣವಾಗಿರುವ ದೇಗುಲದಲ್ಲಿ ಸಾಲಿಗ್ರಾಮ ಶಿಲೆಯಲ್ಲಿ ಪಡಿಮೂಡಿರುವ ಯೋಗನರಸಿಂಹಸ್ವಾಮಿಯನ್ನು ಭಕ್ತ ಪ್ರಹ್ಲಾದ ಆರಾಧಿಸಿದ ಎಂಬ ಪ್ರತೀತಿಯಿದೆ. ಶಿಥಿಲಾವಸ್ಥೆಯಲ್ಲಿದ್ದ ವಿಜಯನಗರ ಶೈಲಿಯ ರಾಜಗೋಪುರವನ್ನು ನವೀಕರಿಸಿ ಪಂಚ ಕಳಸಗಳನ್ನು ಅಳವಡಿಸಲಾಗಿದೆ. ಬೆಟ್ಟದ ಯೋಗಾನರಸಿಂಹಸ್ವಾಮಿಯ ದೇಗುಲದ ದೃಶ್ಯ ಮೇಲುಕೋಟೆಯ ಸೌಂದರ್ಯಕ್ಕೆ ಕಳಸಪ್ರಾಯವಾಗಿದ್ದು ದಿನನಿತ್ಯ ಸಹಸ್ರಾರು ಭಕ್ತರನ್ನು ಆಕರ್ಷಿಸುತ್ತಿದೆ. ಕಳೆದ ಹತ್ತು ದಿನಗಳ ಕಾಲದಿಂದ ನಡೆಯುತ್ತಿದ್ದ ನರಸಿಂಹ ಜಯಂತಿಯ ಕಾರ್ಯಕ್ರಮಗಳು ಬುಧವಾರ ಸಂಪನ್ನಗೊಂಡಿತು.

ಜೂ.4, ನಾಲ್ವಡಿ ಕೃಷ್ಣರಾಜ ಒಡೆಯರ್ ಜನ್ಮದಿನ

ಮಂಡ್ಯ, ಮೇ 22– ಜೂನ್ 4ರಂದು ಮಂಡ್ಯ ಜಿಲ್ಲಾದ್ಯಂತ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 140ನೇ ಜನ್ಮದಿನವನ್ನು ಎಲ್ಲಾ ಸಂಘಟನೆಗಳು, ಸಂಘಸಂಸ್ಥೆಗಳು ಆಚರಿಸಬೇಕೆಂದು ನಾಲ್ವಡಿ ಕೃಷ್ಣರಾಜ ಒಡೆಯರ್ ಟ್ರಸ್ಟ್ ಅಧ್ಯಕ್ಷ ತಗಹಳ್ಳಿ ವೆಂಕಟೇಶ್ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಒಡೆಯರ್ ಅವರು ಮಾದರಿ ಮಹಾರಾಜರಾಗಿದ್ದಾರೆ. ಶಿಕ್ಷಣ, ಆರೋಗ್ಯ, ನೀರಾವರಿ, ಕೈಗಾರಿಕೆ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಸ್ವಾತಂತ್ರ್ಯ ಪೂರ್ವದಲ್ಲಿ ಹಿಂದುಳಿದವರಿಗೆ ಮೀಸಲಾತಿ ಕಲ್ಪಿಸಿ, ಗೆಜ್ಜೆಪೂಜೆಯಂತಹ ಅನಿಷ್ಟ ಪದ್ಧತಿಗೆ ಒಡೆಯರ್ ಅವರು ತಿಲಾಂಜಲಿ ನೀಡಿದ್ದಾರೆ. ದೇಶದಲ್ಲಿ ಜನಪರ, ಅಭಿವೃದ್ಧಿಪರ ಯೋಜನೆಗಳನ್ನು ಜಾರಿಗೆ ತಂದಿದ್ದಾರೆ ಎಂದು ನುಡಿದರು.

ಮೈಸೂರು ಮತ್ತು ಮಂಡ್ಯ ಜಿಲ್ಲೆಗೆ ಅವರು ನೀಡಿರುವ ಕೊಡುಗೆ ಅಪಾರವಾಗಿದೆ. ಹಾಗಾಗಿ ಅವರನ್ನು ಸ್ಮರಿಸುವುದು ಎಲ್ಲರ ಕರ್ತವ್ಯವಾಗಿದೆ. ಮಂಡ್ಯ ಜಿಲ್ಲೆಯ ಬರಡು ಭೂಮಿಯನ್ನು ಹಸಿರು ಮಾಡಿದ ಕೀರ್ತಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ಸಲ್ಲುತ್ತದೆ. ತಮ್ಮ ಕುಟುಂಬದವರ ಒಡವೆಗಳನ್ನು ಮಾರಿ ಕನ್ನಂಬಾಡಿ ಕಟ್ಟೆಯನ್ನು ನಿರ್ಮಿಸಿ ಕೃಷಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ ಎಂದು ತಿಳಿಸಿದರು.

ನೀರಾವರಿ, ಕೈಗಾರಿಕೆ ಒಡೆಯರ್ ಅವರ ಕೊಡುಗೆಯಾಗಿದೆ. ಇಡೀ ಏಷ್ಯಾದಲ್ಲಿಯೇ ಶಿಂಷಾದಲ್ಲಿ ವಿದ್ಯುತ್ ಯೋಜನೆಯನ್ನು ಪ್ರಥಮ ಬಾರಿಗೆ ಜಾರಿಗೆ ತಂದಿದ್ದಾರೆ.



ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿರುವ ತಗ್ಗಹಳ್ಳಿ ವೆಂಕಟೇಶ್.

ಶಾಲೆ, ಕಾಲೇಜು, ವಿಶ್ವವಿದ್ಯಾನಿಲಯ, ಆಸ್ಪತ್ರೆ ಹೀಗೆ ನೂರಾರು ಯೋಜನೆಗಳನ್ನು ಜಾರಿಗೆ ತಂದು ಜನೋಪಯೋಗಿ ಕೆಲಸ ಮಾಡಿದ್ದಾರೆ. ಅಲ್ಲದೆ ಸಾಹಿತ್ಯ ಕ್ಷೇತ್ರಕ್ಕೂ ಕೊಡುಗೆ ನೀಡಿದ್ದಾರೆ ಎಂದರು.

ಚಿತ್ರನಟರು, ಕ್ರೀಡಾಪಟುಗಳು, ರಾಜಕಾರಣಿಗಳ ಹುಟ್ಟುಹಬ್ಬವನ್ನು ಅವರ ಅಭಿಮಾನಿಗಳು ಮಾಡುತ್ತಿರುವುದನ್ನು ನೋಡುತ್ತಿದ್ದೇವೆ. ಇದು ಸಹಜ ಪ್ರಕ್ರಿಯೆಯಾಗಿದೆ. ಆದರೆ ನಮಗೆ ಅನ್ನ ನೀಡಿದ ರಾಜ್ಯಕ್ಕೆ ಹೊಸ ಆಯಾಮವನ್ನೇ ತಂದು ಕೊಟ್ಟ ಒಡೆಯರ್ ಅವರ ಜನ್ಮದಿನವನ್ನು ಸಡಗರ ಸಂಭ್ರಮದಿಂದ ಆಚರಿಸಬೇಕು. ಇದು ಎಲ್ಲರ ಕರ್ತವ್ಯವಾಗಿದೆ ಎಂದು ಹೇಳಿದರು.

ಸರ್ಕಾರಿ ಕಚೇರಿಗಳಲ್ಲಿ ಮತ್ತು ಇತರ ಸಂಘ, ಸಂಸ್ಥೆಗಳು, ಶಾಲಾ–ಕಾಲೇಜುಗಳು ಸೇರಿದಂತೆ ಎಲ್ಲೆಡೆ ಅವರ ಜನ್ಮದಿನವನ್ನು ಆಚರಿಸಲು ಆದೇಶಿಸುವಂತೆ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಅವರಿಗೆ ಮನವಿ ಮಾಡಿದ್ದೇವೆ. ಅವರು ಈ ಬಗ್ಗೆ ಸುತ್ತೋಲೆ ಹೊರಡಿಸುವುದಾಗಿ ಭರವಸೆ ನೀಡಿದ್ದಾರೆ. ಆದಕಾರಣ ಎಲ್ಲಾ ಸಂಘಟನೆಗಳು, ಸಂಘ ಸಂಸ್ಥೆಗಳು, ಗ್ರಾಮಪಂಚಾಯಿತಿಗಳು ಸ್ವಯಂ ಪ್ರೇರಿತವಾಗಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜನ್ಮ ದಿನಾಚರಣೆಯನ್ನು ಸಡಗರ ಸಂಭ್ರಮದಿಂದ ಸರಳ ರೀತಿಯಲ್ಲಿ ಆಚರಿಸಬೇಕು ಎಂದು ಮನವಿ ಮಾಡಿದರು.

ಗೋಷ್ಠಿಯಲ್ಲಿ ಟ್ರಸ್ಟ್‌ನ ಸಚಿನ್, ಮಂಜು, ಶಿವಣ್ಣ, ಉಮೇಶ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಬಿ.ಎಂ.ಶ್ರೀ ಎಜುಕೇಷನಲ್ ಇನ್‌ಸ್ಟಿಟ್ಯೂಷನ್‌ಗೆ ಶೇ.100 ಫಲಿತಾಂಶ

ಮೈಸೂರು, ಮೇ 22– ಈ ಸಾಲಿನ ಸಿಬಿಎಸ್‌ಸಿ ಪರೀಕ್ಷೆಯಲ್ಲಿ ಮೈಸೂರಿನ ಕುವೆಂಪುನಗರದ ಬಿ.ಎಂ.ಶ್ರೀ ಎಜುಕೇಷನಲ್ ಇನ್‌ಸ್ಟಿಟ್ಯೂಷನ್‌ಗೆ ಶೇ.100 ಫಲಿತಾಂಶ ಲಭಿಸಿದೆ. 74 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, 26 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿ, 47 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ ಹಾಗೂ ಓರ್ವ ವಿದ್ಯಾರ್ಥಿ ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ಕೆಪಿಟಿಸಿಎಲ್ ನೌಕರರ ಸಂಘದ ಚುನಾವಣೆ; ಮಧುಸೂದನ್ ತಂಡಕ್ಕೆ ಗೆಲುವು

ಕೆ.ಆರ್.ಪೇಟೆ: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ(ಕೆಪಿಟಿಸಿಎಲ್) ನೌಕರರ ಸಂಘದ 22ನೇ ತ್ರೈವಾರ್ಷಿಕ ಮಹಾಧಿವೇಶನದ ಪ್ರಾಥಮಿಕ ಪ್ರತಿನಿಧಿಗಳ ಆಯ್ಕೆಗೆ ನಡೆದ ಚುನಾವಣೆಯಲ್ಲಿ ಮಧುಸೂದನ್ ತಂಡವು ಭರ್ಜರಿ ಗೆಲುವು ಸಾಧಿಸಿದೆ.

ಕೆ.ರಘು ತಂಡವು ಹೀನಾಯ ಸೋಲನ್ನು ಅನುಭವಿಸಿದೆ. ಮಧುಸೂದನ್ ತಂಡದ ಕೆ.ಮಧುಸೂದನ್–142 ಮತಗಳು, ಕಿರಣ್.ಎಂ.ಡಿ–119 ಮತಗಳು, ಶ್ರೀಧರ್– 118 ಮತಗಳನ್ನು ಪಡೆದು ವಿಜಯಶಾಲಿಯಾಗಿದ್ದಾರೆ.

ರಘು ತಂಡದಿಂದ ರಘು.ಕೆ–110 ಮತಗಳನ್ನು ಜಯ ಸಾಧಿಸಿದ್ದು, ಈ ತಂಡದ ಉಳಿದ ಮೂವರು ಸ್ಪರ್ಧಿಗಳಾದ ರಾಜೇಗೌಡ–73 ಮತಗಳು, ಜಿ.ಎಸ್.ರಾಜೇಶ್–73 ಮತಗಳು, ಅನಂತಗೌಡ–58 ಮತಗಳನ್ನು ಪಡೆದು ಸೋಲು ಕಂಡಿದ್ದಾರೆ.

ಮಧುಸೂಧನ್ ತಂಡದಿಂದ ಸ್ಪರ್ಧಿಸಿದ್ದ ಬೂಕನಕೆರೆ ಕೆಪಿಟಿಸಿಎಲ್ ಶಾಖೆಯ ಕಿರಿಯ ಇಂಜಿನಿಯರ್ ಟಿ.ಜಿ.ತಿಮ್ಮಪ್ಪ–106 ಮತಗಳನ್ನು ಪಡೆಯುವ ಮೂಲಕ ಕೂದಲೆಳೆಯ ಅಂತರದಲ್ಲಿ ಪರಾಜಯಗೊಂಡಿದ್ದಾರೆ.

ಚುನಾವಣಾಧಿಕಾರಿಯಾಗಿ ವಕೀಲ ಎಂ.ಸಿ.ಪ್ರವೀಣ್‌ಕುಮಾರ್ ಕಾರ್ಯನಿರ್ವಹಿಸಿದರು.



ನೂತನವಾಗಿ ಆಯ್ಕೆಯಾದ ಎಲ್ಲಾ ನಾಲ್ಕೂ ಮಂದಿ ಪ್ರತಿನಿಧಿಗಳನ್ನು ಸ್ಥಳೀಯ ಕೆಪಿಟಿಸಿಎಲ್ ಸ್ಥಳೀಯ ಸಮಿತಿಯ ಅಧ್ಯಕ್ಷ ರವೀಂದ್ರಕುಮಾರ್ ಕಾರ್ಯದರ್ಶಿ ಕೆ.ಎನ್.ಜಯಪಾಲ್ ಹಾಗೂ ನಿಗಮದ ಎಲ್ಲಾ ನೌಕರರು ಅಭಿನಂದಿಸಿದ್ದಾರೆ.

ಒಂದನೇ ಪುಟದಿಂದ

ಮನೆಯಲ್ಲಿ ಮಲಗಿದ್ದಲ್ಲೇ ಒಂದೇ ಕುಟುಂಬದ ನಾಲ್ವರು ಸಾವು



ಮೃತರ ಮನೆ ಬಳಿ ಭಾರಿ ಸಂಖ್ಯೆಯಲ್ಲಿ ಜನ ಸೇರಿರುವುದು ಹಾಗೂ ಸಂಬಂಧಿಕರು, ನೆರೆಹೊರೆಯವರು ರೋದಿಸುತ್ತಿರುವುದು.

ಹಳ್ಳಿಯಲ್ಲಿ ಚಿಕ್ಕ ಕಲ್ನಾರ್‌ಶೀಟ್ ಮನೆಯೊಂದರಲ್ಲಿ ನೆಲೆಸಿದ್ದರು. ಹಿರಿಯ ಪುತ್ರಿ ಅರ್ಚನಾ ಟೆರೆಷಿಯನ್ ಕಾಲೇಜಿನಲ್ಲಿ ಎಂಕಾಂ ಓದುತ್ತಿದ್ದರೆ, ಕಿರಿಯ ಪುತ್ರಿ ಸ್ವಾತಿ, ನಜರಬಾದ್ ವಾಣಿವಿಲಾಸ ಅರಸು ಕಾಲೇಜಿನಲ್ಲಿ ಬಿಕಾಂ ವ್ಯಾಸಂಗ ಮಾಡುತ್ತಿದ್ದರು.

ಕಳೆದ ಭಾನುವಾರ ಊರಿಗೆ ಕುಟುಂಬ ಸಮೇತ ಹೋಗಿದ್ದ ಕುಮಾರ್, ಸಂಬಂಧಿಕರ ಮದುವೆ ಸಮಾರಂಭದಲ್ಲಿ ಪಾಲ್ಗೊಂಡು ಸೋಮವಾರ ರಾತ್ರಿ ಹಿಂದಿರುಗಿ ಬಂದು ಊಟ ಮಾಡಿ ಮಲಗಿದ್ದಾರೆ. ಮರುದಿನ ಮಂಗಳವಾರ ಯಾರೂ ಮನೆಯಿಂದ ಹೊರಬಾರದೇ ಇದ್ದಾಗ ಮನೆಯಲ್ಲಿ ಯಾರೂ ಇಲ್ಲವೇನೋ ಎಂದು ಅಕ್ಕ ಪಕ್ಕದ ಮನೆಯವರು ಅತ್ತ ಗಮನ ಹರಿಸಿರಲಿಲ್ಲ.

ಮಂಗಳವಾರ ಸಂಬಂಧಿಕರೊಬ್ಬರು ಕುಮಾರ್, ನಂತರ ಅವರ ಪತ್ನಿ, ತದನಂತರ ಪುತ್ರಿಯರ ಫೋನ್‌ಗಳಿಗೆ ಕರೆ ಮಾಡಿದ್ದಾರೆ. ಎಲ್ಲಾ ನಾಲ್ಕು ಮೊಬೈಲ್ ಫೋನ್‌ಗಳು ಸ್ವಿಚ್ ಆಫ್ ಆಗಿದ್ದರಿಂದ ಆತಂಕಗೊಂಡ ಅವರು ಇಂದು ಬೆಳಿಗ್ಗೆ ತಮ್ಮ ಪುತ್ರ ಭರತನನ್ನು ಯರಗನಹಳ್ಳಿಯ ಕುಮಾರ್ ಅವರ ಮನೆಗೆ ಕಳುಹಿಸಿದ್ದಾರೆ. ಬುಧವಾರ ಬೆಳಿಗ್ಗೆ 9 ಗಂಟೆಗೆ ಬಂದ ಭರತ್ ಮೊದಲು ಮನೆ ಬಾಗಿಲು ಎಷ್ಟೇ ತಟ್ಟಿದರೂ ತೆರೆಯದ ಕಾರಣ, ಕಿಟಕಿ ಬಾಗಿಲು ತೆರೆದು ನೋಡಿದಾಗ ಕೆಟ್ಟ ವಾಸನೆ ಬರುತ್ತಿದ್ದು, ನಾಲ್ವರೂ ಹಾಲ್‌ನಲ್ಲಿ ಮಲಗಿರುವುದು ಕಂಡುಬಂದಿದೆ. ಅನುಮಾನ, ಗಾಬರಿಯಿಂದ ಆತ ನೆರೆಹೊರೆಯವರನ್ನು ಕರೆದಿದ್ದಾನೆ. ಎಲ್ಲರೂ ಬಂದು ನೋಡಿದಾಗ, ಕುಮಾರ್ ಕುಟುಂಬದವರೆಲ್ಲರೂ ಸಾವನ್ನಪ್ಪಿದ್ದಾರೆಂಬುದು ಖಾತರಿಯಾಗಿದೆ. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಅಲನಹಳ್ಳಿ ಠಾಣೆ ಪ್ರಭಾರ ಇನ್ಸ್‌ಪೆಕ್ಟರ್ ಮಹದೇವಸ್ವಾಮಿ ಹಾಗೂ ಸಿಬ್ಬಂದಿ, ಮಹಜರು ನಡೆಸಿದ್ದಾರೆ. ಅಡುಗೆ ಅನಿಲ ಸಿಲಿಂಡರ್ ಸೋರಿಕೆಯಾಗಿ ನಾಲ್ವರು ಸಾವನ್ನಪ್ಪಿರಬಹುದೆಂದು ಶಂಕೆ ವ್ಯಕ್ತಪಡಿಸಿದ್ದಾರೆ.

ಮನೆಯಲ್ಲಿ ಅಡುಗೆ ಅನಿಲದ ಸೋರಿಕೆಯಾಗಿ ವಾಸನೆ ದಟ್ಟವಾಗಿದ್ದು, ಮೃತದೇಹಗಳು ಊದಿಕೊಂಡಿದ್ದು, ಅವುಗಳಿಂದಲೂ ಕೆಟ್ಟ ವಾಸನೆ ಬರುತ್ತಿತ್ತು. ಮೃತದೇಹಗಳ ಬಾಯಲ್ಲೂ ರಕ್ತಬರುತ್ತಿದ್ದುದು ಮಹಜರು ವೇಳೆ ಕಂಡು ಬಂದಿತು. ಮಾಹಿತಿ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಡಿಸಿಪಿ ಎಂ.ಮುತ್ತುರಾಜ್ ಆಗಮಿಸಿ ಪರಿಶೀಲಿಸಿದರು. ಅಪರಾಧ ತನಿಖಾಧಿಕಾರಿಗಳು, ಶ್ವಾನದಳ, ಬೆರಳಚ್ಚು ಮುದ್ರೆ ಘಟಕ, ಎಫ್‌ಎಸ್‌ಎಲ್, ಅಗ್ನಿಶಾಮಕ ದಳದ ಅಧಿಕಾರಿಗಳು ಘಟನಾ ಸ್ಥಳಕ್ಕೆ ಧಾವಿಸಿ, ಪರಿಶೀಲನೆ ನಡೆಸಿದರು.

ಎಲ್‌ಪಿಜಿ ಸಿಲಿಂಡರ್‌ನಿಂದ ಕಟ್ಟಕಡೆಗೆ ಹೊರಸೂಸುವ ಕಾರ್ಬನ್ ಮೋನಾಕ್ಸೈಡ್ ಸೋರಿಕೆಯಾಗಿರುವುದು ನಾಲ್ವರ ಸಾವಿಗೆ ಕಾರಣವಿರಬಹುದೆಂದು ಶಂಕಿಸಲಾಗಿದೆ. ಮೇಲ್ನೋಟಕ್ಕೆ ಅನಿಲ ಸೋರಿಕೆಯಿಂದಾಗಿ ಘಟನೆ ಸಂಭವಿಸಿದೆ ಎಂದು ಕಂಡು ಬಂದಿದೆಯಾದರೂ, ಎಫ್‌ಎಸ್‌ಎಲ್ ವರದಿ, ಮರಣೋತ್ತರ ಪರೀಕ್ಷಾ ವರದಿ ಅಧರಿಸಿ ಪೊಲೀಸರು ತನಿಖೆ ಬಳಿಕ ಸಾವಿಗೆ ನಿಖರ ಕಾರಣ ತಿಳಿಯಲಿದೆ. ಈ ಪುಟ್ಟ ಮನೆಯ ಕಿಟಕಿ ಬಾಗಿಲನ್ನು ಬಂದ್ ಮಾಡಿದ್ದರಿಂದ ಸೋರಿಕೆಯಾದ ಅನಿಲ ಹೊರಗೆ ಹೋಗಲು ಆಸ್ಪದವಾಗದೇ ಗಾಢ ನಿದ್ರೆಯಲ್ಲಿದ್ದಾಗ ಕುಮಾರ್, ಪತ್ನಿ, ಪುತ್ರಿಯರು ಮಲಗಿದ್ದಲ್ಲೇ ಸಾವನ್ನಪ್ಪಿರುವ ಸಾಧ್ಯತೆ ಇದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಕರಣ ದಾಖಲಿಸಿಕೊಂಡಿರುವ ಅಲನಹಳ್ಳಿ ಠಾಣೆ ಪೊಲೀಸರು, ನಾಲ್ವರ ದೇಹಗಳನ್ನು ಬನ್ನಿಮಂಟಪದ ಜೆಎಸ್‌ಎಸ್ ಮೆಡಿಕಲ್ ಕಾಲೇಜಿನ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ವಾರಸುದಾರರಿಗೆ ಒಪ್ಪಿಸಿದರು. ಸಂಬಂಧಿಕರು ದೇಹಗಳನ್ನು ಆಂಬುಲೆನ್ಸ್‌ನಲ್ಲಿ ಕಡೂರು ತಾಲೂಕಿನ ಸಕ್ಕರೆಪಟ್ಟಣಕ್ಕೆ ಇಂದು ಸಂಜೆಯೇ ಕೊಂಡೊಯ್ದು, ಅಂತ್ಯಕ್ರಿಯೆ ನೆರವೇರಿಸಿದರು ಎಂದು ಅಲನಹಳ್ಳಿ ಠಾಣೆ ಸಬ್‌ಇನ್ಸ್‌ಪೆಕ್ಟರ್ ಗಂಗಾಧರ ತಿಳಿಸಿದ್ದಾರೆ.

ಗ್ಯಾಸ್ ಬಳಸುತ್ತಿದ್ದರು!

ಆಗಿದ್ದರಿಂದ ಸಂಬಂಧಿಕರು ಬಂದು ನೋಡಿದಾಗ ಎಲ್ಲಾ ನಾಲ್ಕು ಜನರೂ ಸಾವಿಗೀಡಾಗಿರುವುದು ಕಂಡುಬಂದಿದೆ ಎಂದರು. ಕೇವಲ 10X20 ಅಡಿ ಅಳತೆಯ ಮನೆಗೆ ಹಿಂದೆ–ಮುಂದೆ ಮಾತ್ರ ಚಿಕ್ಕ ಕಿಟಕಿಗಳಿವೆ. ಮನೆಯಲ್ಲಿ 3 ಅಡುಗೆ ಸಿಲಿಂಡರ್‌ಗಳಿದ್ದು, ಒಂದರಲ್ಲಿ ಗ್ಯಾಸ್ ಇತ್ತು. ಅದೇ ಸಿಲಿಂಡರ್‌ನಿಂದ ಅನಿಲ ಸೋರಿಕೆಯಾಗಿದೆ. ಕಿಟಕಿ ಬಾಗಿಲು ಮುಚ್ಚಿದ್ದರಿಂದ ಗ್ಯಾಸ್ ಸಂಗ್ರಹವಾಗಿ ಮಲಗಿದ್ದ ಕುಮಾರ್, ಪತ್ನಿ ಮಂಜುಳಾ ಮತ್ತು ಪುತ್ರಿಯರಿಬ್ಬರೂ ಸಾವನ್ನಪ್ಪಿರಬಹುದೆಂದು ಪೊಲೀಸ್ ಆಯುಕ್ತರು ತಿಳಿಸಿದರು. ಬಟ್ಟೆ ಇಸ್ತ್ರಿ ಮಾಡಲೂ ಅಡುಗೆ ಅನಿಲವನ್ನೇ ಬಳಸುತ್ತಿದ್ದರು ಎಂಬ ಮಾಹಿತಿ ಇದೆ. ಎಫ್‌ಎಸ್‌ಎಲ್, ಮರಣೋತ್ತರ ಪರೀಕ್ಷಾ ವರದಿ, ಗ್ಯಾಸ್ ಸಿಲಿಂಡರ್ ಟೆಕ್ನಿಷಿಯನ್‌ಗಳ ಅಭಿಪ್ರಾಯ ಹಾಗೂ ತನಿಖಾ ವರದಿ ಬಂದ ನಂತರ ಘಟನೆಗೆ ನಿಖರ ಕಾರಣ ಏನೆಂಬುದು ತಿಳಿಯುತ್ತದೆ ಎಂದು ಅವರು ಹೇಳಿದರು.

ಅನಿಲ ಸಿಲಿಂಡರ್ ಸುರಕ್ಷತೆಗೆ ಕ್ರಮ

ಮೈಸೂರು, ಮೇ 22 (ಆರ್‌ಕೆ): ಮನೆ, ಕಚೇರಿ, ಅಂಗಡಿ, ಹೋಟೆಲ್, ಉದ್ದಿಮೆ ಹಾಗೂ ಇತರೆಡೆ ಗ್ಯಾಸ್ ಸಿಲಿಂಡರ್ ಬಳಸುವಾಗ ಸುರಕ್ಷತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಅನುಸರಿಸುವುದು ಅಗತ್ಯ.

ಮನೆಯಲ್ಲಿ ಅಡುಗೆ ಮಾಡುವಾಗ ಆನ್ ಮಾಡಿದ ಗ್ಯಾಸ್ ಸ್ಟೌವ್ ಅನ್ನು ಅಡುಗೆ ನಂತರ ತಕ್ಷಣ ಆಫ್ ಮಾಡಬೇಕು ಅದೇ ರೀತಿ ರಾತ್ರಿ ಮಲಗುವಾಗ ಸ್ಟೌವ್‌ಗೆ ಸಂಪರ್ಕವಿರುವ ಸಿಲಿಂಡರ್ ಅನ್ನು ಆಫ್ ಮಾಡುವುದು ಅಗತ್ಯ.

ಒಂದು ವೇಳೆ ಬಾಗಿಲು ಕಿಟಕಿ ಬಂದ್ ಮಾಡಿ ಮನೆಗೆ ಬೀಗ ಹಾಕಿಕೊಂಡು ಹೊರಗೆ ಹೋಗಿ ಹಿಂತಿರುಗಿದಾಗ ತಕ್ಷಣ ಮನೆಯ ಲೈಟ್, ಫ್ಯಾನ್ ಸ್ವಿಚ್ ಆನ್ ಮಾಡಬಾರದು. ಬಾಗಿಲು, ಕಿಟಕಿ ತೆರೆದು ಸ್ವಲ್ಪ ಸಮಯದ ನಂತರವಷ್ಟೇ ಎಲೆಕ್ಟ್ರಿಕ್ ಸ್ವಿಚ್‌ಗಳನ್ನು ಆನ್ ಮಾಡಬೇಕು. ಸ್ನಾನ ಮಾಡುವಾಗ ಗ್ಯಾಸ್ ಗೀಜರ್ ಬಳಸುತ್ತಿದ್ದರೆ ಸೂಕ್ತ ವೆಂಟಿಲೇಷನ್ ಇರುವ ಹಾಗೆ ನೋಡಿಕೊಂಡು, ಸ್ನಾನ ಮುಗಿದ ಬಳಿಕ ಗೀಜರ್ ಮತ್ತು ಸಿಲಿಂಡರ್ ಆಫ್ ಮಾಡುವುದನ್ನು ಮರೆಯಬಾರದು. ಆಗಿಂದಾಗ್ಗೆ ಸಿಲಿಂಡರ್ ನಾಜಲ್, ಪೈಪ್ ಅನ್ನು ಪರಿಶೀಲಿಸಿಕೊಂಡು, ಒಂದು ವೇಳೆ ಗ್ಯಾಸ್ ವಾಸನೆ ಬರುತ್ತಿದ್ದರೆ, ತಕ್ಷಣ ಎಚ್ಚೆತ್ತುಕೊಂಡು ಸೋರಿಕೆಯಾಗುತ್ತಿರುವ ಬಗ್ಗೆ ಪರಿಶೀಲಿಸಿ ಕಿಟಕಿ–ಬಾಗಿಲು ತೆರೆದು ಟೆಕ್ನಿಷಿಯನ್ ಕರೆಸಿ ಪರಿಶೀಲಿಸಬೇಕು ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಗ್ಯಾಸ್ ಸಿಲಿಂಡರ್‌ಗಳನ್ನು ಆಗಿಂದಾಗ್ಗೆ ಪರೀಕ್ಷಿಸಿಕೊಂಡು ಲೀಕೇಜ್ ಆಗುತ್ತಿದ್ದರೆ, ವಾಷರ್‌ನಲ್ಲಿ ತೊಂದರೆ ಇದ್ದರೆ ಸರಿಪಡಿಸಿಕೊಳ್ಳಿ. ಸಂಪರ್ಕ ಪೈಪ್ ಅನ್ನು ಬಹಳ ವರ್ಷಗಳವರೆಗೆ ಬಳಸದೇ ಆಗಿಂದಾಗ ಬದಲಿಸಿಕೊಳ್ಳುವುದು ಸುರಕ್ಷತೆ ದೃಷ್ಟಿಯಿಂದ ಒಳ್ಳೆಯದು ಎಂದು ಅವರು ತಿಳಿಸಿದ್ದಾರೆ.

ಅನಿಲ ಸೋರಿಕೆಯಿಂದ ಮೃತಪಟ್ಟ ಕುಟುಂಬಕ್ಕೆ ತಲಾ 3 ಲಕ್ಷ ರೂ.

ಡಾ.ಹೆಚ್.ಸಿ.ಮಹದೇವಪ್ಪ ಘೋಷಣೆ

ಮೈಸೂರು, ಮೇ 22–ಮೈಸೂರಿನ ಯರಗನಹಳ್ಳಿಯಲ್ಲಿ ಅಡುಗೆ ಅನಿಲ ಸೋರಿಕೆಯಿಂದ ಮೃತಪಟ್ಟ ಕುಟುಂಬಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಆದೇಶದ ಮೇರೆಗೆ ಸರ್ಕಾರದ ವತಿಯಿಂದ ತಲಾ 3 ಲಕ್ಷ ರೂಗಳನ್ನು ಅವರ ಕುಟುಂಬದವರಿಗೆ ವಿತರಿಸುವುದಾಗಿ ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ತಿಳಿಸಿದರು.

ಶವಾಗಾರಕ್ಕೆ ಭೇಟಿ ನೀಡಿ ಮೃತದೇಹಗಳನ್ನು ವೀಕ್ಷಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇದೊಂದು ದುರಂತ ಘಟನೆಯಾಗಿದ್ದು, ಇಡೀ ಕುಟುಂಬ ಜೀವ ಕಳೆದುಕೊಂಡಿದೆ. ಸಾರ್ವಜನಿಕರು ಅಡುಗೆ ಅನಿಲ ಉಪಯೋಗಿಸುವಾಗ ಮತ್ತು ನಂತರ ಜಾಗೃತರಾಗಿರಬೇಕು.



ಇಂತಹ ಅನಾಹುತಗಳು ಮುಂದೆ ಸಂಭವಿಸದಂತೆ ಅನಿಲ ಕಂಪನಿಗಳು ಹಾಗೂ ವಿತರಕರು ಸಾರ್ವಜನಿಕರಿಗೆ ಜಾಗೃತಿ ಮೂಡಿಸಲು ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು. ಈ ಸಂದರ್ಭದಲ್ಲಿ ಮುಡಾ ಅಧ್ಯಕ್ಷ ಕೆ.ಮರೀಗೌಡ ಹಾಜರಿದ್ದರು.

ಜೂ.6ರಂದು ಚುನಾವಣೆ: ಮೂರೂ ಪಕ್ಷದಲ್ಲಿ ತೀವ್ರಲಾಬಿ

ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸಂಬಂಧಿಸಿದಂತೆ ಇಂದು ತಮ್ಮ ಸಂಪುಟ ಸಹೋದ್ಯೋಗಿಗಳ ಜೊತೆ ಭೋಜನ ಕೂಟದಲ್ಲಿ ಸುದೀರ್ಘ ಸಮಾಲೋಚನೆ ನಡೆಸಿದ್ದಾರೆ. ಪರಿಷತ್ ಸದಸ್ಯತ್ವದಿಂದ ನಿವೃತ್ತಿ ಹೊಂದುತ್ತಿರುವ ಬಹುತೇಕರಿಗೆ ಮತ್ತೆ ಟಿಕೆಟ್ ದೊರೆಯುವ ಸಾಧ್ಯತೆ ಇಲ್ಲ. ಇನ್ನು ಕಾಂಗ್ರೆಸ್‌ನಲ್ಲಿ ಸಿದ್ದರಾಮಯ್ಯ ಸಂಪುಟದ ಸದಸ್ಯರಾಗಿರುವ ಎನ್.ಎಸ್.ಬೋಸರಾಜು ಅವರ ಸದಸ್ಯತ್ವ ಅವಧಿ ಮುಕ್ತಾಯವಾಗುತ್ತಿದ್ದು ಈ ಹಿನ್ನೆಲೆಯಲ್ಲಿ ಅವರನ್ನು ಪುನಃ ಆಯ್ಕೆ ಮಾಡುವುದು ಖಚಿತವಾಗಿದೆ.

ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು ಅವರ ಸದಸ್ಯತ್ವದ ಅವಧಿ ಮುಕ್ತಾಯವಾಗುತ್ತಿದ್ದು, ಈ ಹಿನ್ನೆಲೆಯಲ್ಲಿ ಮತ್ತೊಂದು ಅವಧಿಗೆ ಮುಂದುವರಿಯಲು ಅವರು ಬಯಸಿದ್ದಾರೆ. ಸಿದ್ದರಾಮಯ್ಯ ತಮ್ಮ ಪುತ್ರನ ಬದಲು ಪಕ್ಷದ ಕಾರ್ಯಕರ್ತ ಡಾ. ಬಿ.ಜೆ.ವಿಜಯಕುಮಾರ್ (ಮೈಸೂರು) ಅವರಿಗೆ ಒಕ್ಕಲಿಗ ಕೋಟಾದಿಂದ ನೀಡುವಂತೆ ಕೆಪಿಸಿಸಿ ಅಧ್ಯಕ್ಷರಿಗೆ ಸಲಹೆ ಮಾಡಿದ್ದಾರೆ. ಆದರೆ, ಶಿವಕುಮಾರ್ ತಮ್ಮ ರಾಜಕೀಯ ದೂರದೃಷ್ಟಿಯಿಂದ ಡಾ.ಯತೀಂದ್ರ ಅವರನ್ನೇ ಪರಿಷತ್ತಿಗೆ ಅಭ್ಯರ್ಥಿ ಮಾಡಬೇಕೆಂದು ಪಟ್ಟು ಹಿಡಿದಿದ್ದಾರೆ. ಅದೇ ರೀತಿ ನಟರಾಜ್ ಗೌಡ, ಚಾಮರಾಜನಗರ ಜಿಲ್ಲೆ ಹನೂರು ಮಾಜಿ ಶಾಸಕ ಆರ್.ನರೇಂದ್ರ, ಬಿ.ಎಲ್. ಶಂಕರ್ ಸೇರಿದಂತೆ ಹಲವು ಮಂದಿ ಕಾಂಗ್ರೆಸ್ ಟಿಕೆಟ್‌ಗಾಗಿ ಲಾಬಿ ನಡೆಸಿದ್ದು, ಈ ಮಧ್ಯೆ ಜಾತಿ, ಪ್ರದೇಶವಾರು ಪ್ರಾತಿನಿಧ್ಯ ನೀಡಲು ಕಾಂಗ್ರೆಸ್ ಕಸರತ್ತು ಆರಂಭಿಸಿದೆ. ಕುರುಬ, ಒಕ್ಕಲಿಗ, ಲಿಂಗಾಯತ, ಪರಿಶಿಷ್ಟ ಜಾತಿ, ಪಂಗಡ, ಅಲ್ಪಸಂಖ್ಯಾತ ಮತ್ತು ಮಹಿಳೆಗೆ ಪ್ರಾತಿನಿಧ್ಯ ನೀಡಲು ನಿರ್ಧರಿಸಿರುವ ಕಾಂಗ್ರೆಸ್ ಟಿಕೆಟ್ ನೀಡುವ ಸಂಬಂಧ ಮೇ 27ರಂದು ಅಭ್ಯರ್ಥಿಗಳ ಆಯ್ಕೆ ನಡೆಸಲಿದೆ.

ಈ ಚರ್ಚೆಯ ನಂತರ ಪಕ್ಷದ ಅಭ್ಯರ್ಥಿಗಳ ಪಟ್ಟಿ ತಯಾರಾಗಲಿದ್ದು ಮೇ 29ರಂದು ದಿಲ್ಲಿಯಲ್ಲಿ ನಡೆಯಲಿರುವ ಚರ್ಚೆಯ ನಂತರ ಅಂತಿಮ ಪಟ್ಟಿ ಸಿದ್ಧವಾಗಲಿದೆ. ಬಿಜೆಪಿಗೆ 3 ಸ್ಥಾನಗಳನ್ನು ಗೆಲ್ಲಲು ಅವಕಾಶವಿದ್ದು ಹಿರಿಯ ನ್ಯಾಯವಾದಿ ಅಶೋಕ್ ಹಾರ್ನಳ್ಳಿ, ಹಾಲಿ ಸದಸ್ಯರಾಗಿರುವ ರವಿಕುಮಾರ್ ಅವರಿಗೆ ಟಿಕೆಟ್ ಖಚಿತವಾಗಿದ್ದು, ಉಳಿದ ಒಂದು ಸ್ಥಾನ ಪಕ್ಷದ ಮಹಿಳಾ ಘಟಕದ ಅಧ್ಯಕ್ಷೆ ಮಂಜುಳಾ ಇಲ್ಲವೇ ಸಿ.ಟಿ.ರವಿ ಅವರಿಗೆ ದೊರೆಯಲಿದೆ.

ಜಾತ್ಯತೀತ ಜನತಾದಳಕ್ಕೆ ಒಂದು ಸ್ಥಾನ ಗೆಲ್ಲುವ ಅವಕಾಶವಿದ್ದು ಕುಪೇಂದ್ರ ರೆಡ್ಡಿ, ಬಿ.ಎಂ.ಫಾರೂಕ್ ಮತ್ತು ಜವರಾಯಿಗೌಡರ ಮಧ್ಯೆ ತೀವ್ರ ಪೈಪೋಟಿ ಇದ್ದು ಜವರಾಯಿಗೌಡರಿಗೆ ಈ ಸ್ಥಾನ ದೊರಕುವ ಸಾಧ್ಯತೆ ಇದೆ. ವಿಧಾನಸಭೆಯ ಬಲಾಬಲದ ಆಧಾರದ ಮೇಲೆ ಪರಿಷತ್ತಿಗೆ ಆಯ್ಕೆಗೊಳ್ಳಲು ಒಬ್ಬರಿಗೆ 19 ಮತಗಳ ಅಗತ್ಯವಿದೆ. ಇದರ ಆಧಾರದ ಮೇಲೆ ಕಾಂಗ್ರೆಸ್‌ಗೆ ಏಳು, ಬಿಜೆಪಿಗೆ ಮೂರು ಹಾಗೂ ಜೆಡಿಎಸ್‌ಗೆ ಒಂದು ಸ್ಥಾನ ದಕ್ಕಲಿದ್ದು, ಮೂರೂ ಪಕ್ಷಗಳು ತಮ್ಮ ತಮ್ಮ ಶಕ್ತಿಗನುಗುಣವಾಗಿ ಅಭ್ಯರ್ಥಿಗಳನ್ನು ಕಣಕ್ಕಿಳಿಸುವ ಲೆಕ್ಕಾಚಾರದಲ್ಲಿದ್ದು, ನಿರೀಕ್ಷೆಯಂತೆ ನಡೆದರೆ, 11 ಮಂದಿ ಅವಿರೋಧವಾಗಿ ಆಯ್ಕೆಯಾಗಲಿದ್ದಾರೆ.

ಜಿಪಂ, ತಾಪಂ ಮೀಸಲಾತಿ ನಿಗದಿ

ಕೈಗೊಳ್ಳಬೇಕು ಎಂದು ಕೆಲವು ಸಚಿವರು ಕಿವಿಮಾತು ಹೇಳಿದ್ದಾರೆ. ಇತ್ತೀಚೆಗೆ ರಾಜ್ಯದ 28 ಲೋಕಸಭಾ ಕ್ಷೇತ್ರಗಳಿಗೆ ನಡೆದ ಚುನಾವಣೆ ಬಗ್ಗೆ ಅವಲೋಕನ ಮಾಡಿರುವ ಸಭೆ ಕನಿಷ್ಠ 15 ರಿಂದ 18 ಸ್ಥಾನ ಗೆಲ್ಲುವ ವಿಶ್ವಾಸ ವ್ಯಕ್ತಪಡಿಸಿದೆ.

ಗ್ಯಾರಂಟಿ ನಮಗೆ ಕೈಹಿಡಿದಿರುವ ಜೊತೆಗೆ ಅಲ್ಪಸಂಖ್ಯಾತರು, ದಲಿತರು ಹಾಗೂ ಹಿಂದುಳಿದ ವರ್ಗ, ಅದರಲ್ಲೂ ಮಹಿಳೆಯರು ನಮ್ಮ ಪಕ್ಷಕ್ಕೆ ಒಲವು ತೋರಿರುವುದರಿಂದ ನಮಗೆ 18 ಸ್ಥಾನ ಲಭ್ಯವಾಗಲಿದೆ ಎಂಬ ಮಾಹಿತಿ ಇದೆ ಎಂದು ಸಿದ್ದರಾಮಯ್ಯ ಸಭೆಗೆ ತಿಳಿಸಿದ್ದಾರೆ.

ಅಷ್ಟೇ ಅಲ್ಲ, ಯಾವ ಯಾವ ಕ್ಷೇತ್ರಗಳು ನಮ್ಮ ಪಾಲಿಗೆ ದೊರೆಯಲಿವೆ ಎಂಬ ಮಾಹಿತಿಯನ್ನೂ ನೀಡಿದ್ದಾರೆ, ಬಹುತೇಕ ಬೇರೆಲ್ಲಾ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ಕರ್ನಾಟಕದಲ್ಲಿ ಕಾಂಗ್ರೆಸ್ ಹೆಚ್ಚಿನ ಸ್ಥಾನ ಗೆಲ್ಲಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಲೋಕಸಭಾ ಚುನಾವಣೆಗೆ ಸಂಬಂಧಿಸಿದಂತೆ ಎಲ್ಲಾ ಸಚಿವರು ತಮ್ಮ ತಮ್ಮ ಕ್ಷೇತ್ರಗಳ ವರದಿಯನ್ನು ನೀಡಿದ್ದಾರೆ.

ಜತೆಗೆ ಬಿಜೆಪಿ–ಜೆಡಿಎಸ್ ಚುನಾವಣೆಯಲ್ಲಿ ಹೇಗೆ ಸಂಘಟಿತ ಹೋರಾಟ ನಡೆಸಿತು ಎಂಬ ಮಾಹಿತಿಯನ್ನೂ ಮುಖ್ಯಮಂತ್ರಿ ಅವರು ಪಡೆದುಕೊಂಡರು. ಫಲಿತಾಂಶ ಹೊರಬಂದ ನಂತರ ಉಳಿದ ಎಲ್ಲಾ ನಿಗಮ–ಮಂಡಳಿಗಳಿಗೆ ಅಧ್ಯಕ್ಷರು ಮತ್ತು ಪದಾಧಿಕಾರಿಗಳನ್ನು ನೇಮಿಸಿ, ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸಿದ್ಧರಾಗೋಣ ಎಂದಿದ್ದಾರೆ.

ಅಗತ್ಯ ಎಲ್ಲಾ ಮುನ್ನೆಚ್ಚರಿಕಾ ಕ್ರಮ: ಕೆ.ಸಾಲುಂಡಿ ಗ್ರಾಮದಲ್ಲಿ ಪರಿಸ್ಥಿತಿ ಸುಧಾರಣೆ

- ಗ್ರಾಮದಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ
- ಸ್ವಚ್ಛತೆ ಕಾಪಾಡಲು ನೀರು ನಿಲ್ಲದಂತೆ ಕ್ರಮ; ಬೀದಿ ಬದಿ ಸೊಳ್ಳೆ ನಿಯಂತ್ರಣಕ್ಕೆ ಫಾಗಿಂಗ್
- ಕುಡಿಯುವ ನೀರಿಗಾಗಿ ಮೂರು ಹೊಸ ಬೋರ್‌ವೆಲ್ ತೆಗೆಸುವ ವ್ಯವಸ್ಥೆ
- ಗ್ರಾಮದಲ್ಲಿ ತಾತ್ಕಾಲಿಕ ಆಸ್ಪತ್ರೆ; ಮನೆ ಮನೆಯಲ್ಲಿ ಆರೋಗ್ಯ ತಪಾಸಣೆ



ಮೈಸೂರು ತಾಲೂಕಿನ ಕೆ.ಸಾಲುಂಡಿ ಗ್ರಾಮದಲ್ಲಿ ಆರೋಗ್ಯ ಸಿಬ್ಬಂದಿ ಮನೆ ಮನೆಗೆ ತೆರಳಿ ಆರೋಗ್ಯ ವಿಚಾರಿಸಿದರು



ಕುಡಿಯುವ ನೀರು ಪೂರೈಸುವ ಬೋರ್‌ವೆಲ್ ಸುತ್ತ ತಡೆಗೋಡೆ ನಿರ್ಮಿಸುತ್ತಿರುವುದು.

ಕೆ.ಸಾಲುಂಡಿ ಗ್ರಾಮದಲ್ಲಿ ಪರಿಸ್ಥಿತಿ ನಿಯಂತ್ರಣ

"ಮೈಸೂರು ತಾಲೂಕಿನ ಕೆ.ಸಾಲುಂಡಿ, ನಂಜರಾಜಯ್ಯನಹುಂಡಿ ಗ್ರಾಮದಲ್ಲಿ ಕಲುಷಿತ ನೀರು ಸೇವನೆಯಿಂದ 95 ಪ್ರಕರಣದಲ್ಲಿ ಒಬ್ಬರು ಮೃತಪಟ್ಟಿರುವುದನ್ನು ಹೊರತುಪಡಿಸಿದರೆ ಬೇರೆ ಯಾರ ಸ್ಥಿತಿಯೂ ಗಂಭೀರವಾಗಿಲ್ಲ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವವರ ಆರೋಗ್ಯ ಸುಧಾರಿಸಿದೆ. ಆದರೂ ನಿಗಾ ವಹಿಸಲಾಗಿದೆ. ವಾಂತಿ-ಭೇದಿಯಿಂದ ನಿರ್ಜಲೀಕರಣ ಪರಿಸ್ಥಿತಿಯನ್ನು ನಿಯಂತ್ರಿಸಲು ಕೆಲವರನ್ನು ಜಿಲ್ಲಾಸ್ಪತ್ರೆಗೆ ರವಾನಿಸಲಾಗಿದೆ. ಗ್ರಾಮದಲ್ಲಿ ತಾತ್ಕಾಲಿಕ ಆಸ್ಪತ್ರೆ ತೆರೆಯಲಾಗಿದ್ದು, ಒಪಿಡಿ ಸೇವೆ ಒದಗಿಸಲಾಗಿದೆ. ಈ ತಾತ್ಕಾಲಿಕ ಆಸ್ಪತ್ರೆಯಲ್ಲಿ 25 ಮಂದಿ ಕೆಲಸ ಮಾಡುತ್ತಿದ್ದಾರೆ. ಮಂಗಳವಾರ ಸಂಜೆಯಿಂದ ಪ್ರಕರಣಗಳು ಇಳಿಮುಖವಾಗುತ್ತಿದ್ದು, ಪರಿಸ್ಥಿತಿ ನಿಯಂತ್ರಣಕ್ಕೆ ಬರುತ್ತಿದೆ.
– ಡಾ.ಪಿ.ಸಿ.ಕುಮಾರಸ್ವಾಮಿ, ಜಿಲ್ಲಾ ಆರೋಗ್ಯಾಧಿಕಾರಿ

ಕಲುಷಿತ ನೀರು ಸರಬರಾಜಾದರೆ ತಕ್ಷಣ ದೂರು ಸಲ್ಲಿಸಿ; ಕಂಟ್ರೋಲ್ ರೂಂಗಳ ಸ್ಥಾಪನೆ

ಮೈಸೂರು, ಮೇ 22-ಜಿಲ್ಲೆಯಲ್ಲಿ ಅಧಿಕ ಮಳೆಯಿಂದ ಅಥವಾ ಪ್ರವಾಹ ಸಂದರ್ಭದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರು ಕಲುಷಿತ ನೀರು ಸರಬರಾಜಾಗುತ್ತಿದ್ದಲ್ಲಿ ಹಾಗೂ ಕಲುಷಿತ ನೀರು ಸೇವನೆಯಿಂದ ವಾಂತಿ-ಭೇದಿ ಪ್ರಕರಣಗಳು ಕಂಡು ಬಂದಲ್ಲಿ ದೂರುಗಳನ್ನು ದಾಖಲಿಸಲು ಜಿಲ್ಲಾ ಮತ್ತು ತಾಲೂಕು ಪಂಚಾಯಿತಿ ಕಚೇರಿಗಳಲ್ಲಿ 24x7 ಕಂಟ್ರೋಲ್ ರೂಂ ಅನ್ನು ತೆರೆಯಲಾಗಿದೆ. ಜಿಲ್ಲಾಧಿಕಾರಿಗಳ ಕಚೇರಿಯ ದೂ.ಸಂ:0821-2423800,1077, ತಾಲೂಕು ಕಚೇರಿಗಳಾದ ಮೈಸೂರು ದೂ.ಸಂ:0821-2414812, ನಂಜನಗೂಡು ದೂ.ಸಂ:08221-223108, ತಿ.ನರಸೀಪುರ ದೂ.ಸಂ:08227-260210, ಹುಣಸೂರು ದೂ.ಸಂ:08222-252959, ಕೆ.ಆರ್.ನಗರ ದೂ.ಸಂ:08223-262371, ಸಾಲಿಗ್ರಾಮ ದೂ.ಸಂ:08223-283833, ಪಿರಿಯಾಪಟ್ಟಣ ದೂ.ಸಂ:08223-274175, ಹೆಚ್.ಡಿ.ಕೋಟೆ ದೂ.ಸಂ:08228-255325, ಸರಗೂರು ದೂ.ಸಂ:08228-296100ನ್ನು ಸಂಪರ್ಕಿಸಿ ದೂರು ದಾಖಲಿಸಬಹುದು ಎಂದು ಜಿಲ್ಲಾ ಪಂಚಾಯತ್‌ನ ಮುಖ್ಯಕಾರ್ಯನಿರ್ವಾಹಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಗ್ರಾಮದ ರಸ್ತೆಯಲ್ಲಿ ಮಳೆ ನೀರು ನಿಲ್ಲದಂತೆ ಗುಂಡಿ ಮುಚ್ಚುತ್ತಿರುವುದು.

ಮೈಸೂರು, ಮೇ 22(ಎಂಟಿವೈ)- ಕಲುಷಿತ ನೀರು ಸೇವನೆಯಿಂದ ಓರ್ವ ಯುವಕ ಅಸುನೀಗಿ, 95ಕ್ಕೂ ಹೆಚ್ಚು ಮಂದಿ ಅಸ್ವಸ್ಥರಾಗಿ, ಮೈಸೂರು ತಾಲೂಕಿನ ಕೆ.ಸಾಲುಂಡಿ ಗ್ರಾಮದಲ್ಲಿ ಪರಿಸ್ಥಿತಿ ನಿಯಂತ್ರಣಕ್ಕೆ ಬಂದಿದ್ದು, ವೈದ್ಯರ ತಂಡ ಮನೆ ಮನೆಗೆ ಭೇಟಿ ನೀಡಿ ಅಗತ್ಯವುಳ್ಳವರಿಗೆ ಚಿಕಿತ್ಸೆ ನೀಡುತ್ತಿರುವುದರಿಂದ ವಾಂತಿ-ಭೇದಿಯಿಂದ ತತ್ತರಿಸಿದ್ದ ಗ್ರಾಮಸ್ಥರ ಆರೋಗ್ಯದಲ್ಲಿ ಸುಧಾರಣೆ ಕಂಡಿದೆ.

ಗ್ರಾಮಕ್ಕೆ ಕುಡಿಯುವ ನೀರು ಪೂರೈಸುವ ಕೊಳವೆಬಾವಿ(ಬೋರ್‌ವೆಲ್)ಗೆ ಒಳಚರಂಡಿ ನೀರು ಸೇರಿ ಕಲುಷಿತಗೊಂಡಿದ್ದ ನೀರು ಪೂರೈಕೆಯಾಗಿತ್ತು. ಈ ನೀರು ಸೇವಿಸಿ 95ಕ್ಕೂ ಹೆಚ್ಚು ಮಂದಿ ವಾಂತಿ-ಭೇದಿ ಸಮಸ್ಯೆಯಿಂದ ನರಳುತ್ತಿದ್ದರು. ಗಂಭೀರವಾಗಿದ್ದ 6 ಮಂದಿಯಲ್ಲಿ 23 ವರ್ಷದ ಕನಕರಾಜ್ ಮೃತಪಟ್ಟಿದ್ದರು. ಈ ಹಿನ್ನೆಲೆಯಲ್ಲಿ ಕೆ.ಸಾಲುಂಡಿ ಗ್ರಾಮದಲ್ಲಿ ಗ್ರಾಮಸ್ಥರ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ದಿನದ 24 ಗಂಟೆಯೂ ಕಾರ್ಯನಿರ್ವಹಿಸಲು ನಿಯೋಜಿಸಿದ್ದ ವೈದ್ಯರ ತಂಡ ಗ್ರಾಮದ ಮನೆ ಮನೆಗೂ ಭೇಟಿ ನೀಡಿ, ಅಸ್ವಸ್ಥರಿಗೆ ಸೂಕ್ತ ಚಿಕಿತ್ಸೆ ನೀಡಿದ್ದು, ಬುಧವಾರ ಯಾವುದೇ ಹೊಸ ಪ್ರಕರಣ ಪತ್ತೆಯಾಗಿಲ್ಲ. ಅಲ್ಲದೆ, ಗ್ರಾಮ ಹಾಗೂ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವ ಅಸ್ವಸ್ಥರ ಆರೋಗ್ಯದಲ್ಲೂ ಸುಧಾರಣೆ ಕಂಡಿದೆ. ಹಾಗಾಗಿ ಗ್ರಾಮಸ್ಥರು ನಿಟ್ಟುಸಿರು ಬಿಡುವಂತಾಗಿದೆ.

3 ಹೊಸ ಬೋರ್‌ವೆಲ್: ಕೆ.ಸಾಲುಂಡಿ ಗ್ರಾಮಸ್ಥರಿಗೆ ಸ್ವಚ್ಛ ಕುಡಿಯುವ ನೀರು ಪೂರೈಸುವ ಸಲುವಾಗಿ ಮೂರು ಹೊಸ ಬೋರ್‌ವೆಲ್ ಕೊರೆಸಲು ಕ್ರಮ ಕೈಗೊಳ್ಳಲಾಗಿದ್ದು, ಮುಡಾ ವತಿಯಿಂದ ಸ್ಥಳ ಗುರುತಿಸುವ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ.

ಟ್ಯಾಂಕರ್ ಮೂಲಕ ನೀರು: ಭಾನುವಾರ ರಾತ್ರಿಯಿಂದಲೇ ಕೆ.ಸಾಲುಂಡಿ ಗ್ರಾಮದಲ್ಲಿ ಬೋರ್‌ವೆಲ್ ನೀರು ಸರಬರಾಜು ಪ್ರಕ್ರಿಯೆ ಸ್ಥಗಿತಗೊಳಿಸಲಾಗಿತ್ತು. ಸೋಮವಾರದಿಂದಲೂ ಗ್ರಾಮಕ್ಕೆ ಟ್ಯಾಂಕರ್ ಮೂಲಕ ಕುಡಿಯುವ ನೀರು ಪೂರೈಸಲಾಗುತ್ತಿತ್ತು. ಇಂದು ಬೆಳಗಿನಿಂದಲೂ ಟ್ಯಾಂಕರ್‌ನಲ್ಲಿ ಕುಡಿಯುವ ನೀರು ಸರಬರಾಜು ಮಾಡಲಾಯಿತು.

ಬೋರ್‌ವೆಲ್ ಸುತ್ತ ತಡೆಗೋಡೆ: ಬೋರ್‌ವೆಲ್‌ಗೆ ಚರಂಡಿ ನೀರು ಸೇರುತ್ತಿದ್ದುದನ್ನು ತಡೆಗಟ್ಟಲು ಕ್ರಮ ಕೈಗೊಳ್ಳಲಾಗಿದ್ದು, ಕೊಳವೆ ಬಾವಿ ಸುತ್ತಲೂ ತಡೆಗೋಡೆ ಕಟ್ಟಿ, ಚರಂಡಿ ನೀರು, ಮಳೆ ನೀರು ಕೊಳವೆ ಬಾವಿ ಸೇರದಂತೆ ಕ್ರಮ ಕೈಗೊಳ್ಳಲಾಗಿದೆ.

ಮನೆ ಮನೆಗೆ ಭಿತ್ತಿ ಪತ್ರ ಪರಿಸ್ಥಿತಿ ನಿಯಂತ್ರಿಸುವ ನಿಟ್ಟಿನಲ್ಲಿ ಗ್ರಾಮದಲ್ಲೇ ತಾತ್ಕಾಲಿಕವಾಗಿ ಹತ್ತು ಹಾಸಿಗೆಯುಳ್ಳ ಚಿಕಿತ್ಸಾ ಕೇಂದ್ರ ಸ್ಥಾಪಿಸಲಾಗಿದೆ. ಆರೋಗ್ಯ ಶಿಕ್ಷಣಾಧಿಕಾರಿಗಳ ತಂಡ ಕೆ.ಸಾಲುಂಡಿ ಗ್ರಾಮದಲ್ಲಿ ಮನೆ ಮನೆಗೆ ತೆರಳಿ ಭಿತ್ತಿಪತ್ರ ಹಂಚುವುದರೊಂದಿಗೆ ಮನೆಯಲ್ಲಿರುವವರ ಮಾಹಿತಿ, ವಾಂತಿ-ಭೇದಿ ಉಂಟಾಗಿದ್ದವರ ಮಾಹಿತಿ ಕಲೆ ಹಾಕಿತು. ಅಲ್ಲದೆ, ಎರಡು ದಿನದ ಹಿಂದೆ ಅನಾರೋಗ್ಯಕ್ಕೀಡಾಗಿದ್ದವರ ಆರೋಗ್ಯ ಸುಧಾರಿಸಿರುವ ಬಗ್ಗೆ ಮಾಹಿತಿ ಸಂಗ್ರಹಿಸಿ ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದ್ದಾರೆ.

ಗ್ರಾಮದಲ್ಲಿ ಸ್ವಚ್ಛತಾ ಕಾರ್ಯ: ವಾಂತಿ-ಭೇದಿ ಪ್ರಕರಣದಿಂದಾಗಿ ಕೆ.ಸಾಲುಂಡಿ ಗ್ರಾಮದಲ್ಲಿ ಸ್ವಚ್ಛತಾ ಕಾರ್ಯ ಕೈಗೊಳ್ಳಲಾಗಿದೆ. ರಸ್ತೆಯ ಗುಂಡಿಗಳಲ್ಲಿ ಮಳೆ ನೀರು ನಿಲ್ಲದಂತೆ ಮುಚ್ಚಲಾಯಿತು. ಸೊಳ್ಳೆ ನಿಯಂತ್ರಣಕ್ಕೆ ಫಾಗಿಂಗ್ ಮಾಡಲಾಗುತ್ತಿದೆ. ಕೆಲವು ಕಡೆ ಬ್ಲೀಚಿಂಗ್ ಪೌಡರ್ ಹಾಕಿ ಸ್ವಚ್ಛತೆ ಮಾಡುವ ಕ್ರಮ ಕೈಗೊಳ್ಳಲಾಯಿತು.

ಗ್ರಾಮದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಪಿ.ಸಿ. ಕುಮಾರಸ್ವಾಮಿ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಮಹದೇವ್ ಪ್ರಸಾದ್, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಕೃಷ್ಣಮೂರ್ತಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಎಂ.ಮುನೀಂದ್ರಮ್ಮ, ಆಶಾ ಕಾರ್ಯಕರ್ತರು, ಪ್ರಾಥಮಿಕ ಸುರಕ್ಷಾಧಿಕಾರಿಗಳು, ಹೆಚ್‌ಐಓಗಳು ಸೇರಿದಂತೆ ಆರೋಗ್ಯ ಸಿಬ್ಬಂದಿ ಬೀಡುಬಿಟ್ಟಿದ್ದಾರೆ.

ಪಠ್ಯೇತರ ಚಟುವಟಿಕೆಗಳಿಂದ ವ್ಯಕ್ತಿತ್ವ ವಿಕಸನ ಸಾಧ್ಯ

ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಅಭಿಮತ



ಮೈಸೂರಿನ ಯುವರಾಜ ಕಾಲೇಜಿನ ಸಭಾಂಗಣದಲ್ಲಿ ಬುಧವಾರ ನಡೆದ ಕಾಲೇಜಿನ 2023-24ನೇ ಸಾಲಿನ 'ಜ್ಞಾನವಾಹಿನಿ' ಹಾಗೂ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಯಿತು.

ಮೈಸೂರು, ಮೇ 22(ಎಂಟಿವೈ)- ವಿದ್ಯಾರ್ಥಿ ದೆಸೆಯಲ್ಲಿಯೇ ಪಠ್ಯಕ್ರಮದೊಂದಿಗೆ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡರೆ ಮಾತ್ರ ವ್ಯಕ್ತಿತ್ವ ವಿಕಸನಗೊಳ್ಳಲು ಸಾಧ್ಯ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಯುವರಾಜ ಕಾಲೇಜಿನ ಸಭಾಂಗಣದಲ್ಲಿ ಬುಧವಾರ ನಡೆದ ಕಾಲೇಜಿನ 2023-24ನೇ ಸಾಲಿನ 'ಜ್ಞಾನವಾಹಿನಿ' ಸಾಂಸ್ಕೃತಿಕ, ಶೈಕ್ಷಣಿಕ, ಕ್ರೀಡೆ, ಎನ್‌ಸಿಸಿ ಮತ್ತು ಎನ್‌ಎಸ್‌ಎಸ್ ಚಟುವಟಿಕೆಗಳ ಸಮಾರೋಪ ಸಮಾರಂಭ ಹಾಗೂ ಕಾಲೇಜು ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಕೇವಲ ವಿದ್ಯೆ ಕಲಿತರೆ ಸಾಲದು, ಪಠ್ಯೇತರ ಚಟುವಟಿಕೆಗಳಲ್ಲೂ ಸಕ್ರಿಯವಾಗಿ ಭಾಗವಹಿಸಬೇಕು. ವ್ಯಕ್ತಿತ್ವ ವಿಕಸನವಾಗಬೇಕಾದರೆ ಪಠ್ಯೇತರ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದು ಅಗತ್ಯ. ಹೀಗೆ ಭಾಗವಹಿಸುವುದರಿಂದ ಪಾಠದ ಜತೆಗೆ ಸಾಮಾನ್ಯ ಜ್ಞಾನದ ಅರಿವೂ ಮೂಡುತ್ತದೆ. ಸ್ಪರ್ಧಾತ್ಮಕ ಜಗತ್ತಿನಲ್ಲಿ ಬದುಕಲು ಬೇಕಾದ ವಿದ್ಯೆಯನ್ನು ಪಠ್ಯೇತರ ಚಟುವಟಿಕೆಗಳು ಕಲಿಸುತ್ತವೆ. ಕ್ರೀಡೆ, ಸಂಗೀತ, ನೃತ್ಯ, ಜಾನಪದ, ನಾಟಕಗಳು ನಮ್ಮ ಭಾಗವಾಗಬೇಕು. ಶಿಸ್ತು, ಸಂಯಮ, ಸಹನೆ, ಧೈರ್ಯ, ಉತ್ಸಾಹ ಎಲ್ಲವೂ ವಿದ್ಯಾರ್ಥಿಗೆ ಲಭಿಸುತ್ತವೆ ಎಂದರು.

ಕಿರುತೆರೆ ನಟ ಚಂದ್ರಪ್ರಭಾ ಹಾಗೂ ಹಾಸ್ಯ ಕಲಾವಿದ ವಿನೋದ್ ಗೊಬ್ಬರಗಾಲ ಮಾತನಾಡಿದರು. ಇದೇ ವೇಳೆ ವಿವಿಧ ಸಾಂಸ್ಕೃತಿಕ, ಕ್ರೀಡಾ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಹೆಚ್ಚು ಅಂಕ ಗಳಿಸಿದ್ದ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಯಿತು. ಕಾರ್ಯಕ್ರಮದಲ್ಲಿ ಪ್ರಾಂಶುಪಾಲ ಪ್ರೊ.ಎಂ.ಕೆ. ಮಹೇಶ್, ಜ್ಞಾನವಾಹಿನಿ ಸಂಚಾಲಕ ಜಿ.ಕೃಷ್ಣಮೂರ್ತಿ, ಐಕ್ಯೂಎಸಿ ಸಂಚಾಲಕ ಪ್ರೊ.ಬಿ.ಎಂ. ವೆಂಕಟೇಶ್, ಪರೀಕ್ಷಾ ನಿಯಂತ್ರಣಾಧಿಕಾರಿ ಪ್ರೊ.ಕೆ. ಅಜಯ್‌ಕುಮಾರ್ ಇದ್ದರು.

ಎಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಕೆ ಗಡುವು ಜೂ.12ರವರೆಗೆ ವಿಸ್ತರಣೆ

ಬೆಂಗಳೂರು, ಮೇ 22- 2019ರ ಏಪ್ರಿಲ್ ತಿಂಗಳಿಗೂ ಮೊದಲು ನೋಂದಾಯಿಸಲಾದ ವಾಹನಗಳಿಗೆ ಹೈ-ಸೆಕ್ಯುರಿಟಿ ರಿಜಿಸ್ಟ್ರೇಶನ್ ಪ್ಲೇಟ್‌ಗಳ (ಎಚ್‌ಎಸ್‌ಆರ್‌ಪಿ) ಅಳವಡಿಕೆ ಗಡುವನ್ನು ರಾಜ್ಯ ಸರ್ಕಾರ ಜೂನ್ 12ರವರೆಗೆ ವಿಸ್ತರಿಸಿದೆ.

ಈ ಕುರಿತು ಕರ್ನಾಟಕ ಹೈಕೋರ್ಟ್‌ಗೆ ಮಾಹಿತಿ ನೀಡಿರುವ ರಾಜ್ಯ ಸರ್ಕಾರ, ಎಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಸದ ವಾಹನ ಸವಾರರ ವಿರುದ್ಧ ಜೂ.12ರವರೆಗೂ ಯಾವುದೇ ಕಠಿಣ ಕ್ರಮ ಕೈಗೊಳ್ಳುವುದಿಲ್ಲ ಎಂದು ತಿಳಿಸಿದೆ.

ಹಳೆ ವಾಹನಗಳಿಗೆ ಎಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಕಡ್ಡಾಯ ಕುರಿತು ಎಚ್‌ಎಸ್‌ಆರ್‌ಪಿ ಮ್ಯಾನುಫ್ಯಾಕ್ಚರರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಮತ್ತು ಇತರರು ಸಲ್ಲಿಸಿದ ಮೇಲ್ಮನವಿಗಳ ವಿಚಾರಣೆಯ ಸಂದರ್ಭದಲ್ಲಿ ನ್ಯಾಯಮೂರ್ತಿ ಎಸ್‌ಆರ್ ಕೃಷ್ಣ ಕುಮಾರ್ ಮತ್ತು ನ್ಯಾಯಮೂರ್ತಿ ರಾಮಚಂದ್ರ ಡಿ. ಹುದ್ದಾರ್ ಅವರನ್ನೊಳಗೊಂಡ ರಜಾಕಾಲದ ವಿಭಾಗೀಯ ಪೀಠಕ್ಕೆ ರಾಜ್ಯ ಸರ್ಕಾರ ಈ ಮಾಹಿತಿ ನೀಡಿದೆ.

ನಂಬರ್ ಪ್ಲೇಟ್ ಸಿದ್ಧಪಡಿಸುವ ಕಂಪನಿಗಳಲ್ಲೊಂದಾದ ಬಿಎನ್‌ಡಿ ಎನರ್ಜಿ ಲಿಮಿಟೆಡ್, ನಂಬರ್ ಫಲಕ ಅಳವಡಿಸಲು ವಿಧಿಸಿರುವ ಮೇ 31ರ ಗಡುವು ವಿಸ್ತರಿಸಬೇಕೆಂದು ಕೋರಿ ಮಧ್ಯಂತರ ಅರ್ಜಿ ಸಲ್ಲಿಸಿತ್ತು. ವಿಚಾರಣೆ ವೇಳೆ ಗಡುವು ಮುಕ್ತಾಯದ ಪರಿಣಾಮವನ್ನು ವಿಭಾಗೀಯ ಪೀಠವು ಪ್ರಶ್ನಿಸಿದಾಗ, ಜೂನ್ 12 ರವರೆಗೆ ಯಾವುದೇ ಕಠಿಣ ಕ್ರಮ ತೆಗೆದುಕೊಳ್ಳುವುದಿಲ್ಲ ಎಂದು ಸರ್ಕಾರಿ ವಕೀಲರು ಹೇಳಿದರು. ಪೀಠವು ಮುಂದಿನ ವಿಚಾರಣೆಯನ್ನು ಜೂನ್ 11ಕ್ಕೆ ಮುಂದೂಡಿದೆ.

ಕೆ.ಸಾಲುಂಡಿಗೆ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಭೇಟಿ

ಸಂತ್ರಸ್ತರಿಗೆ ಸಾಂತ್ವನ; ಗ್ರಾಮದಲ್ಲಿ ಆರೋಗ್ಯಕರ ಪರಿಸ್ಥಿತಿ ಪುನರ್ ನಿರ್ಮಾಣಕ್ಕೆ ಎಲ್ಲಾ ಕ್ರಮದ ಭರವಸೆ



ಮೈಸೂರು ತಾಲೂಕಿನ ಕೆ.ಸಾಲುಂಡಿ ಗ್ರಾಮಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಭೇಟಿ ನೀಡಿ, ಪರಿಶೀಲಿಸಿದರು.

ಮೈಸೂರು, ಮೇ 22(ಎಂಟಿವೈ)- ಕಲುಷಿತ ನೀರು ಸೇವನೆಯಿಂದಾಗಿ ವಾಂತಿ-ಭೇದಿಯಿಂದ ಹಲವಾರು ಗ್ರಾಮಸ್ಥರು ಅನಾರೋಗ್ಯಕ್ಕೆ ತುತ್ತಾಗಿರುವ ಮೈಸೂರು ತಾಲೂಕು ಕೆ.ಸಾಲುಂಡಿ ಗ್ರಾಮಕ್ಕೆ ಬುಧವಾರ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಭೇಟಿ ನೀಡಿ, ಪರಿಶೀಲಿಸಿದರು.

ಮೈಸೂರು ತಾಲೂಕಿನ ಕೆ.ಸಾಲುಂಡಿ ಹಾಗೂ ಆ ಗ್ರಾಮದ ಪಕ್ಕದಲ್ಲಿಯೇ ಇರುವ ನಂಜರಾಜಯ್ಯನಹುಂಡಿಯಲ್ಲಿ ಕಳೆದ ಎರಡು ದಿನಗಳಿಂದ ಗ್ರಾಮಸ್ಥರಲ್ಲಿ ವಾಂತಿ-ಭೇದಿ ಸಮಸ್ಯೆ ಉಂಟಾಗಿ ಜನ ತತ್ತರಿಸಿದ್ದರು. ಈ ಪ್ರಕರಣದಲ್ಲಿ ಓರ್ವ ಯುವಕ ಮೃತಪಟ್ಟಿದ್ದ ಹಿನ್ನೆಲೆಯಲ್ಲಿ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಇಂದು ಗ್ರಾಮಕ್ಕೆ ಭೇಟಿ ನೀಡಿ, ಪರಿಶೀಲಿಸಿದರು. ಈ ವೇಳೆ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ ಹಾಗೂ ಗ್ರಾಮಸ್ಥರಿಂದ ಮಾಹಿತಿ ಪಡೆದರು.

ಮೃತರ ಕುಟುಂಬಕ್ಕೆ ಸಾಂತ್ವನ ಹೇಳಿದ ಸಚಿವರು: ಕಲುಷಿತ ನೀರು ಸೇವಿಸಿ ಮೃತಪಟ್ಟ ಕೆ.ಸಾಲುಂಡಿ ಗ್ರಾಮದ ಕನಕರಾಜ್(23) ಮನೆಗೆ ಭೇಟಿ ನೀಡಿದ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಮೃತರ ಕುಟುಂಬಕ್ಕೆ ಸಾಂತ್ವನ ಹೇಳಿದರು. ಅಲ್ಲದೇ ಸರ್ಕಾರದಿಂದ 2 ಲಕ್ಷ ರೂ. ಪರಿಹಾರ ಕೊಡಿಸುವುದಾಗಿ ಭರವಸೆ ನೀಡಿದರು.

ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಸಚಿವರು, ಗ್ರಾಮಕ್ಕೆ ಕುಡಿಯುವ ನೀರು ಪೂರೈಕೆಗೆ ಎರಡು ಕೊಳವೆ ಬಾವಿಯಿದ್ದು, ಅದಕ್ಕೆ ಮಳೆ ಇಲ್ಲವೇ ಕಲುಷಿತ ನೀರು ಸೇರಿರುವುದರಿಂದ ಅದರ ನೀರು ಕಲುಷಿತಗೊಂಡಿದೆ. ಈ ನೀರನ್ನು ಕುಡಿದು ಸುಮಾರು 95ಕ್ಕೂ ಅಧಿಕ ಮಂದಿ ಅನಾರೋಗ್ಯಕ್ಕೆ ತುತ್ತಾಗಿದ್ದಾರೆ. ಕಲುಷಿತ ನೀರಿನಲ್ಲಿ ವಿಬ್ರಿಯೊ ಕಾಲರಾ ಅಂಶ ಇರುವುದು ಪರೀಕ್ಷಾ ವರದಿಯಿಂದ ಬೆಳಕಿಗೆ ಬಂದಿದೆ. ಇದರಿಂದಾಗಿ ಒಬ್ಬ ವ್ಯಕ್ತಿ ಮರಣ ಹೊಂದಿದ್ದಾರೆ. ಅವರು ಸರ್ಕಾರಿ ಆಸ್ಪತ್ರೆಗೆ ಹೋಗದೇ ಖಾಸಗಿ ಆಸ್ಪತ್ರೆಗೆ ಹೋಗಿದ್ದಾರೆ. ಸೂಕ್ತ ಮಾರ್ಗದರ್ಶನ ಪಡೆದು ಸಕಾಲಕ್ಕೆ ಚಿಕಿತ್ಸೆ ಪಡೆಯದೇ ಇರುವ ಕಾರಣಕ್ಕೆ ಕಾಯಿಲೆ ಉಲ್ಬಣವಾಗಿ ವ್ಯಕ್ತಿ ಮೃತಪಟ್ಟಿದ್ದಾರೆ. ಮೃತರ ಕುಟುಂಬಕ್ಕೆ 2 ಲಕ್ಷ ರೂ. ಪರಿಹಾರವನ್ನು ಸರ್ಕಾರದಿಂದ ನೀಡುವಂತೆ ಸೂಚಿಸಲಾಗಿದೆ ಎಂದರು.

ಗ್ರಾಮದಲ್ಲೇ ಒಪಿಡಿ ಸೇವೆ : ಕಲುಷಿತ ನೀರಿನಲ್ಲಿ ವಿಬ್ರಿಯೊ ಕಾಲರಾ ಅಂಶ ಇರುವುದರಿಂದ ಜಿಲ್ಲಾಡಳಿತ, ಜಿಲ್ಲಾ ಆರೋಗ್ಯ ಇಲಾಖೆ ಗ್ರಾಮದಲ್ಲೇ ಮೊಕ್ಕಾಂ ಹೂಡಿದೆ. ಅಸ್ವಸ್ಥಗೊಂಡಿದ್ದ 97 ಮಂದಿಯಲ್ಲಿ 73 ಮಂದಿ ವಯಸ್ಕರು, 22 ಮಂದಿ ಮಕ್ಕಳಿದ್ದಾರೆ. ಇವರಲ್ಲಿ 37 ಮಂದಿ ಜಿಲ್ಲಾಸ್ಪತ್ರೆ ಸೇರಿದಂತೆ ಬೇರೆ ಬೇರೆ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಯಾವುದೇ ವ್ಯಕ್ತಿ ನಿರ್ಜಲೀಕರಣಕ್ಕೆ ಒಳಗಾದಾಗ ಆತನಿಗೆ ಮತ್ತೆ ನೀರಿನಂಶ ಹೆಚ್ಚಾಗಿ ದೊರಕುವಂತೆ ಮಾಡಬೇಕು. ಅದಕ್ಕಾಗಿ ಗ್ರಾಮದಲ್ಲಿ ದಿನದ 24 ಗಂಟೆ ಕಾರ್ಯನಿರ್ವಹಿಸುವ ಒಪಿಡಿ ಆಸ್ಪತ್ರೆ ತೆರೆದು ಗ್ರಾಮದ ಜನರ ಆರೋಗ್ಯ ಪರೀಕ್ಷಿಸಿ ಸಮಸ್ಯೆ ಇರುವವರಿಗೆ ಔಷಧೋಪಚಾರ ನೀಡಲಾಗುತ್ತಿದೆ ಎಂದು ತಿಳಿಸಿದರು.

ಕುಡಿಯುವ ನೀರಿನ ಮೂಲಗಳು ಕಲುಷಿತಗೊಂಡಿರುವುದರಿಂದ ಟ್ಯಾಂಕರ್ ಮೂಲಕ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ. ಬಾಧಿತರಿಗೆ ಒಆರ್‌ಎಸ್ ನೀಡಲಾಗುತ್ತಿದೆ. ಮುಡಾದಿಂದ ಮೂರು ಹೊಸದಾಗಿ ಕೊಳವೆ ಬಾವಿ ವ್ಯವಸ್ಥೆ ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ದೂರವಾಣಿ ಮುಖಾಂತರ ಸೂಚಿಸಿದ್ದಾರೆ. ಜನರಿಗೆ ಸ್ವಚ್ಛತೆ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ. ಕುಡಿಯುವ ನೀರಿಗೆ ಹ್ಯಾಲೋಜೆನ್ ಮಾತ್ರೆಯನ್ನು ಮನೆಗಳಲ್ಲಿಯೇ ಬಳಸಲು ಸೂಚಿಸಲಾಗಿದೆ ಪ್ರತೀ ಮನೆಗೂ ಒಆರ್‌ಎಸ್ ಪ್ಯಾಕೆಟ್ ವಿತರಿಸಲಾಗಿದೆ ಎಂದರು.

ಜಿಲ್ಲೆಯಲ್ಲಿ ವಾಂತಿ-ಭೇದಿ ಪ್ರಕರಣಕ್ಕೆ ತುತ್ತಾದವರಿಗಾಗಿ ಚಿಕಿತ್ಸೆ ನೀಡಲು ಜಿಲ್ಲಾಸ್ಪತ್ರೆ ಮತ್ತು ಕೆ.ಆರ್.ಆಸ್ಪತ್ರೆಯಲ್ಲಿ 50 ಹಾಸಿಗೆ ಕಾಯ್ದಿರಿಸಲಾಗಿದೆ. ಸಾಂಕ್ರಾಮಿಕ ರೋಗಗಳ ಆಸ್ಪತ್ರೆಯಲ್ಲಿಯೂ ಚಿಕಿತ್ಸೆ ನೀಡಲು ಕ್ರಮ ಕೈಗೊಳ್ಳಲಾಗಿದೆ. ನಾಲ್ಕು ಆಂಬುಲೆನ್ಸ್ ಹಾಗೂ 30ಕ್ಕೂ ಹೆಚ್ಚು ವೈದ್ಯಕೀಯ ಸಿಬ್ಬಂದಿ ಗ್ರಾಮದಲ್ಲೇ ಬೀಡು ಬಿಟ್ಟಿದ್ದಾರೆ. ಜನರ ಪ್ರಾಣ ಮತ್ತು ಆರೋಗ್ಯ ರಕ್ಷಣೆಗೆ ಕಟ್ಟೆಚ್ಚರ ವಹಿಸಲಾಗಿದೆ. ಜನರ ಜೀವದ ಜತೆ ಯಾರೂ ಹುಡುಗಾಟ ಆಡುವಂತಿಲ್ಲ. ಕೊಳವೆ ಬಾವಿಯಿಂದ ನೀರು ಪಡೆಯುವಲ್ಲಿ ನಿರ್ಲಕ್ಷ್ಯವಾಗಿದ್ದರೆ ಪಟ್ಟಣ, ಮುಡಾ, ಪಂಚಾಯಿತಿ, ಪಾಲಿಕೆ ಸೇರಿದಂತೆ ಯಾವುದೇ ಅಧಿಕಾರಿಗಳಿರಲಿ ಖಂಡಿತವಾಗಿ ಅಂತಹವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದರು. ಈ ಸಂದರ್ಭದಲ್ಲಿ ಶಾಸಕ ಕೆ.ಹರೀಶ್ ಗೌಡ, ಮುಡಾ ಅಧ್ಯಕ್ಷ ಕೆ.ಮರೀಗೌಡ, ಜಿ.ಪಂ ಮಾಜಿ ಸದಸ್ಯ ಬೀರಿಹುಂಡಿ ಬಸವಣ್ಣ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಸಂತ್ರಸ್ತೆ ಕಿಡ್ನ್ಯಾಪ್ ಪ್ರಕರಣ ಆರೋಪ

ಭವಾನಿ ರೇವಣ್ಣ ಕಾರು ಚಾಲಕನಿಗೆ ಮತ್ತೆ ಸಮನ್ಸ್

ಬೆಂಗಳೂರು, ಮೇ 22- ಲೈಂಗಿಕ ದೌರ್ಜನ್ಯ ಆರೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ಶಾಸಕ ಹೆಚ್.ಡಿ. ರೇವಣ್ಣಗೆ ಸದ್ಯ ಜಾಮೀನು ನೀಡಲಾಗಿದೆ. ಆದರೆ ಇದುವರೆಗೂ ಪ್ರಜ್ವಲ್ ರೇವಣ್ಣ ಸುಳಿವೇ ಇಲ್ಲದಾಗಿದೆ. ಇದರ ಮಧ್ಯೆ ರೇವಣ್ಣ ಪತ್ನಿ ಭವಾನಿ ಕಾರು ಚಾಲಕ ಅಜಿತ್‌ಗೆ ಎಸ್‌ಐಟಿ ಪೊಲೀಸರಿಂದ ಸಮನ್ಸ್ ಜಾರಿ ಮಾಡಲಾಗಿದೆ. ಸಂತ್ರಸ್ತೆಯನ್ನು ಚಾಲಕ ಅಜಿತ್ ಕಾರಿನಲ್ಲಿ ಕರೆದೊಯ್ದಿದ್ದ ಆರೋಪ ಕೇಳಿಬಂದಿದ್ದು ಹೀಗಾಗಿ ಸಂತ್ರಸ್ತೆ ಕಿಡ್ನ್ಯಾಪ್ ಪ್ರಕರಣ ಸಂಬಂಧ ಎಸ್‌ಐಟಿ ಈಗಾಗಲೇ 2 ಬಾರಿ ಸಮನ್ಸ್ ನೀಡಲಾಗಿದೆ. ಆದರೆ ಕಿಡ್ನ್ಯಾಪ್ ಪ್ರಕರಣ ದಾಖಲಾದ ಬಳಿಕ ಅಜಿತ್ ತಲೆಮರೆಸಿಕೊಂಡಿದ್ದಾರೆ.

ಪತಿ ರೇವಣ್ಣ ಹಾಗೂ ಪುತ್ರ ಪ್ರಜ್ವಲ್ ವಿರುದ್ಧದ ಪ್ರಕರಣದಿಂದಾಗಿ, ಭವಾನಿಗೂ ಸಂಕಷ್ಟ ತಪ್ಪಿದ್ದಲ್ಲ. ಲೈಂಗಿಕ ಕಿರುಕುಳ, ಕಿಡ್ನ್ಯಾಪ್ ಎರಡೂ ಕೇಸ್‌ನಲ್ಲೂ ಭವಾನಿ ರೇವಣ್ಣ ಹೆಸರು ಉಲ್ಲೇಖಿಸಲಾಗಿದೆ. ಹೀಗಾಗಿ ಭವಾನಿ ಕರೆದರು ಅಂತಾ ಹೇಳಿಯೇ ಮಹಿಳೆಯನ್ನು ಕಿಡ್ನ್ಯಾಪ್ ಮಾಡಿರುವ ಆರೋಪ ಮಾಡಲಾಗಿದೆ. ಒಂದು ವೇಳೆ ತನಿಖೆ ವೇಳೆ ಭವಾನಿ ವಿರುದ್ಧ ಸಾಕ್ಷಿ ಸಿಕ್ಕರೆ ಅವರಿಗೂ ಸಂಕಷ್ಟ ತಪ್ಪಿದ್ದಲ್ಲ. ಇದೆಲ್ಲದರ ಮಧ್ಯೆ ಇತ್ತೀಚೆಗೆ ಹೊಳೆನರಸೀಪುರದ ಜೆಡಿಎಸ್ ನಾಯಕರು ಭವಾನಿ ರೇವಣ್ಣರನ್ನು ಭೇಟಿಯಾಗಿ ಧೈರ್ಯ ತುಂಬಿದ್ದರು.

ಕಿಡ್ನ್ಯಾಪ್ ಕೇಸ್, ಲೈಂಗಿಕ ದೌರ್ಜನ್ಯ ಕೇಸ್ ದಾಖಲಾಗುತ್ತಿದ್ದಂತೆ ಮಂಕಾಗಿರುವ ಹೆಚ್.ಡಿ. ರೇವಣ್ಣ ಇಷ್ಟು ದಿನ ಯಾವುದೇ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿರಲಿಲ್ಲ. ಆದರೆ ನಿನ್ನೆ ಹೊಳೆನರಸೀಪುರದತ್ತ ಹೊರಟಿದ್ದ ರೇವಣ್ಣ ದಿಢೀರನೆ ಚನ್ನರಾಯಪಟ್ಟಣದಲ್ಲಿ ಮೈಸೂರಿನ ಕಡೆ ಗಾಡಿ ತಿರುಗಿಸಿದ್ದರು. ದಕ್ಷಿಣ ಶಿಕ್ಷಕರ ಕ್ಷೇತ್ರದ ಮೈತ್ರಿ ಅಭ್ಯರ್ಥಿ ವಿವೇಕಾನಂದ ಪರ ಪ್ರಚಾರ ಸಭೆಯಲ್ಲಿ ಪಾಲ್ಗೊಂಡಿದ್ದರು.

ಬೇಲ್ ಸಿಕ್ಕಿದರೂ ರೇವಣ್ಣಗೆ ಹೊಸ ಸಂಕಷ್ಟ: ಕೆ.ಆರ್.ನಗರ ಮಹಿಳೆ ಕಿಡ್ನ್ಯಾಪ್ ಕೇಸ್‌ನಲ್ಲಿ ಜಾಮೀನು ಸಿಕ್ಕಿದರೂ ಶಾಸಕ ಹೆಚ್.ಡಿ. ರೇವಣ್ಣಗೆ ಗಂಡಾಂತರ ತಪ್ಪಿಲ್ಲ. 42ನೇ ACMM ಕೋರ್ಟ್ ನೀಡಿದ ಬೇಲ್ ರದ್ದು ಕೋರಿ ಹೈಕೋರ್ಟ್‌ಗೆ SIT ಅರ್ಜಿ ಸಲ್ಲಿಸುವ ಸಾಧ್ಯತೆ ಇದೆ. ಕಿಡ್ನ್ಯಾಪ್ ಕೇಸ್‌ನಲ್ಲಿ ತನಿಖೆ ಚುರುಕುಗೊಳಿಸಿರುವ SIT, ರೇವಣ್ಣ ವಿರುದ್ಧ ಬಲವಾದ ಸಾಕ್ಷ್ಯ ಕಲೆ ಹಾಕುತ್ತಿದೆ. ಅಲ್ಲದೇ SIT ಎಸ್‌ಪಿಪಿಯಾಗಿ ರವಿವರ್ಮ ಕುಮಾರ್ ನೇಮಕ ಮಾಡಲಾಗಿದೆ.

ಗ್ರಾಮಗಳಲ್ಲಿ ಎಲ್ಲಿಯೂ ಕುಡಿಯುವ ನೀರು ಕಲುಷಿತಗೊಳ್ಳದಂತೆ ಕಟ್ಟೆಚ್ಚರ ವಹಿಸಿ

ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸೂಚನೆ



ಮೈಸೂರು, ಮೇ 22-ನೀರಿನ ಮೂಲಗಳು ಕಲುಷಿತಗೊಳ್ಳದಂತೆ ಎಚ್ಚರ ವಹಿಸಬೇಕು. ಕುಡಿಯುವ ನೀರಿನ ಮೂಲಗಳಿಗೆ ಕಲುಷಿತ ನೀರು ಸೇರ್ಪಡೆಯಾಗುತ್ತಿರುವ ಬಗ್ಗೆ ದೂರು ಬಂದಲ್ಲಿ ತಕ್ಷಣ ಆಯಾ ತಾಲೂಕಿನ ತಹಶೀಲ್ದಾರ್, ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಗ್ರಾಮ ಆಡಳಿತ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ, ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದು ಕಲುಷಿತ ನೀರು ಶುದ್ಧನೀರಿನ ಮೂಲಗಳಿಗೆ ಸೇರದಂತೆ ತಡೆಯುವ ಮೂಲಕ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅಧಿಕಾರಿಗಳಿಗೆ ಸೂಚಿಸಿದರು.

ಇಂದು ಜಿಲ್ಲಾ ಪಂಚಾಯತ್‌ನಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ಆಯಾ ತಾಲೂಕಿನ ತಹಶೀಲ್ದಾರ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿಗಳು, ಮಹಾನಗರ ಪಾಲಿಕೆಯ ಅಧಿಕಾರಿಗಳು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಅಧಿಕಾರಿಗಳು ಹಾಗೂ ನಗರ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಅಧಿಕಾರಿಗಳೊಂದಿಗೆ ಕುಡಿಯುವ ನೀರು ಪೂರೈಕೆ ಸಂಬಂಧ ಸಭೆ ನಡೆಸಿ ಮಾತನಾಡಿದರು.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ, ಗ್ರಾಮ ಸ್ವಚ್ಛತೆ ಕುರಿತು ಗ್ರಾಮದ ಕೆಲವು ವಾರ್ಡ್‌ಗಳಲ್ಲಿನ ಚರಂಡಿ ನಿರ್ವಹಣೆ ಹಾಗೂ ಸ್ವಚ್ಛತೆಯ ಬಗ್ಗೆ ಅಧಿಕಾರಿಗಳು ಅಗತ್ಯವಾಗಿ ಕ್ರಮವಹಿಸಬೇಕು ಎಂದು ಅವರು ತಿಳಿಸಿದರು.

ಸಾರ್ವಜನಿಕರ ಆರೋಗ್ಯದ ದೃಷ್ಟಿಯಿಂದ ಗ್ರಾಮದಲ್ಲಿ ನೈರ್ಮಲ್ಯ ಕಾಪಾಡಲು ನೀರುಗಂಟಿ, ಆಶಾ ಕಾರ್ಯಕರ್ತೆಯರು ಗ್ರಾಮದ ಪ್ರತಿ ಮನೆಗೂ ಭೇಟಿ ನೀಡಿ ನೀರಿನ ಶೇಖರಣೆ ಹಾಗೂ ಸ್ವಚ್ಛತೆಯ ಬಗ್ಗೆ ಜಾಗೃತಿ ಮೂಡಿಸಬೇಕು ಎಂದರು.

ಹವಾಮಾನ ಬದಲಾವಣೆ ಮತ್ತಿತರ ಕಾರಣಗಳಿಂದ ಕರುಳುಬೇನೆ (ಗ್ಯಾಸ್ಟ್ರೋ ಎಂಟರಿಟೈಸ್) ಸೇರಿದಂತೆ ಕರುಳು ಸಂಬಂಧಿ ರೋಗಕ್ಕೀಡಾಗುವವರಿಗಾಗಿ ಪ್ರತಿ ತಾಲೂಕು ಆಸ್ಪತ್ರೆಗಳಲ್ಲಿ 5 ಬೆಡ್ ಕಾಯ್ದಿರಿಸಬೇಕು. ಈ ಸಂಬಂಧ ಖಾಸಗಿ ಆಸ್ಪತ್ರೆಗಳಲ್ಲಿ ರೋಗಿಗಳು ದಾಖಲಾದರೆ ಸಂಬಂಧಪಟ್ಟ ತಾಲೂಕು ಆಸ್ಪತ್ರೆಯ ಅಧಿಕಾರಿಗಳಿಗೆ ಮಾಹಿತಿ ನೀಡಬೇಕು. ಹೋಟೆಲ್‌ಗಳಲ್ಲಿ, ರಸ್ತೆ ಬದಿಯ ಪಾನಿಪುರಿ ಇನ್ನಿತರ ಫಾಸ್ಟ್‌ಫುಡ್ ಸೆಂಟರ್‌ಗಳಲ್ಲಿ ಸ್ವಚ್ಛತೆ ಕಾಪಾಡುವುದರ ಬಗ್ಗೆ ತಿಳಿಸಬೇಕು. ಜೊತೆಗೆ ಶುದ್ಧ ಕುಡಿಯುವ ನೀರು ಹಾಗೂ ಬಿಸಿ ನೀರನ್ನು ನೀಡಬೇಕು ಎಂದು ಸಲಹೆ ನೀಡಿದರು.

ಗ್ರಾಮೀಣ ಜನವಸತಿ ಪ್ರದೇಶಗಳಿಗೆ ನೀರನ್ನು ಸರಬರಾಜು ಮಾಡುವ ಮುನ್ನ ನೀರಿನ ಮೂಲ, ನೀರಿನ ಸಂಗ್ರಹಣೆ ಹಾಗೂ ನೀರು ಪೂರೈಕೆಯ ಅಧಿಕಾರಿಗಳು ಖುದ್ದಾಗಿ ಭೇಟಿ ನೀಡಿ ನೀರಿನ ಗುಣಮಟ್ಟವನ್ನು ಪರಿಶೀಲಿಸಿ ನಂತರ ಸರಬರಾಜು ಮಾಡಬೇಕು ಎಂದು ಸೂಚಿಸಿದರು.

ಇರುವ ಬೋರ್‌ವೆಲ್‌ಗಳ ಸುತ್ತಲು ಪ್ಲಾಟ್‌ಫಾರಂಗಳನ್ನು ನಿರ್ಮಿಸಿ ಚರಂಡಿ ನೀರು ಹೋಗದಂತೆ ತಡೆಯಬೇಕು. ಯಾವುದೇ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಕಂಡುಬಂದರೆ ಸಹಾಯವಾಣಿ 0821-252 6355 ಅಥವಾ 0821-2423 800, 1077 ಕಂಟ್ರೋಲ್ ರೂಂ ಅನ್ನು ಸಂಪರ್ಕಿಸಬಹುದು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯಿತ್ರಿ ಮಾತನಾಡಿ, ಗ್ರಾಮೀಣ ಪ್ರದೇಶದಲ್ಲಿನ ಕುಡಿಯುವ ನೀರಿನ ಪೈಪುಗಳು ರಸ್ತೆ ಚರಂಡಿಗಳ ಮೂಲಕ ಹಾದು ಹೋಗಿ ಒಡೆದಿದ್ದರೆ, ತಕ್ಷಣ ಸರಿಪಡಿಸಿ, ಇಲ್ಲದಿದ್ದರೆ ಒಡೆದ ಪೈಪ್‌ನಿಂದ ಸೋರಿಕೆಯಾದ ನೀರು ಕಲುಷಿತ ನೀರಿನೊಂದಿಗೆ ಬೆರೆಯುವ ಸಂಭವವಿರುವುದರಿಂದ ಇದರ ಬಗ್ಗೆ ಮುನ್ನೆಚ್ಚರಿಕೆ ವಹಿಸಿ ಎಂದರು. ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಪಿ.ಶಿವರಾಜು, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕುಮಾರಸ್ವಾಮಿ, ಗ್ರಾಮೀಣ ಕುಡಿಯುವ ನೀರು ಹಾಗೂ ನೈರ್ಮಲ್ಯ ಕಾರ್ಯಪಾಲಕ ಅಭಿಯಂತರರು ತಹಶೀಲ್ದಾರ್ ಹಾಗೂ ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿಗಳು ಉಪಸ್ಥಿತರಿದ್ದರು.

ಮೈಸೂರು ಮಿತ್ರ ಗುರುವಾರ 23 ಮೇ 2024

ಮಳೆ ಹಾನಿ ಪ್ರದೇಶಕ್ಕೆ ಶಾಸಕ ಭೇಟಿ, ಪರಿಶೀಲನೆ



ಕುಶಾಲನಗರ, ಮೇ 22–ಪಟ್ಟಣದಲ್ಲಿ ಕಳೆದ ಎರಡು ಮೂರು ದಿನಗಳಿಂದ ಸುರಿದ ಧಾರಾಕಾರ ಮಳೆಗೆ ಹಾನಿಯಾಗಿರುವ ಪ್ರದೇಶಗಳಿಗೆ ಬುಧವಾರ ಶಾಸಕ ಡಾ. ಮಂತರ್‌ಗೌಡ ಭೇಟಿ ನೀಡಿ, ಪರಿಶೀಲಿಸಿದರು.

ಕುಶಾಲನಗರ ವ್ಯಾಪ್ತಿಯ ಮಳೆ ಹಾನಿ ಪ್ರದೇಶಗಳನ್ನು ವೀಕ್ಷಿಸಿದ ಶಾಸಕರು, ಮುಳ್ಳುಸೋಗೆ ಸಾಯಿ ಬಡಾವಣೆ ಪರಿಶೀಲಿಸಿ ಸ್ಥಳೀಯ ನಿವಾಸಿಗಳ ಸಮಸ್ಯೆ ಆಲಿಸಿದರು. ಮುಂದಿನ ದಿನಗಳಲ್ಲಿ ಸಂಭವಿಸಬಹುದಾದ ಅನಾಹುತಗಳ ಕುರಿತು ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವ ಬಗ್ಗೆ ಚರ್ಚೆ ನಡೆಸಿದರು. ಮಳೆಯಿಂದ ಬಡಾವಣೆಯ ನಿವಾಸಿಗಳಿಗೆ ಯಾವುದೇ ತೊಂದರೆ ಆಗದಂತೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಇದೇ ವೇಳೆ ಪುರಸಭೆ ಸದಸ್ಯರಾದ ಪ್ರಮೋದ್ ಮುತ್ತಪ್ಪ, ದಿನೇಶ್, ನಾಮನಿರ್ದೇಶಿತ ಸದಸ್ಯ ಎಂ.ವಿ.ಹರೀಶ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ತಾಲೂಕು ಅಧ್ಯಕ್ಷ ವಿ.ಪಿ.ಶಶಿಧರ್, ಕೆಪಿಸಿಸಿ ಕಾರ್ಯದರ್ಶಿ ಕೆ.ಪಿ.ಚಂದ್ರಕಲಾ, ಸದಸ್ಯ ಮಂಜುನಾಥ್ ಗುಂಡೂರಾವ್, ಮುಖಂಡ ಚಂದ್ರು, ಸಚಿನ್, ರಂಜನ್ ಇದ್ದರು.

ಮಳೆಗೆ ಮನೆಯ ತಡಗೋಡೆ ಕುಸಿತ



ಕೊಳಕೇರಿ ಗ್ರಾಮದ ಕಾಂಡಂಡ ಎಂ.ಚರ್ಮಣ ಅವರ ಮನೆಯ ಕಾಂಪೌಂಡ್ ಮಳೆಗೆ ಕುಸಿದಿರುವುದು.

ನಾಪೋಕ್ಲು, ಮೇ 22–ನಾಪೋಕ್ಲು ವ್ಯಾಪ್ತಿಯಲ್ಲಿ ಕಳೆದ ಕೆಲ ದಿನಗಳಿಂದ ವರುಣನ ಅಬ್ಬರ ಹೆಚ್ಚಾಗಿದ್ದು, ಬುಧವಾರ ಸಂಜೆ ನಾಪೋಕ್ಲು ಪಟ್ಟಣದಲ್ಲಿ ಬಿರುಸಿನ ಮಳೆ ಸುರಿದು ಕೆಲಕಾಲ ಜನಜೀವನ ಅಸ್ತವ್ಯಸ್ತವಾಯಿತು.

ನಾಪೋಕ್ಲು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೊಳಕೇರಿ ಗ್ರಾಮದಲ್ಲಿ ಮಳೆಯಿಂದಾಗಿ ಮನೆಯ ಮುಂಭಾಗದ ನಿರ್ಮಿಸಿದ್ದ ತಡಗೋಡೆ ಕುಸಿದು ಅಪಾರ ನಷ್ಟ ಸಂಭವಿಸಿದೆ. ಕೊಳಕೇರಿ ಗ್ರಾಮದ ನಿವಾಸಿ ಕಾಂಡಂಡ ಎಂ.ಚರ್ಮಣ ಅವರ ಮನೆಯ ಮುಂಭಾಗದ ಬೃಹತ್ ತಡೆಗೋಡೆ ಮಳೆಗೆ ಕುಸಿದು ಬಿದ್ದಿದೆ. ನಾಪೋಕ್ಲುವಿನಿಂದ ಕೊಳಕೇರಿ ಮಾರ್ಗವಾಗಿ ವಿರಾಜಪೇಟೆಗೆ ತೆರಳುವ ಮುಖ್ಯ ರಸ್ತೆಯ ಬದಿಯಲ್ಲೇ ತಡೆಗೋಡೆ ಕುಸಿದಿದ್ದು, ರಸ್ತೆ ಬದಿಯಲ್ಲಿದ್ದ ವಿದ್ಯುತ್ ಕಂಬಕ್ಕೆ ತಡೆಗೋಡೆ ವಾಲಿ ನಿಂತಿದೆ. ಸ್ಥಳಕ್ಕೆ ನಾಪೋಕ್ಲು ಕಂದಾಯ ಇಲಾಖೆಯ ಗ್ರಾಮಲೆಕ್ಕಿಗರಾದ ಅಮೃತಾ, ಗ್ರಾಮ ಪಂಚಾಯಿತಿ ಸದಸ್ಯ ಕೆ.ವೈ.ಅಶ್ರಫ್ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಕಾಡಾನೆ ದಾಳಿಗೆ ವಾಹನಗಳು ಜಖಂ

ಸಿದ್ದಾಪುರ, ಮೇ 22–ಬಾಡಗ ಬಾಣಂಗಾಲ ಮಠ ಗ್ರಾಮದಲ್ಲಿ ರೇಡಿಯೋ ಕಾಲರ್ ಅಳವಡಿಸಿದ ಕಾಡಾನೆ ಮನೆ ಬಳಿಯ ಕಾರು ಹಾಗೂ ಬೈಕ್‌ಗಳನ್ನು ಜಖಂಗೊಳಿಸಿ, ಸ್ಥಳೀಯರಲ್ಲಿ ಆತಂಕ ಸೃಷ್ಟಿಸಿದೆ.

ಗ್ರಾಮದ ಹೇಮಂತ್, ಶ್ರೀಧರ್ ಹಾಗೂ ಚಲ್ಲಪ್ಪ ಅವರಿಗೆ ಸೇರಿದ ಕಾರು, ಬೈಕ್‌ಗಳನ್ನು ಕಾಡಾನೆ ಜಖಂಗೊಳಿಸಿದೆ. ಮನೆಯ ಬಳಿ ನಿಲ್ಲಿಸಿದ್ದ ಮೂರು ವಾಹನಗಳ ಮೇಲೆ ದಾಳಿ ಮಾಡಿದ ಕಾಡಾನೆ ಮನೆಯ ಸುತ್ತಮುತ್ತಲಿನ ಬಾಳೆ, ಕಾಫಿ, ಅಡಕೆ ಗಿಡಗಳನ್ನು ತುಳಿದು ನಾಶಪಡಿಸಿದೆ. ಬಾಡಗ ಬಾಣಂಗಾಲ ವ್ಯಾಪ್ತಿಯಲ್ಲಿ ನಿರಂತರ ಕಾಡಾನೆ ಹಾವಳಿ ಮಿತಿಮೀರಿದ್ದು, ಕಾರ್ಮಿಕರು ತೋಟ ಕೆಲಸಕ್ಕೆ ತೆರಳಲು ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಕಾಡಾನೆ ಹಾವಳಿಯನ್ನು ಶಾಶ್ವತವಾಗಿ ತಡೆಗಟ್ಟಬೇಕೆಂದು ಸ್ಥಳೀಯರು ಒತ್ತಾಯಿಸಿದ್ದಾರೆ. ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ನಾಳೆಯಿಂದ ಹಲಸು, ಮಾವು ಮೇಳ

ಮಡಿಕೇರಿ, ಮೇ 22–ತೋಟಗಾರಿಕೆ ಇಲಾಖೆಯ ಅಂಗ ಸಂಸ್ಥೆಯಾದ ಕೊಡಗು ಜಿಲ್ಲಾ ಹಾಪ್‌ಕಾಮ್ಸ್ ವತಿಯಿಂದ ಮೇ 24 ರಿಂದ 26ರವರೆಗೆ ನಗರದ ಅಂಚೆ ಕಚೇರಿಯ ಮುಂಭಾಗದ ನೂತನ ಹೈಟೆಕ್ ಮಾರಾಟ ಮಳಿಗೆ ಆವರಣದಲ್ಲಿ ಹಲಸು ಮತ್ತು ಮಾವು ಮೇಳ ನಡೆಯಲಿದೆ. ಮೇ 24ರಂದು ಬೆಳಗ್ಗೆ 10.30ಕ್ಕೆ ಜಿಲ್ಲಾಧಿಕಾರಿ ವೆಂಕಟ್‌ರಾಜಾ ಮೇಳಕ್ಕೆ ಚಾಲನೆ ನೀಡಲಿದ್ದು, ಜಿಪಂ ಸಿಇಓ ವರ್ಣಿತ್ ನೇಗಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಪಾಲ್ಗೊಳ್ಳಲಿದ್ದಾರೆ ಎಂದು ಜಿಲ್ಲಾ ಹಾಪ್‌ಕಾಮ್ಸ್ ವ್ಯವಸ್ಥಾಪಕ ನಿರ್ದೇಶಕರು ತಿಳಿಸಿದ್ದಾರೆ.

ಗಾಳಿಬೀಡು ವ್ಯಾಪ್ತಿ ಉತ್ತಮ ಮುಂಗಾರು ಪೂರ್ವ ಮಳೆ ಹಿನ್ನೆಲೆ

ನೀರಿನ ಮೂಲಗಳಿಗೆ ಜೀವ ಸೆಲೆ

ಕೂಟುಹೊಳೆ ಜಲಾಗಾರದಲ್ಲಿ ನೀರಿನ ಸಂಗ್ರಹ ಹೆಚ್ಚಳ

ಮಡಿಕೇರಿ, ಮೇ 22–ಜಿಲ್ಲೆಯ ವಿವಿಧೆಡೆ ಸುರಿಯುತ್ತಿರುವ ಮುಂಗಾರು ಪೂರ್ವ ಮಳೆ ಕುಡಿಯುವ ನೀರಿನ ಮೂಲಗಳ ಜೀವ ಸೆಲೆ ಹೆಚ್ಚಿಸಿದೆ.

ಕಳೆದೆರಡು ವಾರಗಳಿಂದ ಗಾಳಿಬೀಡು ವ್ಯಾಪ್ತಿಯಲ್ಲಿ ಉತ್ತಮ ಮಳೆಯಾಗುತ್ತಿದ್ದು, ಜಿಲ್ಲಾ ಕೇಂದ್ರ ಮಡಿಕೇರಿಯ ಪ್ರಮುಖ ಕುಡಿಯುವ ನೀರಿನ ಮೂಲ 'ಕೂಟು ಹೊಳೆ ಜಲಾಗಾರ'ದಲ್ಲಿ ಸಾಕಷ್ಟು ನೀರು ಸಂಗ್ರಹವಾಗಿದೆ. ಕೆಲ ದಶಕಗಳ ಹಿಂದೆ ಗಾಳಿಬೀಡು ವಿಭಾಗದ ಕಿರುತೊರೆಗಳಿಂದ ನಿರ್ಮಾಣವಾದ ಕಿರುಹೊಳೆಗೆ ಅಡ್ಡಲಾಗಿ ನಿರ್ಮಿಸಿರುವ 'ಕೂಟುಹೊಳೆ ಜಲಾಗಾರ' ಮಡಿಕೇರಿಯ ಬಹುತೇಕ ಬಡಾವಣೆಗಳ ಕುಡಿಯುವ ನೀರಿನ ಪ್ರಮುಖ ಮೂಲವಾಗಿದೆ. ಇದೇ ರೀತಿ ಮಳೆ ಮುಂದುವರೆದಲ್ಲಿ ಕೂಟುಹೊಳೆ ಜಲಾಗಾರ ತುಂಬಿ ಹರಿಯಲಿದೆ. ಈ ನೀರು ಮುಂದಕ್ಕೆ ಹರಿದು ಅಬ್ಬಿ ಜಲಪಾತದ ಸೊಬಗನ್ನು ಮತ್ತಷ್ಟು ಹೆಚ್ಚಿಸಲಿದೆ.

ನಗರದ ಶೇ.70ರಷ್ಟು ಪ್ರದೇಶಗಳಿಗೆ ಕೂಟುಹೊಳೆ ನೀರನ್ನೇ ಪೂರೈಕೆ ಮಾಡಲಾಗುತ್ತಿದ್ದು, ಉಳಿದ ಭಾಗಗಳಿಗೆ ರೋಷನಾರ, ಕನ್ನಂಡಬಾಣೆ ಪಂಪ್‌ಹೌಸ್, ಉಕ್ಕಡ ಪಂಪಿನ ಕೆರೆ ಹಾಗೂ ಸಾರ್ವಜನಿಕ ಬೋರ್‌ವೆಲ್‌ಗಳು ನೀರಿನ ಬೇಡಿಕೆಯನ್ನು ಈಡೇರಿಸುತ್ತಿವೆ. ಕಳೆದ ಸಾಲಿನ ಮುಂಗಾರಿನ ಕೊರತೆ, ಪ್ರಸಕ್ತ ಸಾಲಿನ ಒಂದೆರಡು ತಿಂಗಳಿನಲ್ಲಿ ಕಾಣದ ಮಳೆಯಿಂದ ಕೂಟುಹೊಳೆ ಜಲಾಗಾರ ಅಕ್ಷರಶಃ ಬತ್ತಿಹೋಗಿತ್ತು. ಈ ಹಿನ್ನೆಲೆಯಲ್ಲಿ ಗಾಳಿಬೀಡು ಸಮೀಪದ ವಣಚಲುವಿನಲ್ಲಿರುವ 'ಕುಂಡಾಮೇಸ್ತ್ರಿ' ಕುಡಿಯುವ ನೀರಿನ ಯೋಜನೆಯಿಂದ ಕೂಟುಹೊಳೆ ಪಂಪ್‌ಹೌಸ್‌ಗೆ ನೀರನ್ನು ಸರಬರಾಜು ಮಾಡಿ, ನಗರಕ್ಕೆ ಅಗತ್ಯವಿರುವ ನೀರನ್ನು ಇಲ್ಲಿಯವರೆಗೆ ಬಳಸಿಕೊಳ್ಳಲಾಗುತ್ತಿದೆ. ಇನ್ನು ಒಂದಷ್ಟು ಮಳೆಯಾಗಿ ಮತ್ತಷ್ಟು ನೀರು ಸಂಗ್ರಹವಾದಲ್ಲಿ ನೇರವಾಗಿ ಕೂಟುಹೊಳೆಯಿಂದಲೇ ನೀರೆತ್ತುವ ಮೂಲಕ ಮಡಿಕೇರಿ ನಗರಕ್ಕೆ ನೀರಿನ ಸರಬರಾಜು ಮಾಡಲು ಇರುವ ಅಡೆತಡೆಗಳು ಶಮನವಾಗಲಿದೆ.

300 ಹೆಚ್‌ಪಿ ಮೋಟಾರ್: ಕೂಟುಹೊಳೆಯ ಕುಂಡಾಮೇಸ್ತ್ರಿ ಜಾಕ್‌ವೆಲ್‌ಗೆ ಕುಂಡಾಮೇಸ್ತ್ರಿ ಮಿನಿ ಡ್ಯಾಂನಲ್ಲಿ ಸಂಗ್ರಹವಾಗುವ ನೀರನ್ನು 300 ಹೆಚ್‌ಪಿಯ 2 ಮೋಟಾರ್‌ಗಳಿಂದ ಪಂಪ್ ಮಾಡಲಾಗುತ್ತಿದೆ. ಈ ನೀರನ್ನು ಕೂಟುಹೊಳೆಯಿಂದ 300 ಹೆಚ್‌ಪಿ ಮೋಟಾರ್ ಮೂಲಕ ನೀರು ಶುದ್ಧೀಕರಣ ಘಟಕಕ್ಕೆ ಸರಬರಾಜು ಮಾಡಿ, ಬಳಿಕ ನಗರದ ವಿವಿಧ ಬಡಾವಣೆಗಳಿಗೆ ಪೂರೈಕೆ ಮಾಡಲಾಗುತ್ತಿದೆ. ಕುಂಡಾಮೇಸ್ತ್ರಿ ಯೋಜನೆಯಲ್ಲಿ ನೀರು ಲಭ್ಯವಿದ್ದ ಕಾರಣ ಈ ಬೇಸಿಗೆಯಲ್ಲಿ ಮಡಿಕೇರಿ ನಗರ ನೀರಿನ ಕೊರತೆಯಿಂದ ಪಾರಾಗಿದೆ. ತಳ ಸೇರಿದ್ದ ಕೂಟುಹೊಳೆ ಜಲಾಗಾರ ಇದೀಗ ಸಾಕಷ್ಟು ಮಳೆಯಿಂದ ಭರ್ತಿಯಾಗುವ ಹಂತ ತಲುಪಿದ್ದು, ಇದರ ಹಿನ್ನೀರು ಹಸಿರ ಪರಿಸರದ ಹಿಮ್ಮೇಳದೊಂದಿಗೆ ಸುತ್ತ ಮುತ್ತಲ ಪ್ರದೇಶಗಳಲ್ಲಿ ಹರಡಿ ನಿಂತಿದ್ದು, ನಯನ ಮನೋಹರ ಪರಿಸರ ದೃಶ್ಯಗಳನ್ನು ಸೃಷ್ಟಿಸಿದೆ.



ಗಾಳಿಬೀಡು ವ್ಯಾಪ್ತಿಯಲ್ಲಿ ಉತ್ತಮ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಕೂಟುಹೊಳೆ ಜಲಾಗಾರದಲ್ಲಿ ಹೆಚ್ಚು ನೀರು ಸಂಗ್ರಹವಾಗಿರುವುದು.

3 ಅಡಿ ಬಾಕಿ

ತಳ ಹತ್ತಿದ್ದ ಕೂಟುಹೊಳೆ ಜಲಾಗಾರಕ್ಕೆ ಕೆಲ ದಿನಗಳಿಂದ ಗಾಳಿಬೀಡು ವ್ಯಾಪ್ತಿಯಲ್ಲಿ ಸುರಿದ ಉತ್ತಮ ಮಳೆಯಿಂದ ಸಾಕಷ್ಟು ನೀರು ಹರಿದು ಬಂದಿದ್ದು, ಈಗಾಗಲೇ 10 ಅಡಿಗಳಷ್ಟು ನೀರು ತುಂಬಿಕೊಂಡಿದೆ. ಹೀಗಿದ್ದೂ, ನಗರಕ್ಕೆ ಕೂಟುಹೊಳೆಯ ಪಂಪ್‌ಹೌಸ್‌ನಿಂದ ನೀರನ್ನು ಸರಬರಾಜು ಮಾಡಬೇಕಾದಲ್ಲಿ 3 ಅಡಿಗಳಷ್ಟು ನೀರು ಭರ್ತಿಯಾಗಬೇಕಿದೆ.

ಪ್ರಸ್ತುತ ಕೂಟುಹೊಳೆಯಿಂದ ನೀರು ಪಂಪ್ ಮಾಡಲು ಸಾಧ್ಯವಾಗದಿದ್ದರೂ ಅಲ್ಲೇ ಪಕ್ಕದಲ್ಲಿರುವ ಕುಂಡಾಮೇಸ್ತ್ರಿ ನೀರು ಸಂಗ್ರಹಣಾ ಜಾಕ್‌ವೆಲ್ ಸುತ್ತಲು ಕೂಟುಹೊಳೆಯ ನೈಸರ್ಗಿಕ ನೀರು ಆವರಿಸಿದೆ. ಈ ನೀರನ್ನು ಕೂಡ ಬಳಸಿಕೊಳ್ಳುವ ಉದ್ದೇಶದಿಂದ ವಾರದ ಹಿಂದೆ ಈ ಜಾಕ್‌ವೆಲ್ ಕೆಳ ಭಾಗದಲ್ಲಿ ರಂಧ್ರಗಳನ್ನು ಕೊರೆಯುವ ಮೂಲಕ, ಕುಂಡಾಮೇಸ್ತ್ರಿ ನೀರು ಬಂದು ಬೀಳುವ ತೊಟ್ಟಿಗೆ ಕೂಟುಹೊಳೆಯ ನೀರನ್ನು ಸೇರಿಸಲಾಗುತ್ತಿದೆ. ಈ ನೀರನ್ನು ಸ್ಟೂವರ್ಟ್ ಹಿಲ್‌ನ ಜಲ ಶುದ್ಧೀಕರಣ ಘಟಕಕ್ಕೆ ಪಂಪ್ ಮಾಡಲಾಗುತ್ತಿದ್ದು, ಇದು ನಗರದ ನೀರು ಸರಬರಾಜಿಗೆ ಹೆಚ್ಚಿನ ಬಲವನ್ನು ತಂದುಕೊಟ್ಟಿದೆ.

ಅವಕಾಶ ಕೈಚೆಲ್ಲಿದ ನಗರಸಭೆ

ಕಳೆದ ಸಾಲಿನಲ್ಲಿ ವಾಡಿಕೆ ಮಳೆ ಸಹಿತ ಮುಂಗಾರು ಕೈಕೊಟ್ಟು ಕೂಟುಹೊಳೆ ಜಲಾಗಾರ ನಾಲ್ಕೈದು ತಿಂಗಳ ಹಿಂದೆಯೇ ಬತ್ತಿ ಹೋಗಿತ್ತು. ಈ ಅವಧಿಯಲ್ಲಿ ಜಲಾಗಾರದ ಹೂಳೆತ್ತುವ ಕಾರ್ಯ ನಗರಸಭೆಯಿಂದ ನಡೆದಿದ್ದಲ್ಲಿ ನೀರಿನ ಸಂಗ್ರಹಣಾ ಸಾಮರ್ಥ್ಯ ಮತ್ತಷ್ಟು ಹೆಚ್ಚುತ್ತಿತ್ತು. ಮುಂಗಾರಿನಲ್ಲಿ ಜಲಾಗಾರಕ್ಕೆ ಹರಿದು ಬರುವ ಭಾರಿ ಪ್ರಮಾಣದ ನೀರಿನೊಂದಿಗೆ ಕೆಸರು ಮಣ್ಣು ಜಲಾಗಾರದಲ್ಲಿ ಸಂಗ್ರಹವಾಗಿದ್ದು, ಇದರಿಂದ ಸಂಗ್ರಹಣಾ ಸಾಮರ್ಥ್ಯವೂ ಮೊದಲಿನಷ್ಟಿಲ್ಲ. ಸುಮಾರು 1957ರಲ್ಲಿ ನಿರ್ಮಿಸಿರುವ ಕೂಟುಹೊಳೆ ಜಲಾಗಾರ ಅಂದಿನ ಮಡಿಕೇರಿ ನಗರದ ನೀರಿನ ಬೇಡಿಕೆಯನ್ನು ಪೂರೈಸುತ್ತಿತ್ತು. ಪ್ರಸ್ತುತ ನಗರದ ಜನಸಂಖ್ಯೆ 60 ಸಾವಿರ ಆಸು ಪಾಸಿನಲ್ಲಿದ್ದು, ಕೇವಲ ಕೂಟುಹೊಳೆ ಜಲಾಗಾರದಿಂದ ನಗರದ ನೀರಿನ ಬೇಡಿಕೆಯನ್ನು ಪೂರೈಸಲು ಅಸಾಧ್ಯವಾಗಿದೆ. ಇಂತಹ ಸಂದರ್ಭ ಅದರ ಸಂಗ್ರಹಣಾ ಸಾಮರ್ಥ್ಯ ಹೆಚ್ಚಳಕ್ಕೆ ಹೂಳೆತ್ತುವ ಕಾರ್ಯವನ್ನು ನಗರಸಭೆ ಮಾಡಬೇಕಿತ್ತಾದರೂ ಆ ಅವಕಾಶವನ್ನು ನಗರಸಭೆ ಕೈಚೆಲ್ಲಿ ಕುಳಿತಿದೆ.

ಕುಂಬೂರಿನ ಪವಿತ್ರ ಕುಟುಂಬ ದೇವಾಲಯ ಲೋಕಾರ್ಪಣೆ

ಸುಂಟಿಕೊಪ್ಪ, ಮೇ 22–ಸೋಮವಾರಪೇಟೆ ತಾಲೂಕಿನ ಮಾದಾಪುರ ವ್ಯಾಪ್ತಿಯ ಕುಂಬೂರಿನಲ್ಲಿ ನಿರ್ಮಿಸಿರುವ ಪವಿತ್ರ ಕುಟುಂಬ ದೇವಾಲಯವನ್ನು ಮೈಸೂರಿನ ಧರ್ಮ ಕ್ಷೇತ್ರದ ಆಡಳಿತಾಧಿಕಾರಿ ಡಾ.ಬರ್ನಾಡ್ ಮೊರಾಸ್ ಲೋಕಾರ್ಪಣೆಗೊಳಿಸಿದರು.

ಇದೇ ವೇಳೆ ದೇವಾಲಯದಲ್ಲಿ ವಿವಿಧ ಧಾರ್ಮಿಕ ವಿಧಿವಿಧಾನಗಳನ್ನು ನೆರವೇರಿಸಲಾಯಿತು. ಬಳಿಕ ದೇವಾಲಯ ಹಾಗೂ ಬಲಿ ಅರ್ಪಣ ಪೀಠಕ್ಕೆ ಪವಿತ್ರ ತೀರ್ಥ ಪ್ರೋಕ್ಷಣೆ ಮಾಡಲಾಯಿತು. ನಂತರ ನೂತನ



ಬಲಿ ಪೀಠದಲ್ಲಿ ಡಾ.ಬರ್ನಾಡ್ ಮೊರಾಸ್ ಹಾಗೂ ಸಹಗುರುಗಳು ಬಲಿ ಅರ್ಪಣೆ ಸಲ್ಲಿಸಿದರು. ಮಾಜಿ ಸಚಿವ ಎಂ.ಪಿ. ಅಪ್ಪಚ್ಚು ರಂಜನ್ ಮಾತನಾಡಿ, ವಿವಿಧತೆಯಲ್ಲಿ ಏಕತೆಯನ್ನು ಹೊಂದಿರುವ ದೇಶ ನಮ್ಮದಾಗಿದೆ. ವಿವಿಧ ಧಾರ್ಮಿಕ ನಂಬಿಕೆಗಳು, ಆಚಾರ–ವಿಚಾರಗಳು, ವೇಷ–ಭೂಷಣಗಳು ಬೇರೆ ಬೇರೆಯಾಗಿದ್ದರೂ ಎಲ್ಲಾ ಧರ್ಮಗಳ ಸಾರ ಒಂದೇ. ನಮ್ಮ ಸರ್ಕಾರವಿದ್ದಾಗ ಧಾರ್ಮಿಕ ಕ್ಷೇತ್ರಗಳಿಗೆ 5 ಕೋಟಿ ರೂ. ಅನುದಾನ ನೀಡಲಾಗಿದೆ ಎಂದರು.

ಧರ್ಮಗುರುಗಳಾದ ರೇ.ಫಾ.ರಾಜೇಶ್, ರೇ.ಫಾ. ಜಾನ್ ಅಲ್ಬರ್ಟ್ ಮೆಂಡೋನ್ಸಾ, ಆಲ್ಬರ್ಟ್ ಡಿಸಿಲ್ವ, ಕಾಫಿ ಬೆಳೆಗಾರ ಕೊಂಗಡ ವಿನಯ್ ಸೋಮಯ್ಯ, ಗ್ರಾಪಂ ಅಧ್ಯಕ್ಷ ಬಿದ್ದಪ್ಪ, ಉಪಾಧ್ಯಕ್ಷ ಸುರೇಶ್, ಸದಸ್ಯರಾದ ಅಂತೋಣಿ, ದಮಯಂತಿ, ಕುಂಬೂರು, ಮಾದಾಪುರ, ಹಟ್ಟಿಹೊಳೆ, ಸೋ.ಪೇಟೆ, ಸುಂಟಿಕೊಪ್ಪ ಸೇರಿದಂತೆ ವಿವಿಧ ಭಾಗಗಳ ಭಕ್ತರು ಭಾಗವಹಿಸಿದ್ದರು.

ಚಾಮರಾಜನಗರ ಜಿಲ್ಲಾದ್ಯಂತ ವಾಡಿಕೆಗಿಂತಲೂ ಉತ್ತಮ ಮಳೆಯಿಂದ

ಬರದಿಂದ ಕಂಗೆಟ್ಟಿದ್ದ ಭೂಮಿಗೆ ಜೀವಕಳೆ

ಚಾಮರಾಜನಗರ, ಮೇ 22–ಬರದ ಹಣೆಪಟ್ಟಿ ಅಂಟಿಸಿಕೊಂಡಿದ್ದ ಜಿಲ್ಲೆಯಲ್ಲಿ ಇದೀಗ ಹಸಿರುಕ್ಕುತ್ತಿದೆ. ನೀರು ಬಸಿದು ಬಾಯಿ ಬಿಟ್ಟಿದ್ದ ಕೆರೆಕಟ್ಟೆಗಳು ನೀರು ತುಂಬಿಕೊಂಡಿವೆ. ಬರಿದಾಗಿದ್ದ ಹಳ್ಳ ಕೊಳ್ಳಗಳು ಹರಿಯಲಾರಂಭಿಸಿದ್ದು, ಬರದಿಂದ ಕಂಗೆಟ್ಟಿದ್ದ ಭೂಮಿಗೆ ಜೀವಕಳೆ ಬಂದಿದೆ.

ಬಹುತೇಕ ಕೆರೆಗಳು, ಜಲಾಶಯಗಳಲ್ಲಿ ನೀರು ಖಾಲಿಯಾಗಿ ಮೈದಾನಗಳಾಗಿ ಪರಿವರ್ತನೆಯಾಗಿದ್ದವು. ಆದರೆ, ಮೇ ಮೊದಲ ವಾರದಿಂದ ಜಿಲ್ಲಾದ್ಯಂತ ವಾಡಿಕೆಗಿಂತಲೂ ಉತ್ತಮ ಮಳೆಯಾಗಿದೆ. ಇದರಿಂದ ಚೆಕ್‌ಡ್ಯಾಂ, ಕೆರೆ ಮತ್ತು ಜಲಾಶಯಗಳಲ್ಲಿ ಹಂತ ಹಂತವಾಗಿ ನೀರಿನ ಸಂಗ್ರಹ ಏರುತ್ತಿದೆ.

ಅಂತರ್ಜಲ ಸ್ವಲ್ಪ ಸುಧಾರಣೆ: ಕಳೆದ ವರ್ಷ ಪೂರ್ವ ಮುಂಗಾರು ಹಾಗೂ ಹಿಂಗಾರು ಮಳೆಗಳು ನಿರೀಕ್ಷಿತ ಪ್ರಮಾಣದಲ್ಲಿ ಸುರಿಯಲಿಲ್ಲ. ಅಲ್ಲದೇ, ವರ್ಷಾರಂಭದಿಂದ ಜಿಲ್ಲೆಯಲ್ಲಿ ಬಿಸಿಲಿನ ಝಳ ಹೆಚ್ಚಳವಾಗಿತ್ತು. ದಾಖಲೆಯ 40 ಡಿಗ್ರಿ ಸೆಲಿಯಸ್‌ನಷ್ಟು ತಾಪಮಾನದ ಅಧಿಕ ಉಷ್ಣಾಂಶದಿಂದ ಜಿಲ್ಲೆಯ ಜನರು ಹಾಗೂ ರೈತರು ತತ್ತರಿಸಿದ್ದರು.

ಮತ್ತೊಂದೆಡೆ ಮಳೆ ಅಭಾವದಿಂದ ಅಂತರ್ಜಲ ಮಟ್ಟ ಕುಸಿದು ಕೊಳವೆ ಬಾವಿಗಳೆಲ್ಲ ಬತ್ತಿ ಹೋಗಿದ್ದವು. ಇದರಿಂದ ಜಿಲ್ಲೆಯ ಬಹುತೇಕ ಗ್ರಾಮಗಳಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಶುರುವಾಗಿತ್ತು. ಜಿಲ್ಲಾಡಳಿತದಿಂದ ಕೆಲ ಗ್ರಾಮಗಳಿಗೆ ಟ್ಯಾಂಕರ್ ಮತ್ತು ಖಾಸಗಿ ಕೊಳವೆ ಬಾವಿಗಳ ಮೂಲಕ ನೀರು ಪೂರೈಸಲಾಗುತ್ತಿದೆ. ಮತ್ತೊಂದೆಡೆ ಬೆಳೆಗಳು ಒಣಗಿ ಹೋಗುತ್ತಿದ್ದರಿಂದ ರೈತರ ಮುಖದಲ್ಲಿ ಆನಂದವೇ ಮಾಯವಾಗಿತ್ತು. ಆದರೆ, ಇತ್ತೀಚೆಗೆ ಸುರಿದ ಮಳೆಗೆ ಕೃಷಿ ಚಟುವಟಿಕೆಗಳು ಬಿರುಸುಗೊಂಡಿವೆ. ಹಾಗೆಯೇ ನೀರಿನ ಸಂಗ್ರಹದಿಂದ ಜಿಲ್ಲೆಯ ಜಲಾಶಯ ಮತ್ತು ಕೆರೆ ಕಟ್ಟೆಗಳಿಗೆ ಹೊಸ ಕಳೆ ಬರುತ್ತಿದೆ.



ಜಿಲ್ಲೆಯಲ್ಲಿ ಧಾರಾಕಾರ ಮಳೆಯಿಂದ ರಸ್ತೆಯಲ್ಲಿ ಹೊಳೆಯ ರೀತಿ ನೀರು ಹರಿಯುತ್ತಿರುವುದು.

ತುಂಬಿ ಹರಿದ ಹಳ್ಳ–ಕೊಳ್ಳ: ಚಾಮರಾಜನಗರ ತಾಲೂಕಿನ ಹರದನಹಳ್ಳಿ ಹೋಬಳಿ ವ್ಯಾಪ್ತಿಯಲ್ಲಿ ಕಳೆದ ಮೂರ್ನಾಲ್ಕು ದಿನಗಳಿಂದ ಸುರಿಯುತ್ತಿರುವ ಧಾರಾಕಾರ ಮಳೆಗೆ ಹಳ್ಳ–ಕೊಳ್ಳಗಳು ತುಂಬಿ ಹರಿದವು. ಸಣ್ಣಪುಟ್ಟ ಕೆರೆಕಟ್ಟೆಗಳು ತುಂಬಿ ಕೋಡಿ ಬಿದ್ದಿವೆ. ವಿ.ಸಿ.ಹೊಸೂರು, ವೆಂಕಟಯ್ಯನಛತ್ರ, ಅಮಚವಾಡಿ, ಚನ್ನಪ್ಪನಪುರ ವ್ಯಾಪ್ತಿಯಲ್ಲಿ ಭರ್ಜರಿ ಮಳೆಯಾಗಿದ್ದು, ಗ್ರಾಮೀಣ ರಸ್ತೆಗಳು ಜಲಾವೃತಗೊಂಡು ಜಮೀನುಗಳಿಗೆ ನೀರು ನುಗ್ಗಿ ಸಾಕಷ್ಟು ಅವಾಂತರ ಸೃಷ್ಟಿಸಿದೆ.

ಚನ್ನಪ್ಪನಪುರ ವ್ಯಾಪ್ತಿಯ ಹೆಬ್ಬಳ್ಳ ವೆಂಕಟಯ್ಯನಛತ್ರ ವ್ಯಾಪ್ತಿಯ ಚಿಕ್ಕಹೊಳೆ ಕಾಲುವೆಗಳು ತುಂಬಿ ಹರಿದು ಹಳ್ಳಗಳು ತುಂಬಿದ್ದರಿಂದ ಚನ್ನಪ್ಪನಪುರ ಅಮಚವಾಡಿ ರಸ್ತೆಯ ಶನೇಶ್ವರ ದೇವಾಲಯದ ಬಳಿ ಹೆಬ್ಬಳ್ಳಕ್ಕೆ ನಿರ್ಮಿಸಿರುವ ಸೇತುವೆ ಜಲಾವೃತಗೊಂಡು ವಾಹನಗಳು, ಜನರ ಸಂಚಾರಕ್ಕೆ ಅಡಚಣೆಯಾಯಿತು. ಹಳ್ಳಕೊಳ್ಳ, ಕಾಲುವೆಗಳು ತುಂಬಿ ಹರಿದ ಪರಿಣಾಮ ಚಿಕ್ಕಹೊಳೆ ಜಲಾಶಯದ ಒಳ ಹರಿವು ಹೆಚ್ಚಳವಾಗಿದೆ.

3.21 ಸೆಂ.ಮೀ ಮಳೆ: ಜಿಲ್ಲಾ ವ್ಯಾಪ್ತಿಯಲ್ಲಿ ಕಳೆದೆರಡು ದಿನಗಳಿಂದ 3.21 ಸೆಂ.ಮೀ. ಮಳೆ ಬಿದ್ದಿದೆ. ಚಾಮರಾಜನಗರ ತಾಲೂಕಿನಲ್ಲಿ ಗರಿಷ್ಠ 5.78 ಸೆಂ.ಮೀ. ಮಳೆಯಾಗಿದೆ. ಯಳಂದೂರಿನಲ್ಲಿ 3.30 ಸೆಂ.ಮೀ., ಹನೂರಿನಲ್ಲಿ 2.7 ಸೆಂ.ಮೀ., ಕೊಳ್ಳೇಗಾಲದಲ್ಲಿ 2.60 ಸೆಂ.ಮೀ., ಗುಂಡ್ಲುಪೇಟೆಯಲ್ಲಿ 2.01 ಸೆಂ.ಮೀ. ಮಳೆ ಬಿದ್ದಿದೆ. ವಾರದ ಅವಧಿಯಲ್ಲಿ ಜಿಲ್ಲೆಯಲ್ಲಿ 6.9 ಸೆಂ.ಮೀ. ಮಳೆಯಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದ್ದು, ಇನ್ನೂ ಮೂರ್ನಾಲ್ಕು ದಿನಗಳು ಇದೇ ರೀತಿ ಮಳೆಯಾಗಲಿದೆ ಎಂದು ಮಾಹಿತಿ ನೀಡಿದೆ.

ಕಾಮಗಾರಿ ವಿಳಂಬ ಖಂಡಿಸಿ ಪ್ರತಿಭಟನೆ

ಚಾಮರಾಜನಗರ, ಮೇ 22–ತಾಲೂಕಿನ ಬಸಪ್ಪನಪಾಳ್ಯ ಗ್ರಾಮದಲ್ಲಿ ಚರಂಡಿ ಹಾಗೂ ರಸ್ತೆ ಕಾಮಗಾರಿ ವಿಳಂಬ ಖಂಡಿಸಿ ಗ್ರಾಮಸ್ಥರು ಕಾಮಗಾರಿ ಸ್ಥಳದಲ್ಲಿ ಪ್ರತಿಭಟನೆ ನಡೆಸಿದರು.

ರಾಜ್ಯ ಗ್ರಾಮ ಪಂಚಾಯಿತಿ ಸದಸ್ಯರುಗಳ ಮಹಾಒಕ್ಕೂಟದ ತಾಲೂಕು ಅಧ್ಯಕ್ಷ ಆರ್.ರೇವಣ್ಣ ಹಾಗೂ ಗ್ರಾಪಂ ಸದಸ್ಯೆ ಶಶಿರೇಖಾ ಭೋಜರಾಜು ನೇತೃತ್ವದಲ್ಲಿ ಗ್ರಾಮಸ್ಥರು ಗ್ರಾಮದಲ್ಲಿ ಪ್ರತಿಭಟನೆ ನಡೆಸಿದರು.

ಗ್ರಾಮದಲ್ಲಿ ನೀರಾವರಿ ಇಲಾಖೆ ಅನುದಾನದಲ್ಲಿ ಸಿಮೆಂಟ್ ರಸ್ತೆ, ಚರಂಡಿ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಗುತ್ತಿಗೆದಾರ ಸಿದ್ದೀಕ್ ಚರಂಡಿ ಕಾಮಗಾರಿಗೆ ಹಳ್ಳ ತೆಗೆದು ಕಬ್ಬಿಣ ಕಟ್ಟಲಾಗಿದೆ. ಇದರಿಂದ ನೀರಿನ ಸಮಸ್ಯೆ, ನಿವಾಸಿಗಳು ಓಡಾಡಲು ತೊಂದರೆ ಅನುಭವಿಸುವಂತಾಗಿದೆ. ಮಗು ಬಿದ್ದು ಚರಂಡಿ ನಿರ್ಮಾಣದ ಬಾಕ್ಸ್‌ಗೆ ಕಟ್ಟಿರುವ ಕಬ್ಬಿಣದಿಂದ ಗಾಯಗೊಂಡಿದೆ. ಆದ್ದರಿಂದ ಕಾಮಗಾರಿಯನ್ನು ಶೀಘ್ರವಾಗಿ ಮುಗಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು. ಗುತ್ತಿಗೆದಾರ ಸಿದ್ದೀಕ್, ಆಲೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸರಗೂರು ಮೋಳೆ, ಮಲ್ಲೂಪುರ, ಆಲೂರು, ಕರಿಯನಕಟ್ಟೆ ಗ್ರಾಮಗಳಲ್ಲೂ ಕಾಮಗಾರಿ ಪೂರ್ಣಗೊಳಿಸಿಲ್ಲ. ಎಲ್ಲಕಡೆ ಅರ್ಧಕ್ಕೆ ಕಾಮಗಾರಿ ನಿಲ್ಲಿಸಿ, ಜನರಿಗೆ ತೊಂದರೆ ನೀಡಿದ್ದಾರೆ. ಆದ್ದರಿಂದ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಬಸಪ್ಪನಪಾಳ್ಯ ಗ್ರಾಮದ ಕಾಮಗಾರಿ ಪೂರ್ಣಗೊಳಿಸಬೇಕು. ಇಲ್ಲದಿದ್ದರೆ ಜಿಲ್ಲಾಡಳಿತ ಭವನದ ಎದುರು ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಗ್ರಾಪಂ ಮಾಜಿ ಸದಸ್ಯ ಶಿವಕುಮಾರ್, ಮುಖಂಡರಾದ ಶಿವಪ್ಪ, ನಟರಾಜು, ಮಹೇಶ್, ಹರ್ಷ, ಸೋಮಶೇಖರ್, ಸ್ವಾಮಿ, ರಾಮೇಗೌಡ, ಸೋಮಶೇಖರ, ಪುಷ್ಪಲತಾ, ಉಮಾದೇವಿ, ಶಿವಮ್ಮ ಭಾಗವಹಿಸಿದ್ದರು.



ಬಸಪ್ಪನಪಾಳ್ಯದಲ್ಲಿ ಚರಂಡಿ ಕಾಮಗಾರಿ ವಿಳಂಬ ಖಂಡಿಸಿ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಪ್ರತಿಜ್ಞಾ ವಿಧಿ ಬೋಧನೆ...



ಚಾಮರಾಜನಗರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಭಯೋತ್ಪಾದನಾ ವಿರೋಧಿ ದಿನಾಚರಣೆ ಅಂಗವಾಗಿ ತಹಶೀಲ್ದಾರ್ ಕೀರ್ತನಾ ಪ್ರತಿಜ್ಞಾ ವಿಧಿ ಬೋಧಿಸಿದರು. ಜಿಲ್ಲಾಧಿಕಾರಿ ಕಚೇರಿ ಸಿಬ್ಬಂದಿ ಇದ್ದರು.

ಪೃಥ್ವಿನ್ ಎಸ್.ಗೌಡಗೆ ಐಬಿಆರ್ ಬಿರುದು



ಚಾಮರಾಜನಗರ, ಮೇ 22–ತಾಲೂಕಿನ ಬಸಪ್ಪನಪಾಳ್ಯ ಗ್ರಾಮದ ಪೃಥ್ವಿನ್ ಎಸ್.ಗೌಡಗೆ ಇಂಡಿಯಾ ಬುಕ್ ಆಫ್ ರೆಕಾರ್ಡ್‌ನ ಬಿರುದು ಲಭಿಸಿದೆ.

ತೇಜಸ್ವಿನಿ ಮತ್ತು ಶಿವರಾಜು ದಂಪತಿಯ ಪುತ್ರ 4 ವರ್ಷದ ಪೃಥ್ವಿನ್, ದೇಹದ 16 ಭಾಗಗಳು, 15 ಪ್ರಾಣಿಗಳು, 6 ಹಣ್ಣುಗಳು, 6 ಬಣ್ಣಗಳು 13 ತರಕಾರಿಗಳು, 6 ಪಕ್ಷಿಗಳು, 14 ಆಹಾರ ಬೆಳೆಗಳು, ಮತ್ತು 165 ವಸ್ತುಗಳು, 26 ಸಂಬಂಧಿತ ಪದಗಳು, ವಾರದ ದಿನಗಳು, ಮತ್ತು 1 ರಿಂದ 10ರ ವರೆಗೆ ಎಣಿಕೆಯೊಂದಿಗೆ ಇಂಗ್ಲಿಷ್ ವರ್ಣಮಾಲೆಯನ್ನು ಪಠಿಸುವ ಮೂಲಕ ಪೃಥ್ವಿನ್ ಎಸ್.ಗೌಡ 4ನೇ ವಯಸ್ಸಿನಲ್ಲೇ ಸಾಧನೆ ಮಾಡಿದ್ದಾನೆ.

ಉರುಕಾತೇಶ್ವರಿ ಅಮ್ಮನವರ ದೇವಸ್ಥಾನದ ವಾರ್ಷಿಕೋತ್ಸವ

ಚಾಮರಾಜನಗರ, ಮೇ 22– ತಾಲೂಕಿನ ಸಂತೇಮರಹಳ್ಳಿ ಹೋಬಳಿಯ ನವಿಲೂರು ಗ್ರಾಮದಲ್ಲಿನ ಶ್ರೀ ಉರುಕಾತೇಶ್ವರಿ ಅಮ್ಮನವರ 2ನೇ ವಾರ್ಷಿಕೋತ್ಸವ ಬುಧವಾರ ಸಂಭ್ರಮದಿಂದ ನೆರವೇರಿತು.



ವಾರ್ಷಿಕೋತ್ಸವದ ಅಂಗವಾಗಿ ಬೆಳಗ್ಗೆ 6 ಗಂಟೆಗೆ ಗಣಪತಿ ಹೋಮ ಸೇರಿದಂತೆ ವಿವಿಧ ಪೂಜಾ ಕೈಂಕರ್ಯ ನೆರವೇರಿಸಲಾಯಿತು. ಮಧ್ಯಾಹ್ನ ಭಕ್ತರಿಗೆ ಅನ್ನ ಸಂತರ್ಪಣೆ ಮಾಡಲಾಯಿತು. ಸಂಜೆ 4.30ಕ್ಕೆ ಅಮ್ಮನವರ ಉತ್ಸವ ವಿಜೃಂಭಣೆಯಿಂದ ನೆರವೇರಿತು. ಉತ್ಸವ ದೇವಸ್ಥಾನದಿಂದ ಆರಂಭವಾಗಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಾಗಿತು. ಈ ವೇಳೆ ವೀರಗಾಸೆ, ಮಂಗಳವಾದ್ಯ ಸೇರಿದಂತೆ ವಿವಿಧ ಜನಪದ ಕಲಾತಂಡಗಳ ಕಲಾವಿದರು ಪಾಲ್ಗೊಂಡು ಮೆರವಣಿಗೆಗೆ ಮೆರಗು ತಂದರು.

ವಾರ್ಷಿಕೋತ್ಸವದ ಅಂಗವಾಗಿ ದೇವಾಲಯಕ್ಕೆ ಸುಣ್ಣಬಣ್ಣ ಬಳಿದು, ತಳಿರು–ತೋರಣ, ವಿದ್ಯುತ್ ದೀಪಗಳಿಂದ ಅಲಂಕಾರ ಮಾಡಲಾಗಿತ್ತು. ನವಿಲೂರು ಸುತ್ತಮುತ್ತಲ ಗ್ರಾಮಗಳ ನೂರಾರು ಭಕ್ತರು ಅಮ್ಮನವರ ದರ್ಶನ ಪಡೆದು ಪೂಜೆ ಸಲ್ಲಿಸಿದರು.

ತೋಟಗಾರಿಕೆ ತರಬೇತಿಗೆ ಅರ್ಜಿ ಆಹ್ವಾನ

ಚಾಮರಾಜನಗರ, ಮೇ 22– ತೋಟಗಾರಿಕೆ ಇಲಾಖೆ ವತಿಯಿಂದ ಮೈಸೂರಿನ ರಂಗಸಮುದ್ರ ತೋಟಗಾರಿಕೆ ತರಬೇತಿ ಕೇಂದ್ರದಲ್ಲಿ 2024–25ನೇ ಸಾಲಿಗೆ ಚಾಮರಾಜನಗರ ಜಿಲ್ಲೆಯ ರೈತರ ಮಕ್ಕಳಿಗೆ 9 ತಿಂಗಳ ತೋಟಗಾರಿಕೆ ತರಬೇತಿ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ಜುಲೈ 1 ರಿಂದ ಮುಂದಿನ ಮಾರ್ಚ್ 31ರವರೆಗೆ ತರಬೇತಿ ನೀಡಲಾಗುವುದು. ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾಗಿರಬೇಕು. ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ 18 ರಿಂದ 30 ವರ್ಷ, ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ 18 ರಿಂದ 33 ವರ್ಷ ಹಾಗೂ ಮಾಜಿ ಸೈನಿಕ ಅಭ್ಯರ್ಥಿಗಳಾಗಿದ್ದಲ್ಲಿ 33 ರಿಂದ 65 ವರ್ಷದೊಳಗಿರಬೇಕು. ಚಾ.ನಗರ ರಾಜ್ಯ ವಲಯ, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಚೇರಿ ಅಥವಾ ಇಲಾಖಾ ವೆಬ್‌ಸೈಟ್ https://horticulturedir.karnataka.gov.inನಲ್ಲಿ ಅರ್ಜಿ ಡೌನ್‌ಲೋಡ್ ಮಾಡಿಕೊಂಡು ಜೂ.3ರೊಳಗೆ ಸಲ್ಲಿಸಬೇಕು.

ಬೈಕ್‌ಗೆ ಕಾರು ಡಿಕ್ಕಿ: ಅಣ್ಣ ಸಾವು, ತಂಗಿಗೆ ತೀವ್ರ ಗಾಯ

ಬೇಗೂರು, ಮೇ 22– ಬೈಕ್‌ಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಅಣ್ಣ ಮೃತಪಟ್ಟಿದ್ದು, ತಂಗಿ ತೀವ್ರವಾಗಿ ಗಾಯಗೊಂಡಿರುವ ಘಟನೆ ಗರಗನಹಳ್ಳಿ ಗೇಟ್ ಬಳಿಯ ಊಟಿ–ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಬುಧವಾರ ಸಂಜೆ ನಡೆದಿದೆ.

ಗುಂಡ್ಲುಪೇಟೆ ತಾಲೂಕಿನ ಅಲತ್ತೂರು ಗ್ರಾಮದ ಮಲ್ಲೇಶ್ (23) ಮೃತಪಟ್ಟಿದ್ದು, ಈತನ ತಂಗಿ ಮಾನಸ (21) ತೀವ್ರವಾಗಿ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾಳೆ.



ಇಬ್ಬರು ಬೈಕ್‌ನಲ್ಲಿ ದಡದಹಳ್ಳಿ ಕಡೆಯಿಂದ ಅಲತ್ತೂರು ಗ್ರಾಮಕ್ಕೆ ಬರುತ್ತಿದ್ದರು. ಈ ವೇಳೆ ಮೈಸೂರು ಕಡೆಯಿಂದ ವೇಗವಾಗಿ ಬಂದ ಕಾರು ಬೈಕ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಮಲ್ಲೇಶ್ ತಲೆ ಹಾಗೂ ಕೈ ಕಾಲಿಗೆ ತೀವ್ರ ಪೆಟ್ಟು ಬಿದ್ದಿದೆ. ತಕ್ಷಣ ಈತನನ್ನು ಬೇಗೂರು ಸಾರ್ವಜನಿಕ ಆಸ್ಪತ್ರೆಗೆ ಸಾಗಿಸಿ, ಪ್ರಥಮ ಚಿಕಿತ್ಸೆ ನೀಡಿ ನಂತರ ಮೈಸೂರಿನ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ.

ಬೈಕ್ ಸಂಪೂರ್ಣ ನಜ್ಜುಗುಜ್ಜಾಗಿದ್ದು, ಕಾರಿನ ಮುಂಭಾಗ ಜಖಂಗೊಂಡಿದೆ. ಈ ಸಂಬಂಧ ಬೇಗೂರು ಠಾಣೆ ಪೊಲೀಸರು ಸ್ಥಳ ಪರಿಶೀಲಿಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಸೇಲ್ ಮುಡಾ ಖಾತಾ ಸೈಟ್
ಈಸ್ಟ್ ಫೇಸಿಂಗ್ ಕಾರ್ನರ್ ಸೈಟ್ 8.7 ಮೀ x 12 ಮೀ ದಡದಹಳ್ಳಿ ಜ್ಞಾನಭಾರತಿ ಲೇಔಟ್, ಏರ್ ಪೋರ್ಟ್ ಹಿಂಭಾಗದ ಸ್ಟೇಟ್ ಹೈವೇ ರೋಡ್ ಡೈರೆಕ್ಟ್ ಓನರ್ ಬೆಲೆ: 35 ಲಕ್ಷ
9342123373

ಬೇಕಾಗಿದ್ದಾರೆ
ಮೈಸೂರಿನ ಹೂಟಗಳ್ಳಿ ಇಂಡಸ್ಟ್ರಿಯಲ್ ಏರಿಯಾ (ರಾಣಿ ಮದ್ರಾಸ್ ಕಾರ್ಖಾನೆ) ಹತ್ತಿರವಿರುವ ಕಾರ್ಖಾನೆಗೆ 12 ಗಂಟೆ ಕೆಲಸ ಹಗಲು, ರಾತ್ರಿ ವಿದ್ಯಾವಂತ, ಸೆಕ್ಯೂರಿಟಿ ಗಾರ್ಡ್ ಅನುಭವವಿರುವ 55 ವರ್ಷ ಒಳಗಿನ ಪುರುಷ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವೇತನ ತಿಂಗಳಿಗೆ 15000 ಸಾವಿರ ರೂ. ಕ್ಯಾಂಟೀನ್ ಮತ್ತು ESI & PF ಸೌಲಭ್ಯವಿರುತ್ತದೆ.
9731976148

SPACE AVAILABLE FOR RENT
Cricket Academy, Foot ball, Hockey and Tennis.
Mr. Hannan (9019667774)
Mr. Belliappa (7975596306)
Place: S.S. Nagar, Bannimantap, Mysore
Next to Taj Convention Hall

AUDITORIUM SPACE AVAILABLE
Capacity: Around 100. to Conduct Events and Functions.
Mr. Hannan (9019667774)
Mr. Belliappa (7975596306)
Place: S.S. Nagar, Bannimantap, Mysore, Land Mark: Next to Taj Convention Hall

Expoglow Global Consultants Pvt Ltd
URGENT HIRING
Manager & Telecalling Executive (Female/Male)
Freshers & Experienced. Location: Mysuru
Email Id: hr@expoglowglobalconsultants.com
Contact: 9560105912

EAST FACE MUDA APPROVED
40x60 SITE FOR SALE
Nityananda Sagara, Huilalu, Mysore
8217851695

ಮನೆ ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರಿನ ಹೆಬ್ಬಾಳಿನಲ್ಲಿ ವಾಸಿಸುತ್ತಿರುವ ಕುಟುಂಬಕ್ಕೆ ಮನೆ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ.
ಸಂಬಳ ರೂ.11000 (ನೆಗೋ)
9535305693

ಸೈಟು ಮಾರಾಟಕ್ಕಿದೆ
30x50
Place: ನಿರ್ಮಾಣ ಕಲ್ಪವೃಕ್ಷ ಲೇಔಟ್ (ಮುರುಡಗಳ್ಳಿ) ಮೈಸೂರು ತಾಲೂಕು
ಬೆಲೆ: 15,00,000/–
8088604041
8217323951

LENIN CONVENT- SRIRANGAPATNA
WANTED TEACHERS
Freshers Can apply
Sub:- ENGLISH (With fluent English) - 1
Mathematics and science - 1
Hindi - 1 Social Science-1
Kannada-1 = Interview From May 6- 2024 At 11Am
9844854461, 6362000950
Immediately Appointment

ಮನೆ ಖಾಲಿ ನಿವೇಶನಗಳು ಮಾರಾಟಕ್ಕಿವೆ
1. ಪಾಂಡವಪುರ ತಾ. ಜಕ್ಕನಹಳ್ಳಿ ವೃತ್ತದ ಸಮೀಪ (NH150A)
ಅಳತೆ: a. ಪೂ–ಪ: 40,ಉ–ದ:50.
b. ಪೂ–ಪ: 36, ಉ–ದ:50
2. ಪಾಂಡವಪುರ ಟೌನ್, ಕೃಷ್ಣನಗರ
ಅಳತೆ: ಪೂ–ಪ: 48, ಉ–ದ:40
ಸಂಪರ್ಕಿಸಿ: 8073589849


ಸ್ಕೂಲ್ ಯೂನಿಫಾರಂ ಹೋಲ್‌ಸೇಲ್ ಬೆಲೆಯಲ್ಲಿ
ಸದ್ವಿದ್ಯ, ಅಮೃತಮಯಿ ನಟರಾಜ ಕಾನ್ವೆಂಟ್ ನಳಂದ, ಮರಿಮಲ್ಲಪ್ಪ ಅವಿಲ, ರೋಟರಿವೆಸ್ಟ್ ಆದರ್ಶ, ಸೆಂಟ್‌ಮೇರೀಸ್ ಹೋಲಿ ರೋಸರಿ
ಭಾವಸಾರ್ ಶ್ರೀಗಣೇಶ್
ಅಗ್ರಹಾರ, ಬಸವೇಶ್ವರ ರಸ್ತೆ 5ನೇ ಕ್ರಾಸ್, ಮೈಸೂರು

Shashwatha Seva School
Primary & High School
(English Medium - State Syllabus)
T. Narasipura Main Road, Alanahalli, Mysore-28
WANTED TEACHERS
For Nursery, Social Science, Physical Education & Primary (EVS / Maths)
0821-2478099 / 9611353433
Email: shashwathasevaschool4@gmail.com

WANTED
Duty Doctor, Radiographer Typist -Medical, Accountant, Ot Scrub Staff Electrician / Maintanence
9972982665
Bhanavi Hospital

ಬೇಕಾಗಿದ್ದಾರೆ
ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ Metagalli, Industiral Area, Mysore
ಶ್ರೀ ದುರ್ಗಾ ಎಂಟರ್‌ಪ್ರೈಸಸ್, ಮೈಸೂರು
9886795741,7899980920
9902644639

ಮನೆ ಮಾರಾಟಕ್ಕಿದೆ
20x30 ಮನೆ ದಟ್ಟಗಳ್ಳಿ
ಬೆಲೆ : 47 ಲಕ್ಷ
ಹಳೆ ಮನೆ ಸೈಟ್ – ಹೊಸಮನೆ ಮಾರುವವರು ಕೊಳ್ಳುವವರು
9945042875

ವಾತ್ಸಲ್ಯಾ ವೃದ್ಧಾಶ್ರಮ
116/7, 80 ಅಡಿ ರಸ್ತೆ ಹತ್ತಿರ, ವೆಂಕಟೇಶ್ವರ ನಗರ, ಆಲನಹಳ್ಳಿ, ಮೈಸೂರು–570028
9538374699, 8105015389
9844615127

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಹೆಲ್ತ್ ಕೇರ್ ತರಬೇತಿ
SSLC / PUC ಆದವರಿಗೆ ಡಿಪ್ಲಮೋ ಇನ್ ಹೆಲ್ತ್ ಕೇರ್ ತರಬೇತಿ ಕೊಡಲಾಗುತ್ತದೆ. GNM/BSC ನರ್ಸಿಂಗ್ ಆದವರಿಗೆ ಕೆಲಸವಿದೆ.
ಸೆಂಟ್ ಮೇರೀಸ್ ಆಸ್ಪತ್ರೆ, ಸಿಲ್ಕ್ ಫ್ಯಾಕ್ಟರಿ ಸರ್ಕಲ್ NIE ಕಾಲೇಜ್ ಪಕ್ಕ, ಮೈಸೂರು
9916908454

ಬೋಳು ತಲೆಯ ಸಮಸ್ಯೆಯೇ?

ಕಿಮೊತರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, Kuvempunagar, Mysuru
MYSURU 9611028523 MANGALORE 9343142258

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular / Saturday / Correspondence Courses with practical training. www: imkta.in
ALPHA INTERNATIONAL SCHOOL @ Srirampura
Call: 7829937469
ONLINE TRAINING AVAILABLE

DTCP SITES FOR SALE
DTCP Sites With RERA
Near Jayapura, H.D. Kote Road, Mysore.
9590491194,9606783264

ಮನೆ ಬಾಡಿಗೆಗೆ
ಎರಡು ಬೆಡ್ ರೂಂ ಉಳ್ಳ ಹೊಸ ಮನೆಗಳು ವಿದ್ಯಾರಣ್ಯಪುರಂ 1ಮೇನ್ 7ನೇ ಕ್ರಾಸ್ ಹಾಗೂ ಮಾಲ್ ಆಫ್ ಮೈಸೂರು ಹತ್ತಿರ 10x45 ಕಛೇರಿಗೆ ಅಥವಾ ಒಂದು ಬೆಡ್ ರೂಮ್ ಇಟ್ಟಿಗೆ ಗೂಡು
6360767226

SITE FOR SALE
30x40 S/F, MUDA Approved site for sale Sukhadayi Layout, Near JSS Layout 2nd Stage, Mysore. Contact:
Mob: 8431929134

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 7204494854

ಹೊಸ ಮನೆ ಮಾರಾಟಕ್ಕಿದೆ
ಸರ್ದಾರ್ ವಲ್ಲಭಾಯಿಪಟೇಲ್ ನಗರ ಮುಡಾ ಅನುಮೋದಿತ ಲೇಔಟ್ 20*40 ಅಡಿ, ಪೂರ್ವ ದಿಕ್ಕು, 3 ಬಿಹೆಚ್‌ಕೆ, ಬೋರ್‌ವೆಲ್ ಮತ್ತು ಪಿಲ್ಲರ್ ಹೊಂದಿದೆ, 100% ವಾಸ್ತು, ಉತ್ತಮ ಗುಣಮಟ್ಟದ ಹೊಸ ಮನೆ
Call: 9380284276

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 8861401315

ಸೈಟ್ ಬೇಕಾಗಿದೆ
ಶ್ರೀ ಸಪ್ತಮಾತೃಕ ಲೇಔಟ್
ಶ್ರೀಷಾ ಹಿಲ್ ವ್ಯೂ ಲೇಔಟ್
KBL ಗ್ರೀನ್ ವುಡ್
JSS ಲೇಔಟ್
BVL ಪ್ರಿಮಿಯೋ
ಮಾಲೀಕರು ಸಂಪರ್ಕಿಸಿ:
9663118699

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

SK CONSTRUCTION
ಹೊಸ ಮನೆ ಕಟ್ಟಬೇಕೆ ಚಿಂತೇ ಬೇಡ ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ Engineer Plan, 3D Elevation ಸಹಿತ ನಾವೇ ಲೋನ್ ಮಾಡಿ ನಿಮ್ಮ ಕನಸಿನ ಮನೆ ಕಟ್ಟಿ ಕೊಡುತ್ತೇವೆ.
9620528490

ತಕ್ಷಣ ಬೇಕಾಗಿದ್ದಾರೆ
1) ಸೆಕ್ಯೂರಿಟಿ ಸೂಪರ್‌ವೈಸರ್ PUC/ Degree
2) ಸೆಕ್ಯೂರಿಟಿ ಗಾರ್ಡ್ಸ್ - SSLC
3) ಅಪಾರ್ಟ್‌ಮೆಂಟ್ ಮ್ಯಾನೇಜರ್
Any Degree ESI, PF & Weekly Off
9739166772
9880419847

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
6361056646, 7676844160

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI / PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ + ಓಟಿ, 15200 – 86,000.
6364308851, 7892046990

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೂರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ., ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರೆ ನಾಲ್ವರ ದೈವ ಚೌಡಿನ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಃಸಿದ್ಧ. ಖಾಯಂ ವಿಳಾಸ: ಸುಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಹೊಸ ಮನೆ ಮಾರಾಟಕ್ಕಿದೆ
30x40 ಡ್ಯೂಪ್ಲೆಕ್ಸ್
3 Bed Room
ಇಟಾಲಿಯನ್ ಆಲ್ ಟೀಕ್ + ಗ್ರಾನೈಟ್ ವಸ್ತು ಪ್ರಕಾರವಾಗಿದ್ದು
9945042875

ಬೇಕಾಗಿದ್ದಾರೆ
ಶಾಲಾ ಬಸ್ ಚಾಲಕರು 2 ವರ್ಷ ಅನುಭವದ ಜೊತೆಗೆ ಹೆವಿ ಡಿ.ಎಲ್ ಹೊಂದಿರಬೇಕು
0821-2402929
9481123959

ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗ ದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು-1

Sudarshan Saur SOLAR WATER HEATER

ATTRACTIVE OFFER
ಸೇಲ್ಸ್ & ಸರ್ವೀಸ್
10 years Guarantee
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

ವಿವಾಹ ಭಾಗ್ಯ
MRJ ಮ್ಯಾಟ್ರಿಮೋನಿ
ಎಲ್ಲಾ ಜಾತಿಯ ವಧು / ವರರಿಗಾಗಿ ಸಂಪರ್ಕಿಸಿ:
1) ಮೊದಲನೆ ಮದುವೆ
2) ಎರಡನೆ ಮದುವೆ
3) ವಿಧವೆ / ವಿದುರರು
FREE REGISTRATION
8904890413

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡಿ ಪ್ರತಿ ತಿಂಗಳಿಗೆ ರೂ. 15,000 ಸಂಪಾದಿಸಿ.
Mob: 9731891409

Sites for Sale
'Balaji Siri'
30X40, 30X50
Premium plots at T. Narasipura Main Road, attached to National Highway
Ready for Registration
Call : 8123647464

ತಕ್ಷಣ ಬೇಕಾಗಿದ್ದಾರೆ
ಕಂಪ್ಯೂಟರ್ ತಿಳಿದಿರುವ ವಿವಾಹಿತ ಮಹಿಳೆ ವಯಸ್ಸು 25 ರಿಂದ 35
ಕೆಲಸದ ಸ್ಥಳ: ಸರಸ್ವತಿಪುರಂ/ ವಿದ್ಯಾರಣ್ಯಪುರಂ, ಮೈಸೂರು
9663199511

WANTED
1) Accounts Asst.
2) Office Boy
3) Helpers (Male)
(To work N.Gud Factory)
7259016509/5/4

ಮನೆ ಬಾಡಿಗೆಗೆ / ಭೋಗ್ಯಕ್ಕೆ ಇದೆ
ಶ್ರೀರಾಂಪುರ ರಿಂಗ್ ರಸ್ತೆ ಹತ್ತಿರ (ಯುನಿವರ್ಸಿಟಿ ಎದುರು) ಗಾಯತ್ರಿ ಬಡಾವಣೆಯಲ್ಲಿ 2 BHK, 1st Floor and 1 BHK 2nd Floor ಬಾಡಿಗೆಗೆ, ಭೋಗ್ಯಕ್ಕೆ ಇದೆ.
ಸಂಪರ್ಕಿಸಿ:
9108946647, 9448092818

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಪ್ರಖ್ಯಾತ ಕಂಪನಿಗಳಲ್ಲಿ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು. Helpers, Maintenance Electronics Company ಗೆ ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC, PUC, ITI, Diploma, Degree ಬೇಕಾಗಿದ್ದಾರೆ. ವೇತನ 18,000 ESI & PF Canteen minus total 14,000 ಇರುತ್ತದೆ. ವಯೋಮಿತಿ: 18 ರಿಂದ 45 ವರ್ಷ.
7411902030, 9916739611

LASSI SHOP FOR SALE
Franchise (ಫ್ರಾಂಚೈಸ್)
City Centre. Contact:
9008103572, 8310972636

ಕಳೆದಿದೆ
ಕೆ.ಎ. ನಾಗೇಂದ್ರ ರವರ ಸ್ವತ್ತು ನಂ. 905/67, 4ನೇ ಮೇನ್, 4ನೇ ಕ್ರಾಸ್, ಮೈಸೂರು ಇದಕ್ಕೆ ಸಂಬಂಧಪಟ್ಟ ಮನೆ ದಾಖಲಾತಿಗಳು ಕಳೆದುಹೋಗಿದೆ. ಸಿಕ್ಕಿದವರು ಸಂಪರ್ಕಿಸಿ:
Mob: 9916946467

ಹಾಸ್ಟೆಲ್‌ನಲ್ಲಿ ಕೆಲಸ ಮಾಡಲು
ಅಡುಗೆ ಭಟ್ಟರು ಬೇಕಾಗಿದ್ದಾರೆ
ಭಟ್ಟರು: 18000–22000
ಸಹಾಯಕರು: 12000–15000
ಪಾಂಡವಪುರ, ಮಂಡ್ಯ
7338138083

ಬೇಕಾಗಿದ್ದಾರೆ
ಸಪ್ಲೈಯರ್, ಕೌಂಟರ್ ಮತ್ತು ಕ್ಯಾಪ್ಟನ್ ಕೆಲಸಗಳಿಗೆ ಬೇಕಾಗಿದ್ದಾರೆ. ಆಸಕ್ತರು ನೇರವಾಗಿ ಆಧಾರ್ ಪ್ರತಿಯೊಡನೆ ಸಂಪರ್ಕಿಸಿ:
ಗೋಪಾಲಕೃಷ್ಣ / ಜಗದೀಶ್
ಹೋಟೆಲ್ ವಿಷ್ಣು ಭವನ್
ಭೀಮಾ ಜ್ಯುವೆಲ್ ಕೆಳಗೆ ಬಿ.ಎನ್. ರಸ್ತೆ ಬಸ್ ಸಿಲ್ದಾಣದ ಎದುರು, ಮೈಸೂರು

Commercial Space For RENT
G- Floor - 2800 Sqft
1- Floor - 3000 Sqft
Apollo Hospital Main Road, Near RMP Quarters, Mysore
7349672310

ವಧು–ವರರ ಅನ್ವೇಷಣೆ
ನಮ್ಮಲ್ಲಿ ಎಲ್ಲಾ ಜಾತಿಯ ವಧು–ವರರು, ವಿಚ್ಛೇದಿತರು ವಿಧುರರು–ವಿಧವೆಯರು ಸಂಪರ್ಕಿಸಿ:
8105747339

neem BOND PLATINUM
PLYWOOD DOORS
10 YEARS WARRANTY
@ FACTORY DEPOT RATES
9731591267, 9901291267

2.5 BHK HOME INTERIORS @
Starting @ ₹2.5 Lacs*
Home Space Mart
TALK TO OUR DESIGN TEAM
9108923123

Houses & Office Space for Rent
@ Saraswathipuram, Kuvempunagar & surroundings
S.S. Property Services
(Opp. Kuvempu School)
S.S. Puram, Mysore
Mob: 9342125252

House for Sale
Srirampura
40x50
Owner meeting
Call: Ravi Ramesh
Mob: 98861 83629

ಕಳೆದಿದೆ
ಜಗದೀಶ್ ಮನೆ ನಂ. 12, ರೆವಿನ್ಯೂ ಬಡಾವಣೆ ಹೆಬ್ಬಾಳ್ 3ನೇ ಹಂತ, ಮೈಸೂರು ಇವರಿಗೆ ಸೇರಿದ ಸ್ವತ್ತು EWS 402 ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿ ಮೈಸೂರು "ಆಶಾಮಂದಿರದ ಸಾಮೂಹಿಕ ವಸತಿ ಯೋಜನೆ" ಹುಡ್ಕೋ ಮನೆಯ ಮೂಲ ಮಂಜೂರಾತಿ ಪತ್ರ ದಿನಾಂಕ 21–5–2024ರಂದು ಕಳೆದಿದ್ದು, ಸಿಕ್ಕದವರು ಸಂಪರ್ಕಿಸಿ:
9448979097

ಇಂದೇ ಸಂಪರ್ಕಿಸಿ
ಮೈಸೂರಿನ ಪ್ರತಿಷ್ಠಿತ ಕಂಪನಿಗೆ ಶೂರೂಂಗಳಿಗೆ ಮತ್ತು ಆಫೀಸ್‌ಗಳಿಗೆ ಕೆಲಸ ಮಾಡಲು ಯುವಕ/ ಯುವತಿಯರು ಬೇಕಾಗಿದ್ದಾರೆ.
Any Qualification 7th, 10th, PUC, ITI, Any Degree Pass / Fail
ಆದವರಿಗೆ ಅರ್ಹತೆಯ ತಕ್ಕಂತೆ ಕೆಲಸ ಸಂಬಳ 15000/- 45000/- (ESI+PF+OT)
9164052361
9740468212

MUDA Sites for Sale
Rs. 1999/- per sq.ft.
Near Brahmins Layout & KHB House.
Mob: 7337661112

ಭೋಗ್ಯ ಅಥವಾ ಬಾಡಿಗೆಗೆ ಮನೆ ಇದೆ
ವಿಜಯನಗರ 4ನೇ ಹಂತದಲ್ಲಿ 2 ಬೆಡ್ ರೂಂ ಹೊಂದಿರುವ 30x40, 2ನೇ ಮಹಡಿ ಮನೆ ಬಾಡಿಗೆ ಅಥವಾ ಭೋಗ್ಯಕ್ಕೆ ಇದೆ. ಸಂಪರ್ಕಿಸಿ:
9206380489 / 7899790448

ಬಾಡಿಗೆಗೆ ಅಥವಾ ಮಾರಾಟಕ್ಕೆ
8x38 ಅಡಿ ಪೂರ್ವದಿಕ್ಕು ಸಣ್ಣ ಮನೆ ಕಲ್ನಾರ್ ಶೀಟ್ 4ನೇ ಕ್ರಾಸ್ ಗಲ್ಲಿಯಲ್ಲಿ ಕೃಷ್ಣಮೂರ್ತಿಪುರಂ (ಹುಡುಗಿಯರಿಗೆ ಅಥವಾ ಸಣ್ಣ ಸಂಸಾರಕ್ಕೆ ಯೋಗ್ಯ).
Mob: 7975447262

ಸುವರ್ಣಾವಕಾಶ
ನಿವೃತ್ತಿ, ಸ್ವಯಂನಿವೃತ್ತಿ, ಗೃಹಿಣಿಯರಿಗೆ ಸ್ವಯಂ ಉದ್ಯಮದಾರರಿಗೆ, ಪ್ರಖ್ಯಾತ ಬ್ಯಾಂಕ್ ಸಮೂಹದಿಂದ Part time - Full time ಕೆಲಸಕ್ಕೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. Fixed salary / PF - ESI. Age: Above 30 years.
9008799156 / 8861611395

ಬೇಕಾಗಿದ್ದಾರೆ
ವಯಸ್ಸಾದ ವೃದ್ಧರು ಮತ್ತು ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲಿ ಉಳಿದುಕೊಳ್ಳುವಂತಹ ಸೇವಾ ಮನೋಭಾವವುಳ್ಳ ಯುವಕ / ಯುವತಿಯರು, ವಿಧವೆ / ವಿಚ್ಛೇದಿತರು ಹೋಂ ಕೇರ್ ಕೆಲಸಕ್ಕೆ ಬೇಕಾಗಿದ್ದಾರೆ. ಯಾವುದೇ ರೀತಿಯ ಶುಲ್ಕ ಇರುವುದಿಲ್ಲ. ಉಚಿತ ಊಟ, ವಸತಿಯೊಂದಿಗೆ. ಸಂಬಳ: 10,000 ರಿಂದ 15,000. ಕೂಡಲೇ ಸಂಪರ್ಕಿಸಿ:
9035324777 / 7259306665

ಕಳೆದಿದೆ
ಎಂ.ರವಿಕುಮಾರ್ ಇವರಿಗೆ ಸೇರಿದ ಸ್ವತ್ತು ಮನೆ ನಂಬರ್ 271 ರೈಲ್ವೆ ಬಡಾವಣೆ ಗೊರೂರು ಮನೆ ಕಂದಾಯ ಪತ್ರ ಕಳೆದು ಹೋಗಿರುತ್ತದೆ. ಸಿಕ್ಕಿದಲ್ಲಿ ಸಂಪರ್ಕಿಸಿ
9141060200

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಸೂಪರ್ ವೈಸರ್ 15000
ಸೆಕ್ಯೂರಿಟಿ ಗಾರ್ಡ್ 14000
ESI & PF ಸೌಲಭ್ಯವಿರುತ್ತದೆ
ಕೂರ್ಗಳ್ಳಿ ಕೈಗಾರಿಕ ಪ್ರದೇಶದಲ್ಲಿ ಮತ್ತು ಹೌಸ್ ಕೀಪಿಂಗ್ ಕೆಲಸಕ್ಕೆ ಮಹಿಳೆಯರು ಪುರುಷರು, ಹುಡುಗರು
9035367083

ಉಚಿತ
ಎಲ್ಲ ವರ್ಗದ 6 ರಿಂದ 11 ವರ್ಷದ ನಿರ್ಗತಿಕ ಗಂಡು ಮಕ್ಕಳಿಗೆ ವಸತಿ ಗೃಹಕ್ಕೆ ಪ್ರವೇಶ.
Mob: 9844175936
ಚಾಮುಂಡಿ ಮಕ್ಕಳ ಮನೆ
ಬೃಂದಾವನ ಬಡಾವಣೆ, ಮೈಸೂರು.

ಹೊಸ ಮನೆ ಮಾರಾಟಕ್ಕಿದೆ
20x30 N/F.
ಗುರುರೂ 4ನೇ ಹಂತ, ಶ್ರೀನಗರ 'D' ಬ್ಲಾಕ್ ಹತ್ತಿರ.
ರೂ. 37 ಲಕ್ಷ.
Mob: 9379056972

ಶಿರಡಿ ಪ್ರವಾಸ 4 ದಿನಗಳು
13–6–24 ಕೊಲ್ಲಾಪುರ, ಪಂಡರಾಪುರ, ಶನಿಸಿಂಗನಾಪುರ, ಎಲ್ಲೋರ, ನಾಸಿಕ್, 3 ಜ್ಯೋತಿರ್ಲಿಂಗ ಸಮೇತ.
MYTHRI TRAVELS
Mob: 6360422209

ಮನೆ ಮಾರಾಟಕ್ಕಿದೆ
923 Sq.ft., G/F
ವಸಂತನಗರ, ಅತಿಥಿ ಎನ್‌ಕ್ಲೇವ್
98 ಲಕ್ಷಗಳು, ನೆಗೋಷಿಯಬಲ್
Mob: 9342125063

WANTED
Montessori Teachers
Good salary.
9739606258
9739548823

ನೈಪುಣ್ಯ ಸ್ಕೂಲ್ ಆಫ್ ಎಕ್ಸ್‌ಲೆನ್ಸ್
ದಟ್ಟಗಳ್ಳಿ, ಮೈಸೂರು
ಬೇಕಾಗಿದ್ದಾರೆ
1. ಮಹಿಳಾ ಆಯಾ/ಅಟೆಂಡರ್ಸ್
9100851597
2. ಡ್ರೈವರ್ಸ್
ನಜರಬಾದ್, ಜೆಪಿನಗರ, ವಿದ್ಯಾರಣ್ಯಪುರಂ, ಚಾಮುಂಡಿಪುರಂ, ಅಗ್ರಹಾರ ವ್ಯಾಪ್ತಿಯ ಚಾಲಕರಿಗೆ ಆದ್ಯತೆ
8431315761

ಮನೆ ಮಾರಾಟಕ್ಕಿದೆ
ಮನೆ ನಂ. 8, 6ನೇ ಮೇನ್, 4ನೇ ಕ್ರಾಸ್ ಗಣಪತಿ ದೇವಸ್ಥಾನದ ಹಿಂಭಾಗ, ರಾಮಕೃಷ್ಣ ನಗರ, ಕೆ.ಬ್ಲಾಕ್, ಮೈಸೂರು
(ನಿವೇಶನ ಅಳತೆ: 20x40)
ಸಂಪರ್ಕಿಸಿ: ದಿಲೀಪ್‌ಕುಮಾರ್
9739470821
7892820093

FOR RENT
Semi furnished room at Lakshmipuram, suitable for officials, doctors, medical students, nurse, para medical staff.
Mob: 9448710689

TEACHERS REQUIRED
1) NST / Montessori Trained
2) PUC D.Ed.
3) B.A., B.Ed. (English, Social and Hindi)
4) B.Sc., B.Ed. (PSM & CBZ)
Contact: 9972166786
(Timings: 10 am to 1 pm)

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಮೈಸೂರು ಮಿತ್ರ

ಹೊಸ ಹೊಸ ತಂತ್ರಜ್ಞಾನದಿಂದ ಭಾರತ ಪ್ರಗತಿ ಸಾಧಿಸುತ್ತಿದೆ

● ಇಸ್ರೋ ವಿಶ್ರಾಂತ ಅಧ್ಯಕ್ಷರೂ ಆದ ಬಾಹ್ಯಾಕಾಶ ಆಯೋಗದ ಸದಸ್ಯ ಎ.ಎಸ್.ಕಿರಣ್ ಕುಮಾರ್ ಅಭಿಮತ

● ಜೆಎಸ್‌ಎಸ್ ಕಲಾ, ವಾಣಿಜ್ಯ, ವಿಜ್ಞಾನ ಕಾಲೇಜಲ್ಲಿ ಪದವೀಧರರ ದಿನಾಚರಣೆಯಲ್ಲಿ ವಿದ್ಯಾರ್ಥಿಗಳಿಗೆ ಮನವರಿಕೆ



ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ 16ನೇ ಪದವೀಧರರ ದಿನಾಚರಣೆ ನಡೆಯಿತು. ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಇಸ್ರೋ ವಿಶ್ರಾಂತ ಅಧ್ಯಕ್ಷರೂ ಆದ ಬಾಹ್ಯಾಕಾಶ ಆಯೋಗದ ಸದಸ್ಯ ಎ.ಎಸ್.ಕಿರಣ್ ಕುಮಾರ್ ಮತ್ತಿತರರಿದ್ದರು.

ಮೈಸೂರು, ಮೇ 22(ಎಂಕೆ)– ವಿಜ್ಞಾನ–ತಂತ್ರಜ್ಞಾನಗಳ ಸದ್ಬಳಕೆಯಿಂದ ಅನಕ್ಷರಸ್ಥರೂ ಉತ್ತಮ ಜೀವನ ಕಂಡುಕೊಳ್ಳಬಹುದಾದ ಕಾಲಘಟ್ಟದಲ್ಲಿ ಉನ್ನತ ವಿದ್ಯಾಭ್ಯಾಸ ಮಾಡಿದವರು ಸಮಾಜದ ಏಳ್ಗೆಗೆ ಉಪಯುಕ್ತವಾದ ಕೆಲಸ ಮಾಡುವಂತೆ ಇಸ್ರೋ ವಿಶ್ರಾಂತ ಅಧ್ಯಕ್ಷರೂ ಆದ ಭಾರತ ಸರ್ಕಾರ ಬಾಹ್ಯಾಕಾಶ ಆಯೋಗದ ಸದಸ್ಯ ಎ.ಎಸ್.ಕಿರಣ್ ಕುಮಾರ್ ಪದವಿ ಹಾಗೂ ಸ್ನಾತಕೋತ್ತರ ಪದವಿ ಪಡೆದ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಬುಧವಾರ ನಡೆದ 16ನೇ ಪದವೀಧರರ ದಿನಾಚರಣೆಯಲ್ಲಿ ಪದವೀಧರರನ್ನುದ್ದೇಶಿಸಿ ಮಾತನಾಡಿದ ಅವರು, ಭಾರತ ದೇಶ ವಿಜ್ಞಾನ–ತಂತ್ರಜ್ಞಾನ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿಯೂ ಬಹಳ ವೇಗವಾಗಿ ಬೆಳೆಯುತ್ತಿದೆ. ಕಳೆದ ವರ್ಷದ ಆಗಸ್ಟ್ ತಿಂಗಳಿನಲ್ಲಿ ಚಂದ್ರನ ಮೇಲೆ ವಿಕ್ರಾಂತ್ ಲ್ಯಾಂಡರ್ ಹಾಗೂ ಪ್ರಗ್ಯಾನ್ ರೋವರ್ ಅನ್ನು ಇಳಿಸಿದಾಗ ಇಡೀ ಪ್ರಪಂಚವೇ ಭಾರತ ದೇಶದ ಕಡೆ ನೋಡುವಂತಾಯಿತು. ಕೊರೊನಾ ಸಂದರ್ಭದಲ್ಲಿಯೂ ವಿಜ್ಞಾನ–ತಂತ್ರಜ್ಞಾನ ಬಳಕೆಯಿಂದ ವ್ಯಾಕ್ಸಿನ್ ತಯಾರಿಕೆಗೆ ಹಾಗೂ ಡಿಜಿಟಲೀಕರಣದ ಮೂಲಕ ಎಲ್ಲರ ಬದುಕು ಸುಲಭವಾಗುತ್ತಿದ್ದು, ಭಾರತ ದೇಶ ಹೊಸ ಹೊಸ ತಂತ್ರಜ್ಞಾನವನ್ನು ಬಳಸಿಕೊಂಡು ಮುಂದೆ ಸಾಗುತ್ತಿದೆ ಎಂಬುದು ಸ್ಪಷ್ಟವಾಗುತ್ತಿದೆ ಎಂದರು. 2047ಕ್ಕೆ ಭಾರತ ದೇಶ ಸ್ವಾತಂತ್ರ್ಯ ಪಡೆದು 100 ವರ್ಷಗಳಾಗಲಿದ್ದು, ಇದರ ಸ್ಮರಣಾರ್ಥ ವಿಕಸಿತ ಭಾರತವಾಗಬೇಕಿದೆ. ಇದಕ್ಕಾಗಿ ವಿಜ್ಞಾನ–ತಂತ್ರಜ್ಞಾನವೆಂಬ ಟೂಲ್‌ಗಳನ್ನು ಬಳಸಿಕೊಂಡು ದೇಶದ ಹಾಗೂ ಸಮಾಜದ ಏಳ್ಗೆಗೆ ನಿಮ್ಮೆಲ್ಲರ ಸಾಮರ್ಥ್ಯವನ್ನು ವಿನಿಯೋಗಿಸಬೇಕಿದೆ. ಕೇವಲ ನಿಮ್ಮ ಜೀವನ ಮಾತ್ರವಲ್ಲದೆ ಎಲ್ಲರ ಹಾಗೂ ಎಲ್ಲವನ್ನು ಬದಲು ಮಾಡುವ ಸಾಮರ್ಥ್ಯ ನಿಮ್ಮಲ್ಲಿದೆ. ಪ್ರಪಂಚದಲ್ಲಿ ಇದುವರೆಗೆ ಕಂಡುಹಿಡಿದಿರುವ ಪ್ರಕೃತಿಯಲ್ಲಿ ಇರುವುದೇನೆ ಹೊರತು ಪ್ರಕೃತಿಯಲ್ಲಿ ಇಲ್ಲದಿರುವುದನ್ನು ಕಂಡುಹಿಡಿಯಲು ಸಾಧ್ಯವಾಗಿಲ್ಲ. ಪ್ರಕೃತಿಯಲ್ಲಿ ನಡೆಯುತ್ತಿರುವ ಪ್ರಕ್ರಿಯೆಗಳನ್ನೇ ಕಾರ್ಯರೂಪಕ್ಕೆ ತರಲಾಗುತ್ತಿದೆ ಎಂದು ವಿಶ್ವಾಸ ತುಂಬಿದರು.

ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ, ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ.ಸಾಂಬಶಿವಯ್ಯ, ಪರೀಕ್ಷಾ ನಿಯಂತ್ರಣಾಧಿಕಾರಿ ಡಾ.ಬಿ.ಪ್ರಭುಸ್ವಾಮಿ, ಪ್ರಾಂಶುಪಾಲ ಡಾ.ಎಂ.ಪ್ರಭು, ಡಾ.ಎನ್.ರಾಜೇಂದ್ರಪ್ರಸಾದ್ ಮತ್ತಿತರರಿದ್ದರು.

1119 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ...

ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ 571 ಪದವಿ(ಯುಜಿ) ಹಾಗೂ 548 ಸ್ನಾತಕೋತ್ತರ(ಪಿಜಿ) ಸೇರಿ 1119 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಬಿಎ 42, ಬಿಎಸ್‌ಸಿ 245, ಬಿಸಿಎ 51, ಬಿಕಾಂ 150, ಬಿಬಿಎ 38, ವೃತ್ತಿ ಪದವಿ(ಆಹಾರ ಮತ್ತು ಇಂಜಿನಿಯರಿಂಗ್) 30, ವೃತ್ತಿ ಪದವಿ(ತಂತ್ರಜ್ಞಾನ ಅಭಿವೃದ್ಧಿ) 7, ವೃತ್ತಿ ಪದವಿ(ಅನಿಮೇಷನ್) 8 ವಿದ್ಯಾರ್ಥಿಗಳು ಪದವಿ ಪಡೆದರೆ, ಎಂಎ ಕನ್ನಡ 10, ಎಂಎ ಇಂಗ್ಲಿಷ್ 17, ಎಂಎಸ್‌ಸಿ(ಭೌತಶಾಸ್ತ್ರ) 60, ಎಂಎಸ್‌ಸಿ(ಕೆಮಿಸ್ಟ್ರಿ) 53, ಎಂಎಸ್‌ಸಿ(ಗಣಿತಶಾಸ್ತ್ರ) 33, ಎಂಎಸ್‌ಸಿ(ಬಯೋ ಟೆಕ್ನಾಲಜಿ) 48, ಎಂಎಸ್‌ಸಿ(ಕಂಪ್ಯೂಟರ್ ಸೈನ್ಸ್) 46, ಎಂಎಸ್‌ಡಬ್ಲ್ಯು 13, ಎಂಕಾಂ 33, ಎಂಎಸ್‌ಸಿ(ಬಯೋಕೆಮಿಸ್ಟ್ರಿ) 51, ಎಂಎಸ್‌ಸಿ ಸಸ್ಯಶಾಸ್ತ್ರ 36, ಎಂಎಸ್‌ಸಿ ಪ್ರಾಣಿಶಾಸ್ತ್ರ 40, ಎಂಸಿಎ 57, ವೃತ್ತಿ ಸ್ನಾತಕೋತ್ತರ ಪದವಿ(ಆಹಾರ ಮತ್ತು ಇಂಜಿನಿಯರಿಂಗ್) 46 ಹಾಗೂ ವೃತ್ತಿ ಸ್ನಾತಕೋತ್ತರ ಪದವಿ(ತಂತ್ರಜ್ಞಾನ ಅಭಿವದ್ಧಿ) 5 ಮಂದಿ ವಿದ್ಯಾರ್ಥಿಗಳು ಸ್ನಾತಕೋತ್ತರ ಪದವಿ ಪಡೆದರು.

ಡಿವೈಎಸ್‌ಪಿ ಖಾತೆಗೂ ಕನ್ನ; 15 ಲಕ್ಷಕ್ಕೂ ಅಧಿಕ ಹಣ ಲೂಟಿ ಮಾಡಿದ ಖದೀಮರು

ಮಡಿಕೇರಿ, ಮೇ 22–ಆನ್‌ಲೈನ್ ಖದೀಮರ ಹಾವಳಿ ದಿನೇ ದಿನೆ ಹೆಚ್ಚಾಗುತ್ತಿದ್ದು, ಇದೀಗ ಪೊಲೀಸ್ ಅಧಿಕಾರಿಯ ಬ್ಯಾಂಕ್ ಖಾತೆಗೂ ಕನ್ನ ಹಾಕಿದ್ದಾರೆ.

ಆನ್‌ಲೈನ್ ಖದೀಮರು, ಡಿವೈಎಸ್‌ಪಿ ವೊಬ್ಬರ ಬ್ಯಾಂಕ್‌ನ ಎರಡು ಖಾತೆಗಳಿಗೆ ಕನ್ನ ಹಾಕಿ ಒಟ್ಟು 15,98,761 ರೂ.ಗಳನ್ನು ವರ್ಗಾವಣೆ ಮಾಡಿಕೊಂಡು ವಂಚಿಸಿರುವುದು ಜಿಲ್ಲೆಯಲ್ಲಿ ವರದಿಯಾಗಿದೆ.

ಹಾಸನ ಉಪವಿಭಾಗದ ಡಿವೈಎಸ್‌ಪಿ ಪಿ.ಕೆ. ಮುರಳೀಧರ್, ಲಕ್ಷಾಂತರ ರೂ. ಕಳೆದುಕೊಂಡು, ಈಗ ಹಾಸನದ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ. ಪಿ.ಕೆ.ಮುರಳೀಧರ್, ಮಡಿಕೇರಿ ಮತ್ತು ಭಾಗಮಂಡಲದ ಕೆನರಾ ಬ್ಯಾಂಕ್ ಶಾಖೆಯಲ್ಲಿ ಖಾತೆಗಳನ್ನು ಹೊಂದಿದ್ದಾರೆ. ಮೇ 20ರಂದು ಮಧ್ಯಾಹ್ನ 1.30ರಲ್ಲಿ ಇವರ ಫೋನ್‌ಗೆ ಮೆಸೇಜ್ ಬಂದಿವೆ. ಅದನ್ನು ನೋಡಿ ಗಾಬರಿಗೊಂಡಿದ್ದಾರೆ. ಅವರ ಎರಡೂ ಖಾತೆಗಳಿಂದ ವಂಚಕರು ಬೇರೆ ಬೇರೆ ಖಾತೆಗಳಿಗೆ ಹಣ ವರ್ಗಾವಣೆ ಮಾಡಿಕೊಂಡಿದ್ದಾರೆ. ಕೆನರಾ ಬ್ಯಾಂಕ್‌ನ ಮಡಿಕೇರಿ ಮುಖ್ಯ ಶಾಖೆಯಿಂದ ಬೆಳಗ್ಗೆ 10.29 ರಿಂದ ಮಧ್ಯಾಹ್ನ 1.30 ಗಂಟೆವರೆಗೆ 25 ಬಾರಿ ಒಟ್ಟು 12,12,711 ರೂ.ಗಳಿಗೆ ಕನ್ನ ಹಾಕಲಾಗಿದೆ. ಭಾಗಮಂಡಲ ಕೆನರಾ ಬ್ಯಾಂಕ್ ಶಾಖೆಯಿಂದಲೂ ಬೆಳಗ್ಗೆ 10.28 ರಿಂದ ಮಧ್ಯಾಹ್ನ 12.56ರವರೆಗೆ ಒಟ್ಟು 10 ಬಾರಿ ಒಟ್ಟು 3,88,050 ರೂ. ದೋಚಲಾಗಿದೆ.

ಕೆನರಾ ಬ್ಯಾಂಕ್‌ನ ಈ ಎರಡು ಖಾತೆಗಳಿಂದ ಒಟ್ಟು 15,98,761 ರೂ.ಗಳನ್ನು ವಂಚಕರು ಬೇರೆ ಬೇರೆ ಬ್ಯಾಂಕ್ ಖಾತೆಗಳಿಗೆ ವರ್ಗಾವಣೆ ಮಾಡಿಕೊಂಡಿದ್ದಾರೆ. ಹಾಸನದ ಸೆನ್ ಪೊಲೀಸ್ ಠಾಣೆಗೆ ದೂರು ನೀಡಿರುವ ಡಿವೈಎಸ್‌ಪಿ ಪಿ.ಕೆ.ಮುರಳೀಧರ್ ಆನ್‌ಲೈನ್ ವಂಚಕರನ್ನು ಪತ್ತೆ ಮಾಡಿ ಹಣ ವಾಪಸ್ ಕೊಡಿಸುವಂತೆ ಮನವಿ ಮಾಡಿದ್ದಾರೆ.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 9ರಲ್ಲಿ

ಬೇಕಾಗಿದ್ದಾರೆ
ಮೈಸೂರಿನ ಕಾಳಿದಾಸ ರೋಡ್ – ಜಯಲಕ್ಷ್ಮೀಪುರಂನಲ್ಲಿ ಇರುವ ಶುದ್ಧ ಸಸ್ಯಾಹಾರಿ ರೆಸ್ಟೋರೆಂಟ್ ಗೆ ಅನುಭವವುಳ್ಳ 1) ಅಸಿಸ್ಟೆಂಟ್ ಕುಕ್ Cutting, Grinding, 2) ಕೌಂಟರ್ ಪಾರ್ಸೆಲ್ 3) ಸಪ್ಲೈರ್ ವೇಟರ್ Supplier (4) Indian All rounder ಮಾಡುವ ಕೆಲಸಕ್ಕೆ ಬೇಕಾಗಿದ್ದಾರೆ. ಆಕರ್ಷಕ ಸಂಬಳ, ವಸತಿ ಹಾಗೂ ಉತ್ತಮ ಸೌಲಭ್ಯಗಳನ್ನೂ ನೀಡಲಾಗುತ್ತದೆ – ಸಂಪರ್ಕಿಸಿ:
9019916266

ಹೋಂ ನರ್ಸಿಂಗ್ ಮನೆ ಕೆಲಸಕ್ಕೆ ಬೇಕಾಗಿದ್ದಾರೆ
ವಯಸ್ಸಾದವರನ್ನು, ರೋಗಿಗಳನ್ನು ಅವರ ಮನೆಯಲ್ಲೇ ನೋಡಿಕೊಳ್ಳಲು ಪುರುಷರು/ಮಹಿಳೆಯರು ಮೈಸೂರಿನಲ್ಲಿ ಬೇಕಾಗಿದ್ದಾರೆ. ಉತ್ತಮ ಸಂಬಳ ನೀಡಲಾಗುವುದು
9880102700

ತಕ್ಷಣ ಬೇಕಾಗಿದ್ದಾರೆ
ಟಿ.ವಿ.ಎಸ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮತ್ತು ಮೇಲ್ಪಟ್ಟು ಸಂಬಳ : 17500/- 8hrs (26days) ವಯೋಮಿತಿ : 50 ವರ್ಷದ ಒಳಗೆ ESI & PF ಊಟ ತಿಂಡಿ ವಸತಿ ಸೌಲಭ್ಯವಿದೆ.
9620777819
9620667819

ಅನುಬಂಧ ಸೇವಾ ಟ್ರಸ್ಟ್
ವಯಸ್ಸಾದ ಹಾಸಿಗೆ ಹಿಡಿದ ಮತ್ತು ಪಾರ್ಶ್ವವಾಯು ಪೀಡಿತ ವಯೋವೃದ್ಧರನ್ನು ಸುಸಜ್ಜಿತವಾದ ಸಸ್ಯಹಾರಿ ಊಟ, ವಸತಿ ಮತ್ತು ವೈದ್ಯಕೀಯ ಸೌಲಭ್ಯಗಳೊಂದಿಗೆ ಮನೆಯಂತೆಯೇ ನೋಡಿಕೊಳ್ಳಲಾಗುವುದು.
9880793910
8050999438

WANTED URGENT
Impulse ಮೈಸೂರಿನಲ್ಲಿ ಖಾಲಿ ಇರುವ ವಿವಿಧ ವಿಭಾಗಕ್ಕೆ 10th, PUC, Deploma, ITI, BBM ಯಾದ Age (18-24) Earn (10500+ ರಿಂದ 18500+) No Fee ಪರಸ್ಥಳದವರಿಗೆ ಮಾತ್ರ ವಸತಿ, ಖುದ್ದಾಗಿ ನೇರ ಸಂಪರ್ಕಿಸಿ:
9342827788
Walk in (9 am to 5.30 pm)

OFFICE SPACE AVAILABLE
For Rent, Lease, Sale 40x65, 8200 Sqft. 3 Floors, LT Company Bank, Finance Showroom Bazar, Garments 10 mt to NH, 3 Km to City Centre CC Camera, Lift, UPS 23 HP Electricity Office Chamber, Furnished
9886860408
9483454316

ಹೊಸ ಮನೆ ಮಾರಾಟಕ್ಕಿದೆ
20x30 S/E Ground & First Floor ವಿನಾಯಕ ಗಾರ್ಡನ್ ಸಿಟಿ, ಗೋಲ್ಡ್ Opp Tirumala School Alanahalli Signal
8310972636
9886481265

CHANGE OF NAME
I, JYOTTHIKA R residing at 426/427, Ist Floor, 14th Cross, G.Block, Ramakrishna Nagara, Mysore-570023 have changed my name from JYOTHIKA R to JYOTTHIKA R on my own free will sworn in before Notary C.R. Seetharam, Mysuru vide affidavit dated 03-05-2024.
Sd/- JYOTTHIKA R

ಹೋಟೆಲ್ ಕೆಲಸಕ್ಕೆ ಬೇಕಾಗಿದ್ದಾರೆ
1) ಅಡುಗೆ ಭಟ್ಟರು – ಸಂಬಳ–35000/–
2) ದೋಸೆ ಭಟ್ಟರು – ಸಂಬಳ–25000/–
3) ಕಾಫೀ/ಟೀ – ಸಂಬಳ–15000/–
4) ರುಬ್ಬುವವರು ಸಂಬಳ–18000/–
5) ಹೌಸ್ ಕೀಪಿಂಗ್ – ಸಂಬಳ–11000/–
ESI, PF ಸೌಲಭ್ಯವಿದೆ, ಸ್ಟಾಫ್ ರೂಂ ಸೌಲಭ್ಯವಿದೆ.
9900781783

ಬೇಕಾಗಿದ್ದಾರೆ
ಬನ್ನಿಮಂಟಪದಲ್ಲಿರುವ ಲಾಡ್ಜ್‌ಗೆ ರೂಂ ಬಾಯ್ಸ್ ಮತ್ತು ರಿಸೆಪ್ಸನಿಸ್ಟ್ ಬೇಕಾಗಿದ್ದಾರೆ.
9886903321

APPROVED SEMI-COMMERCIAL SITE FOR SALE
32X40, N/W Corner Site Telecom Layout Price 3500/- Sqft Negotiable
7795609173

ಬೇಕಾಗಿದ್ದಾರೆ
ಮಾರ್ಕೆಟಿಂಗ್ ಸೇಲ್ ಎಕ್ಸಿಕ್ಯೂಟೀವ್ Qualification : (Any Degree) (ಹೊಸಬರಿಗೂ ಆದ್ಯತೆ) ಸ್ಟಾರ್ ಬಜಾಜ್ (ಅಧಿಕೃತ ಮಾರಾಟಗಾರರು ಬಜಾಜ್ ಆಟೋ ಲಿಮಿಟೆಡ್) opp. Axis Bank, V V Mohalla, Mysore-570002 ಕೂಡಲೇ ಸಂಪರ್ಕಿಸಿ: 9743647484 Ganesha Temple road Maruthi Circle, N R Mohalla - 570007
8660381094

ಕೆ.ಸಾಲುಂಡಿ ಘಟನೆಗೆ ಶಾಸಕರ ನಿರ್ಲಕ್ಷ್ಯ ಕಾರಣವೆಂಬ ಮುಡಾ ಅಧ್ಯಕ್ಷರ ಆರೋಪ ಸತ್ಯಕ್ಕೆ ದೂರ

● ಎಲ್ಲಾ ಸಮುದಾಯದ ವಿಶ್ವಾಸದೊಂದಿಗೆ ಅಭಿವೃದ್ಧಿಗೆ ಆದ್ಯತೆ ನೀಡಿರುವ ಶಾಸಕರ ವಿರುದ್ಧ ಇಲ್ಲಸಲ್ಲದ ಆರೋಪ ● ಕೆ.ಮರೀಗೌಡರ ವಿರುದ್ಧ ಜೆಡಿಎಸ್ ಮುಖಂಡ ಕೆ.ಶಿವಣ್ಣ ಕಿಡಿನುಡಿ


ಕೆ.ಶಿವಣ್ಣ

ಮೈಸೂರು,ಮೇ 22(ಪಿಎಂ)– ಚಾಮುಂಡೇಶ್ವರಿ ಕ್ಷೇತ್ರದ ಕೆ.ಸಾಲುಂಡಿ ಗ್ರಾಮದಲ್ಲಿ ಕಲುಷಿತ ನೀರು ಸೇವನೆ ಕಾರಣ ಯುವಕನೊಬ್ಬ ಮೃತ ಪಟ್ಟು, ಹಲವರು ಅಸ್ವಸ್ಥಗೊಂಡು ಆಸ್ಪತ್ರೆ ಸೇರಿರುವ ಘಟನೆಗೆ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರ ನಿರ್ಲಕ್ಷ್ಯ ಕಾರಣ ಎಂಬ ಮುಡಾ ಅಧ್ಯಕ್ಷ ಕೆ.ಮರೀಗೌಡರ ಆರೋಪವು ಸತ್ಯಕ್ಕೆ ದೂರವೆಂದು ಬೀರಿಹುಂಡಿ ಗ್ರಾಮ ಪಂಚಾಯಿತಿ ಸದಸ್ಯರೂ ಆದ ಜೆಡಿಎಸ್ ಮುಖಂಡ ಕೆ.ಶಿವಣ್ಣ ಖಂಡಿಸಿದ್ದಾರೆ.

ಜಿ.ಟಿ.ದೇವೇಗೌಡರು ಇಡೀ ಕ್ಷೇತ್ರದ ಅಭಿವೃದ್ಧಿಗೆ ಒತ್ತು ನೀಡಿದ್ದಾರೆ. ಕ್ಷೇತ್ರದ ಯಾವುದೇ ಗ್ರಾಮದ ವಿಚಾರದಲ್ಲಿ ಅವರು ತಾರತಮ್ಯ ನಿಲುವು ಹೊಂದಿಲ್ಲ. ಆದರೆ ಮುಡಾ ಅಧ್ಯಕ್ಷರು ಸುಳ್ಳು ಆರೋಪಗಳನ್ನು ಮಾಡಿದ್ದಾರೆ. ಗ್ರಾಮದಲ್ಲಿ ಹಿಂದುಳಿದ ವರ್ಗದ ಜನರು ವಾಸಿಸುತ್ತಿದ್ದು, ಎಲ್ಲರೂ ಸಿದ್ದರಾಮಯ್ಯನವರ ಬೆಂಬಲಿಗರೆಂಬ ನಿರ್ಲಕ್ಷ್ಯವೇ ಅನಾಹುತಕ್ಕೆ ಕಾರಣವೆಂಬ ಅವರ ಹೇಳಿಕೆಯು ಶುದ್ಧ ಸುಳ್ಳಾಗಿದ್ದು, ಇಂತಹ ಇಲ್ಲಸಲ್ಲದ ಆರೋಪಗಳಿಂದಲೇ ಕ್ಷೇತ್ರದ ಅಭಿವೃದ್ಧಿ ಕುಂಠಿತವಾಗಲಿದೆ. ಅನುದಾನ ಹಂಚಿಕೆ ವಿಚಾರದಲ್ಲಿ ಜಿ.ಟಿ.ದೇವೇಗೌಡರು ಯಾವುದೇ ತಾರತಮ್ಯ ಮಾಡಿಲ್ಲ. ಡಿ.ಸಾಲುಂಡಿಗೆ 75 ಲಕ್ಷ ರೂ. ಅನುದಾನ ಕಲ್ಪಿಸಿದ್ದು, ಕೋಟೆಹುಂಡಿ, ಕೆ. ಸಾಲುಂಡಿ, ದೊಡ್ಡಮಾರೇಗೌಡನಹಳ್ಳಿ, ಬೀರಿಹುಂಡಿ, ಮೂಗನಹುಂಡಿ, ದೊಡ್ಡಹುಂಡಿ, ನುಗ್ಗಹಳ್ಳಿ, ಶೆಟ್ಟಿನಾಯಕನಹಳ್ಳಿ ಹಾಗೂ ಮಾದಹಳ್ಳಿಗೆ ತಲಾ 50 ಲಕ್ಷ ರೂ. ಅನುದಾನ ನೀಡಿದ್ದಾರೆ. ಹೀಗೆ ಕ್ಷೇತ್ರದ ಎಲ್ಲಾ ಗ್ರಾಮಗಳಿಗೆ ಯಾವುದೇ ತಾರತಮ್ಯ ಇಲ್ಲದೇ ಸಮರ್ಪಕವಾಗಿ ಅನುದಾನ ಹಂಚಿಕೆ ಮಾಡಿ, ಎಲ್ಲೆಡೆ ಅಭಿವೃದ್ಧಿ ಕಾಮಗಾರಿಗಳನ್ನು ಅತ್ಯಂತ ನಿಷ್ಠೆಯಿಂದ ಮಾಡಿಸುತ್ತಿದ್ದಾರೆ.

ಯಾವುದೇ ರೀತಿಯಲ್ಲಿ ಜಾತಿ ತಾರತಮ್ಯ ಮಾಡದೇ ಸಮಾನತೆ ತತ್ವದಲ್ಲಿ ನಂಬಿಕೆ ಹೊಂದಿರುವ ಜಿ.ಟಿ. ದೇವೇಗೌಡರು, ಎಲ್ಲಾ ಸಮುದಾಯಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅಭಿವೃದ್ಧಿಗೆ ಆದ್ಯತೆ ನೀಡುತ್ತಿದ್ದಾರೆ. ಆದರೆ ಇದನ್ನು ಸಹಿಸದೇ ಮರೀಗೌಡರು ಇಲ್ಲ ಸಲ್ಲದ ಆರೋಪ ಮಾಡಿದ್ದಾರೆ. ಬೇಕಿದ್ದರೆ ಮರೀಗೌಡರು ಬಹಿರಂಗ ಚರ್ಚೆಗೆ ಬರಲಿ, ಜಿ.ಟಿ.ದೇವೇಗೌಡರು ಅತ್ಯಂತ ನಿಷ್ಠೆಯಿಂದ ಕ್ಷೇತ್ರದ ಅಭಿವೃದ್ಧಿಯಲ್ಲಿ ತೊಡಗಿಸಿಕೊಂಡಿರುವುದು ಹಾಗೂ ಅವರ ಕೊಡುಗೆಗಳು ಏನೆಂದು ತೋರಿಸುತ್ತೇವೆ ಎಂದು ಕಿಡಿಕಾರಿದ್ದಾರೆ.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಂದ ಬಳಿಕ ಕ್ಷೇತ್ರದ ಅಭಿವೃದ್ಧಿಗೆ ಒಂದು ನಯಾಪೈಸೆ ಬಿಡುಗಡೆಯಾಗಿಲ್ಲ. ಸರ್ಕಾರ ಬಂದು ವರ್ಷವಾದರೂ ಅಭಿವೃದ್ಧಿಗೆ ಆದ್ಯತೆ ನೀಡದೇ ವಿಧಾನಸಭಾ ಚುನಾವಣೆ ಪೂರ್ವದಲ್ಲಿ ನೀಡಿದ ಆಶ್ವಾಸನೆಗಳಾದ ಗ್ಯಾರಂಟಿಗಳಿಗೆ ಎಲ್ಲಾ ಹಣವನ್ನು ಬಳಸಿಕೊಳ್ಳಲಾಗುತ್ತಿದೆ.

ಚಾಮುಂಡೇಶ್ವರಿ ಕ್ಷೇತ್ರವು ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ರಾಜಕೀಯವಾಗಿ ಪುನರ್‌ಜನ್ಮ ನೀಡಿದೆ. ಹಾಗಾಗಿ ಈ ಕ್ಷೇತ್ರಕ್ಕೆ ಮುಖ್ಯಮಂತ್ರಿಗಳು ತಮ್ಮ ವಿಶೇಷ ಅನುದಾನದಲ್ಲಿ ಹೆಚ್ಚಿನ ಅನುದಾನ ಬಿಡುಗಡೆ ಮಾಡಬೇಕಿತ್ತು.

ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ಮುಖಂಡ ಕೆ.ಮರೀಗೌಡರು ಇಂತಹ ಇಲ್ಲಸಲ್ಲದ ಆರೋಪಗಳನ್ನು ಬಿಟ್ಟು ಮುಡಾ ವ್ಯಾಪ್ತಿಗೆ ಬರುವ ಗ್ರಾಮಗಳ ಅಭಿವೃದ್ಧಿಯತ್ತ ಗಮನಹರಿಸಲಿ. ಅನುದಾನ ಬಿಡುಗಡೆ ಮಾಡದಿರುವ ಬಗ್ಗೆ ಕ್ಷೇತ್ರದ ಜನರಿಗೆ ಗೊತ್ತಿದೆ. ಇನ್ನಾದರೂ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಚಾಮುಂಡೇಶ್ವರಿ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ಬಿಡುಗಡೆ ಮಾಡಬೇಕೆಂದು ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

ವಾರಣಾಸಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಪರ ಎಸ್.ಎ.ರಾಮದಾಸ್ ಮತ ಯಾಚನೆ; ಹನುಮಾನ್ ಘಾಟ್‌ನಲ್ಲಿರುವ ಕನ್ನಡದ ಶ್ರೇಷ್ಠ ಕವಿ ವಿ.ಸೀತಾರಾಮಯ್ಯರ ಮೊಮ್ಮಕ್ಕಳ ನಿವಾಸಕ್ಕೆ ಭೇಟಿ

ಕರುನಾಡಿನ ಧೀಮಂತ ಕವಿಯ ಸಾಹಿತ್ಯ ಕೃಷಿಯ ಮೆಲುಕು



ಮೈಸೂರು,ಮೇ 22(ಪಿಎಂ)– ವಾರಣಾಸಿ ಲೋಕಸಭಾ ಕ್ಷೇತ್ರದಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ಪರ ಮತ ಯಾಚನೆ ಮಾಡುತ್ತಿರುವ ಮೈಸೂರಿನ ಕೆಆರ್ ಕ್ಷೇತ್ರದ ಮಾಜಿ ಶಾಸಕ ಎಸ್.ಎ.ರಾಮದಾಸ್, ಇಲ್ಲಿನ ಹನುಮಾನ್ ಘಾಟ್‌ನಲ್ಲಿರುವ ಕನ್ನಡದ ಶ್ರೇಷ್ಠ ಕವಿ ವಿ.ಸೀತಾರಾಮಯ್ಯ ಅವರ ಮೊಮ್ಮಕ್ಕಳ ನಿವಾಸಕ್ಕೆ ಸೋಮವಾರ ಭೇಟಿ ನೀಡಿ, ವಿ.ಸೀತಾರಾಮಯ್ಯರ ಸಾಹಿತ್ಯ ಸಾಧನೆ ಬಗ್ಗೆ ಗುಣಗಾನ ಮಾಡಿದರು.

ತಮ್ಮ ನೇತೃತ್ವದ ಬಿಜೆಪಿ ತಂಡದೊಂದಿಗೆ ಭೇಟಿ ನೀಡಿದ ಎಸ್.ಎ.ರಾಮದಾಸ್, ಸೀತಾರಾಮಯ್ಯರ ಮೊಮ್ಮಕ್ಕಳೊಂದಿಗೆ ಕೆಲಹೊತ್ತು ಕಳೆದರು. ಅವರ ಕುಟುಂಬದ ಯೋಗಕ್ಷೇಮ ವಿಚಾರಿಸಿ, ಸೀತಾರಾಮಯ್ಯರ ಸಾಹಿತ್ಯ ಕೃಷಿಯ ಮೈಲಿಗಲ್ಲನ್ನು ಇದೇ ವೇಳೆ ಬಿಜೆಪಿ ತಂಡ ಮೆಲುಕು ಹಾಕಿತು. ಸೀತಾರಾಮಯ್ಯರ ಪುತ್ರಿ ಸುನಂದಾ ಶರ್ಮ ಮತ್ತು ಅಳಿಯ ಮೈಸೂರು ವಿಶ್ವನಾಥ ಶರ್ಮ ಅವರ ಪುತ್ರರಾದ ಪ್ರಸನ್ನ ಕುಮಾರ್ ಶರ್ಮ, ಕೇದಾರನಾಥ ಶರ್ಮ ತಮ್ಮ ನಿವಾಸಕ್ಕೆ ಭೇಟಿ ನೀಡಿದ ಎಸ್.ಎ.ರಾಮದಾಸ್ ನೇತೃತ್ವದ ಬಿಜೆಪಿ ತಂಡವನ್ನು ಆತ್ಮೀಯವಾಗಿ ಬರಮಾಡಿಕೊಂಡರು.

ಅಪರೂಪದ ಕುಟುಂಬ: ಸುಮಾರು 120 ವರ್ಷಗಳಿಂದ ಕಾಶಿಯಲ್ಲಿ ನೆಲೆಸಿ ಸಂಸ್ಕೃತ, ವೇದ ಅಧ್ಯಯನವನ್ನು ಮಕ್ಕಳಿಗೆ ಮಾಡಿಸುವಂತಹ ದೊಡ್ಡ ಕಾರ್ಯದಲ್ಲಿ ಈ ಕುಟುಂಬ ತೊಡಗಿದೆ. ಈ ಕುಟುಂಬದ ನಿವಾಸವು ಕನ್ನಡಿಗರೆಲ್ಲರಿಗೂ ಆಶ್ರಯ ತಾಣವೂ ಆಗಿದೆ. ಇಂದಿಗೂ ವೇದ ಅಧ್ಯಯನಕ್ಕೆ ಹೆಚ್ಚಿನ ಆದ್ಯತೆ ಕೊಡುತ್ತಿರುವ ಅಪರೂಪದ ಕುಟುಂಬ ಇದಾಗಿದೆ ಎಂದು ಎಸ್.ಎ.ರಾಮದಾಸ್ ಸಂತಸ ವ್ಯಕ್ತಪಡಿಸಿದ್ದಾರೆ.

ಸಂತೋಷದ ವಿಷಯವೆಂದರೆ ಕನ್ನಡದ ನಾಮಫಲಕವನ್ನು ಇವರ ಮನೆ ಮುಂದೆ ನೋಡಿದೆವು. ಇವರ ಮನೆ ಪುರಾತನ ಕಟ್ಟಡವಾಗಿದ್ದು, ಮನೆ ಒಳಗಡೆ ಶಿವನ ಲಿಂಗದ ಸ್ಥಾಪನೆ ಮಾಡಿ ಪ್ರತಿನಿತ್ಯವೂ ಪರಮಾತ್ಮನ ಅಭಿಷೇಕ ಮತ್ತು ಪೂಜೆ ಕೈಂಕರ್ಯಗಳನ್ನು ನಡೆಸಲಾಗುತ್ತಿದೆ. ಈ ಕುಟುಂಬದ ಮೂಲಕ ಅವರಿಗೆ ಸಂಪರ್ಕ ಇರುವವರನ್ನು ಮಾತನಾಡಿಸಿ ಮತಯಾಚನೆ ಮಾಡಿದೆವು. ನಂತರ ರಾತ್ರಿ ಪ್ರಸಾದ ವಿತರಣೆ ಮಾಡಲಾಯಿತು ಎಂದು ಅವರು ಹೇಳಿದ್ದಾರೆ.

ಈ ಸಂದರ್ಭದಲ್ಲಿ ಶಾಸಕರಾದ ಮಹೇಶ್ ಟೆಂಗಿನಕಾಯಿ, ಯಶ್‌ಪಾಲ್ ಸುವರ್ಣ, ವಿಧಾನಪರಿಷತ್ ಸದಸ್ಯ ಕೇಶವಪ್ರಸಾದ್, ಮುಖಂಡರಾದ ನವೀನ್, ರಾಜೇಶ್ ಮತ್ತಿತರರು ಹಾಜರಿದ್ದರು ಎಂದು ಎಸ್.ಎ.ರಾಮದಾಸ್ ಅವರ ಕಚೇರಿ ಪ್ರಕಟಣೆ ತಿಳಿಸಿದೆ.

ವಿದ್ಯಾಶ್ರೀ ಹತ್ಯೆ ಆರೋಪಿ ಪತಿ ಬಂಧನ

ಮೈಸೂರು, ಮೇ 22 (ಆರ್‌ಕೆ)– ತುರುಗನೂರಿನಲ್ಲಿ ಸುತ್ತಿಗೆಯಿಂದ ಬಡಿದು ಪತ್ನಿ ಹತ್ಯೆ ಮಾಡಿ ಪರಾರಿಯಾಗಿದ್ದ ನಂದೀಶ ಇಂದು ಸಂಜೆ ಮದ್ದೂರಿನಲ್ಲಿ ಪತ್ತೆಯಾಗಿದ್ದಾನೆ. ಮಂಗಳವಾರ ರಾತ್ರಿ ಬನ್ನೂರು ಬಳಿಯ ತುರುಗನೂರಿನ ತನ್ನ ಮನೆಯಲ್ಲಿ ಕೌಟುಂಬಿಕ ಕಲಹದಿಂದ ಪತ್ನಿ ವಿದ್ಯಾಶ್ರೀಯನ್ನು ಬರ್ಬರವಾಗಿ ಹತ್ಯೆಗೈದು ಪರಾರಿಯಾಗಿದ್ದ ಪತಿ ನಂದೀಶ, ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡಿದ್ದ.

ಪ್ರಕರಣ ದಾಖಲಿಸಿಕೊಂಡಿದ್ದ ಬನ್ನೂರು ಠಾಣೆ ಪೊಲೀಸರು, ಆರೋಪಿ ಪತ್ತೆಗಾಗಿ ಶೋಧ ಕಾರ್ಯಾಚರಣೆ ಮಾಡುತ್ತಿದ್ದರಾದರೂ, ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡಿದ್ದ ಕಾರಣ ಆತನ ಸುಳಿವು ಸಿಕ್ಕಿರಲಿಲ್ಲ.

ಬಾತ್ಮೀದಾರರ ಮಾಹಿತಿ ಆಧರಿಸಿ ಬೆನ್ನತ್ತಿದ ಪೊಲೀಸರಿಗೆ ಇಂದು ಸಂಜೆ ಮದ್ದೂರು ಬಳಿ ನಿರ್ಜನ ಪ್ರದೇಶದಲ್ಲಿ ನಂದೀಶ ಅಡಗಿದ್ದುದು ತಿಳಿಯಿತು. ಸ್ಥಳೀಯ ಪೊಲೀಸರ ಸಹಾಯ ಪಡೆದ ಬನ್ನೂರು ಠಾಣೆ ಪೊಲೀಸರು, ಆತನನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದ್ದಾರೆ.

ನಾಳೆ(ಮೇ 23)ಮಧ್ಯಾಹ್ನ ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಿರುವ ಪೊಲೀಸರು, ಆತನಿಂದ ಅಗತ್ಯ ಮಾಹಿತಿ ಪಡೆದು ಕೃತ್ಯ ನಡೆದ ಸ್ಥಳಕ್ಕೆ ಕರೆದೊಯ್ದು ಮಹಜರು ನಡೆಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕಲೆ, ಸಾಹಿತ್ಯ, ನಾಟಕ, ಸಂಗೀತ ಪ್ರಸಾರಕ್ಕೆ 'ಸ್ಪಷ್ಟ ಸಾಂಸ್ಕೃತಿಕ ನೀತಿ' ಅವಶ್ಯ

● ವಿಚಾರ ಸಂಕಿರಣದಲ್ಲಿ ತಜ್ಞರ ಅಭಿಮತ ● ದೃಶ್ಯ, ಮುದ್ರಣ ಮಾಧ್ಯಮದಲ್ಲಿ ಕಲೆ, ಸಾಹಿತ್ಯ, ನಾಟಕ, ಸಂಗೀತಕ್ಕೆ ಪ್ರಾಮುಖ್ಯತೆ ಕಡಿಮೆ: ಡಾ.ನಿರಂಜನ ವಾನಳ್ಳಿ ● ವೀರಶೈವ ಲಿಂಗಾಯತರು ಬಿಟ್ಟರೆ ಬಸವಣ್ಣ ವಿಶ್ವ ಸಾಂಸ್ಕೃತಿಕ ರಾಯಭಾರಿ ಆಗ್ತಾರೆ; ಕೆ.ವಿ.ನಾಗರಾಜ ಮೂರ್ತಿ



ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿವಿ ಆವರಣದಲ್ಲಿ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿವಿ ಹಾಗೂ ಕರ್ನಾಟಕ ರಾಜ್ಯ ಸಂವಹನ ಮತ್ತು ಪತ್ರಿಕೋದ್ಯಮ ಶಿಕ್ಷಕರ ಸಂಘದ ಸಹಯೋಗದೊಂದಿಗೆ ಆಯೋಜಿಸಿದ್ದ ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣದ ಸಮಾರೋಪದಲ್ಲಿ ನ್ಯಾಕ್ ಮಾಜಿ ನಿರ್ದೇಶಕ ಪ್ರೊ.ಎಸ್.ಸಿ.ಶರ್ಮಾ ಮಾತನಾಡಿದರು.

ಮೈಸೂರು, ಮೇ 23(ಎಸ್‌ಪಿಎನ್)– ಕಲೆ, ಸಾಹಿತ್ಯ, ನಾಟಕ, ಸಂಗೀತ ಮುಖ್ಯವಾಹಿನಿಗೆ ತರಲು ರಾಜ್ಯದಲ್ಲಿ 'ಸ್ಪಷ್ಟ ಸಾಂಸ್ಕೃತಿಕ ನೀತಿ' ರೂಪಿಸಬೇಕು ಎಂದು ಬೆಂಗಳೂರು ಉತ್ತರ ವಿವಿ ಕುಲಪತಿ ಡಾ.ನಿರಂಜನ ವಾನಳ್ಳಿ, ಕರ್ನಾಟಕ ನಾಟಕ ಅಕಾಡೆಮಿ ಛೇರ್ಮನ್ ಕೆ.ವಿ.ನಾಗರಾಜ ಮೂರ್ತಿ, ನ್ಯಾಕ್ ಮಾಜಿ ನಿರ್ದೇಶಕ ಪ್ರೊ.ಎಸ್.ಸಿ. ಶರ್ಮಾ, ರಂಗಾಯಣ ಮಾಜಿ ನಿರ್ದೇಶಕ ರಾಜಾರಾಂ ಅಭಿಪ್ರಾಯಪಟ್ಟರು.

ಮೈಸೂರು ಜೆಎಲ್‌ಬಿ ರಸ್ತೆಯಲ್ಲಿರುವ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿವಿ ಆವರಣದಲ್ಲಿ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿವಿ ಹಾಗೂ ಕರ್ನಾಟಕ ರಾಜ್ಯ ಸಂವಹನ ಮತ್ತು ಪತ್ರಿಕೋದ್ಯಮ ಶಿಕ್ಷಕರ ಸಂಘದ ಸಹಯೋಗದೊಂದಿಗೆ ಆಯೋಜಿಸಿದ್ದ ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ 'ಪ್ರದರ್ಶಕ ಕಲೆಗಳು ಮತ್ತು ಮಾಧ್ಯಮದಲ್ಲಿ ತಳ ಸಮುದಾಯಗಳ ಪ್ರಾತಿನಿಧ್ಯದ ಮೇಲೆ ಅಧಿಕಾರ ಸಂರಚನೆಯ ಪ್ರಭಾವ' ಕುರಿತು ಮಾತನಾಡಿದರು.

ಕಲೆಗಳ ಪ್ರಸಾರ ನಿರ್ಲಕ್ಷ್ಯ: ಬೆಂಗಳೂರು ಉತ್ತರ ವಿವಿ ಕುಲಪತಿ ಡಾ.ನಿರಂಜನ ವಾನಳ್ಳಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಖಾಸಗಿ ದೃಶ್ಯ ಮತ್ತು ಮುದ್ರಣ ಮಾಧ್ಯಮಗಳು ಕಲೆ, ಸಾಹಿತ್ಯ, ನಾಟಕ ಹಾಗೂ ನೃತ್ಯ ಕಲೆಗಳ ಪ್ರಸಾರ ಕಡೆಗಣನೆ ಮಾಡುತ್ತಿವೆ. ಪತ್ರಿಕೆಗಳಲ್ಲಿ ಮೊದಲು ಇಂತಹ ಸುದ್ದಿಗಳಿಗೆ ಪ್ರಾಮುಖ್ಯತೆ ಇರುತ್ತಿತ್ತು. ಈಗ ಪ್ರದರ್ಶಕ ಕಲೆಗಳ ಪ್ರಸಾರಕ್ಕೆ ಮಾಧ್ಯಮಗಳು ಮೀನಾಮೇಷ ಎಣಿಸುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ ಎಂದು ಬೇಸರ ಹೊರಹಾಕಿದರು.

ಸಾಂಸ್ಕೃತಿಕ ನೀತಿ ಅಗತ್ಯ: ಕರ್ನಾಟಕ ನಾಟಕ ಅಕಾಡೆಮಿ ಛೇರ್ಮನ್ ಕೆ.ವಿ. ನಾಗರಾಜ ಮೂರ್ತಿ ಮಾತನಾಡಿ, ರಾಜ್ಯ ಸರ್ಕಾರ ಇತ್ತೀಚೆಗೆ ಅಣ್ಣಾ ಬಸವಣ್ಣ ಅವರನ್ನು ಕರ್ನಾಟಕ ಸಾಂಸ್ಕೃತಿಕ ನಾಯಕ ಎಂದು ಘೋಷಣೆ ಮಾಡಿರುವುದು ಸಂತೋಷ ಸಂಗತಿ. ಆದರೆ, ವೀರಶೈವ ಲಿಂಗಾಯತರು ಬಸವಣ್ಣನನ್ನು ಬಿಟ್ಟರೆ, ವಿಶ್ವ ಸಾಂಸ್ಕೃತಿಕ ನಾಯಕನಾಗಿ ಹೊರಹೊಮ್ಮುತ್ತಾರೆ. ಈ ಬಗ್ಗೆ ಎಲ್ಲರೂ ಆಲೋಚಿಸಬೇಕು ಎಂದರು.

ಮೊದಲು ಹಿಂದೂಸ್ತಾನಿ ಸಂಗೀತದಲ್ಲಿ ವಚನಗಳನ್ನು ಹೆಸರಾಂತ ಗಾಯಕರು ಹಾಡುತ್ತಿರಲಿಲ್ಲ. ಆದರೆ, ವಚನಗಳನ್ನು ಹಿಂದೂಸ್ತಾನಿ ಸಂಯೋಜನೆಯಲ್ಲಿ ಹಾಡಲೇಬೇಕು ಎಂದು ಜನ ಸಮುದಾಯ ಒತ್ತಾಯಿಸಿದಾಗ ವಚನ ಗಳನ್ನು 40 ವರ್ಷಗಳಿಂದೀಚೆಗೆ ಹಾಡುತ್ತಿದ್ದಾರೆ. ಅಲ್ಲದೆ, ತಂತ್ರಜ್ಞಾನ ಯುಗದಲ್ಲಿ ಕಲೆ, ಸಾಹಿತ್ಯ, ರಂಗಭೂಮಿ ಹಾಗೂ ಜಾನಪದ ಕಲೆಗಳಿಗೆ ಪ್ರಸಾರ ಇಲ್ಲದ ಹಿನ್ನೆಲೆಯಲ್ಲಿ ನೇಪಥ್ಯಕ್ಕೆ ಸರಿಯುವಂತಾಗಿದೆ. ಈ ಪ್ರದರ್ಶಕ ಕಲೆಗಳನ್ನು ಉಳಿಸಿಕೊಳ್ಳಬೇಕಾದರೆ, ಸ್ಪಷ್ಟ ಸಾಂಸ್ಕೃತಿಕ ನೀತಿ ಜಾರಿಗೊಳಿಸುವುದು ಅಗತ್ಯ ಎಂದು ಪ್ರತಿಪಾದಿಸಿದರು.

ಸಂಗೀತ ವಿವಿಗೆ ಮನ್ನಣೆ ಇದೆ: ನ್ಯಾಕ್ ಮಾಜಿ ನಿರ್ದೇಶಕ ಪ್ರೊ.ಎಸ್.ಸಿ.ಶರ್ಮಾ ಮಾತನಾಡಿ, ಕರ್ನಾಟಕ ರಾಜ್ಯ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿವಿ ಮೂರ್ತಿ ಚಿಕ್ಕದಾದರೂ, ಕೀರ್ತಿ ದೊಡ್ಡದು ಎಂಬಂತೆ ಕಲೆಗಳಿಗೆ ವಿಶ್ವ ಮನ್ನಣೆ ಇದೆ. ಕರ್ನಾಟಕ, ಹಿಂದೂಸ್ತಾನಿ ಸಂಗೀತ ಹಾಗೂ ಪ್ರದರ್ಶಕ ಕಲೆಗಳಿಗೆ ಹೆಚ್ಚಿನ ಪ್ರೋತ್ಸಾಹ ದೊರೆತರೆ ಈ ವಿವಿ ಹೆಚ್ಚು ಜನರನ್ನು ತಲುಪುತ್ತದೆ. ಹಾಗೂ ಸರ್ಕಾರದ ಸಾಂಸ್ಕೃತಿಕ ನೀತಿಗಳು ಜನರಿಗೆ ತಲುಪಲು ಸಾಂಸ್ಕೃತಿಕ ನೀತಿ ಅಗತ್ಯ ಎಂದರು.

ಏಳುಬೀಳುಗಳ ನಡುವೆಯೂ ಸಾಧನೆ: ರಂಗಾಯಣ ಮಾಜಿ ನಿರ್ದೇಶಕ ರಾಜಾರಾಂ ಮಾತನಾಡಿ, ಸಂಗೀತ ವಿವಿಯಲ್ಲಿ ಏನೇ ಅವ್ಯವಸ್ಥೆಗಳಿದ್ದರೂ ಅವೆಲ್ಲವನ್ನು ಕುಲಪತಿ ಸುರೇಶ್ ಬೆಟ್ಟಕೋಟೆ ಸರಿಪಡಿಸಿಕೊಂಡು ಹೋಗುತ್ತಿದ್ದಾರೆ. ಆದರೆ, ಯುವಕರು ಕಲೆಗಳಲ್ಲಿ ತೊಡಗಿಸಿಕೊಳ್ಳಬೇಕಾದರೆ, ರಾಜ್ಯ ಸರ್ಕಾರ ಸಹಕಾರ ಅತ್ಯಗತ್ಯ. ಈ ನಿಟ್ಟಿನಲ್ಲಿ ಸರ್ಕಾರ ಸಾಂಸ್ಕೃತಿಕ ನೀತಿ ರೂಪಿಸುವುದು ಅನಿವಾರ್ಯ ಎಂದರು.

ಈ ವೇಳೆ ಸಂಗೀತ ವಿವಿ ಕುಲಪತಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ, ಕುಲಸಚಿವೆ ಕೆ.ಎಸ್.ರೇಖಾ, ಕರ್ನಾಟಕ ಸಂಗೀತ ಮತ್ತು ನೃತ್ಯ ಅಕಾಡೆಮಿ ಛೇರ್ಮನ್ ಡಾ.ಕೃಪಾ ಫಡ್ಕೆ ಸೇರಿದಂತೆ ಇತರರಿದ್ದರು.

ಬೇಕಾಗಿದ್ದಾರೆ
ನಂದಿನಿ ಫ್ಯಾಷನ್ ಲೇಡಿಸ್ ಟೈಲರ್ (ಲೇಡಿಸ್ ಡ್ರೆಸ್ ಮೇಕರ್ಸ್)
9590746506

ಅನುಬಂಧ ಮ್ಯಾರೇಜಸ್
ವಧುವರರನ್ನು ಹುಡುಕಲು ಸಹಾಯ ಬೇಕೇ? ನಮಗೆ ಕರೆ ಮಾಡಿ ಪ್ರತಿದಿನ ವಧುವರರ ನೇರ ಸಂದರ್ಶನ ಇರುತ್ತದೆ.
6361740552

ಬೇಕಾಗಿದ್ದಾರೆ
ಬಸ್ ಡ್ರೈವರ್ ಹೆವಿ ಡ್ರೈವಿಂಗ್ ಲೈಸೆನ್ಸ್ ಹೊಂದಿರುವುದು ಹಾಗೂ ಅನುಭವವುಳ್ಳ ಚಾಲಕರು ಬೇಕಾಗಿದ್ದಾರೆ. ಸ್ಥಳ : ತಿರುಮಲ ಪಬ್ಲಿಕ್ ಸ್ಕೂಲ್ ಸರ್ದಾರ್ ವಲ್ಲಭಭಾಯ್ ಪಟೇಲ್ ನಗರ, ಮೈಸೂರು
9148102123


30x40 Site for Sale
North West Coner Near HD Kote Road Srirampura Ring Road
9900251194
9738884777

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಪಿ.ಪಟ್ಟಣ ತಾಲೂಕು ಮಳೆ ಹಾನಿ ಪ್ರದೇಶಗಳಿಗೆ ಹೆಚ್‌ಡಿಕೆ ಭೇಟಿ

ಬೆಳೆ ಹಾನಿ, ಹದಗೆಟ್ಟ ರಸ್ತೆಗಳ ವೀಕ್ಷಣೆ, ಸರ್ಕಾರದಿಂದ ಪರಿಹಾರಕ್ಕೆ ಆಗ್ರಹ



ರೈತ ಮಹಿಳೆಗೆ 50 ಸಾವಿರ ರೂ.

ಮಳೆಯಿಂದ 6 ಲಕ್ಷ ರೂ. ಮೌಲ್ಯದ ಬೆಳೆ ಕಳೆದುಕೊಂಡು ಕಂಗಾಲಾಗಿದ್ದ ರೈತ ಮಹಿಳೆಗೆ ಕುಮಾರಸ್ವಾಮಿ ತಮ್ಮ ಜೆಡಿಎಸ್ ಪಕ್ಷದಿಂದ 50 ಸಾವಿರ ರೂ. ನೆರವು ನೀಡಿದ್ದಾರೆ. ಮಳೆ ಹಾನಿ ಪ್ರದೇಶಕ್ಕೆ ಭೇಟಿ ನೀಡಿದ್ದ ವೇಳೆ ಮಹಿಳೆಯೊಬ್ಬರು ತಾವು ಬೆಳೆದಿದ್ದ 6 ಲಕ್ಷ ರೂ. ಮೌಲ್ಯದ ಬೆಳೆಗಳು ಕೊಚ್ಚಿಕೊಂಡು ಹೋಗಿದೆ. ಇದರಿಂದ ನಮ್ಮ ಕುಟುಂಬ ಬೀದಿ ಪಾಲಾಗಿದೆ ಎಂದು ಅಳಲು ತೋಡಿಕೊಂಡರು. ರೈತ ಮಹಿಳೆಯ ನೋವನ್ನು ಕಂಡು ಮರುಗಿದ ಅವರು ತಕ್ಷಣ ಪಕ್ಷದ ವತಿಯಿಂದ ಹಣವನ್ನು ಕೊಟ್ಟು ಸರ್ಕಾರದಿಂದ ಸೂಕ್ತ ಪರಿಹಾರ ಕೊಡಿಸುವುದಾಗಿ ಭರವಸೆ ನೀಡಿದರು.

ಪಿರಿಯಾಪಟ್ಟಣ, ಮೇ 22– ತಾಲೂಕಿನಾದ್ಯಂತ ಸುರಿದ ಧಾರಾಕಾರ ಮಳೆಯಿಂದ ಹಾನಿಗೀಡಾದ ಪ್ರದೇಶಗಳಿಗೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಭೇಟಿ ನೀಡಿ, ಪರಿಶೀಲಿಸಿ ಸಂತ್ರಸ್ತರಿಗೆ ಧೈರ್ಯ ಹೇಳಿದರು.

ಬೆಟ್ಟದಪುರ ಸಮೀಪದ ಹಾರನಹಳ್ಳಿ, ಚಪ್ಪರದಹಳ್ಳಿ, ಗೋರಹಳ್ಳಿ, ಅಂಬಲಾರೆ ಗ್ರಾಮಗಳಲ್ಲಿ ಸೋಮವಾರ ಸುರಿದ ಭಾರಿ ಮಳೆಗೆ ಅಪಾರ ಪ್ರಮಾಣದ ಕೆರೆ–ಕಟ್ಟೆಗಳು ಒಡೆದು ಹಲವಾರು ಬೆಳೆಗಳು ನಾಶವಾಗಿದ್ದ ಪ್ರದೇಶಗಳಿಗೆ ಹೆಚ್.ಡಿ. ಕುಮಾರಸ್ವಾಮಿ, ಶಾಸಕ ಜಿ.ಟಿ.ದೇವೇಗೌಡ ಹಾಗೂ ಮಾಜಿ ಶಾಸಕ ಕೆ. ಮಹದೇವ್ ಅವರು ಮಳೆಯಿಂದ ಉಂಟಾಗಿರುವ ಬೆಳೆ ಹಾನಿ, ರಸ್ತೆಯ ದುಸ್ಥಿತಿಯನ್ನು ಕಂಡು ಮರುಕ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ, ರಾಜ್ಯದಲ್ಲಿ ಒಂದು ವರ್ಷ ಬರಗಾಲ ತಾಂಡವವಾಡಿತ್ತು. ಅಲ್ಲದೆ ಇದೀಗ ಭಾರಿ ಮಳೆಯಿಂದ ರೈತರು ಬೆಳೆದ ಬೆಳೆಗಳು ಕೊಚ್ಚಿ ಹೋಗಿದ್ದು ಹಲವಾರು ರಸ್ತೆಗಳು ಹಾಳಾಗಿವೆ. ಇದರಿಂದ ರೈತರಿಗೆ ತೊಂದರೆಯಾಗಿದೆ. ರೈತರು ಬಹಳ ಸಂಕಷ್ಟದಲ್ಲಿದ್ದಾರೆ. ಪ್ರತಿದಿನ ಸುರಿಯುತ್ತಿರುವ ಮಳೆಗೆ ಸಾವಿರಾರು ಎಕರೆ ತಂಬಾಕು, ಶುಂಠಿ, ರಾಗಿ, ಜೋಳ ಕೊಚ್ಚಿಹೋಗಿದ್ದು, ರೈತರು ಮತ್ತೆ ವ್ಯವಸಾಯ ಆರಂಭಿಸಬೇಕಾದರೆ ರೈತರಿಗೆ ಹಣ ಮತ್ತು ಮನೆ ಕಳೆದುಕೊಂಡ ರೈತರಿಗೆ ಮನೆಗಳನ್ನು ಕಟ್ಟಿಕೊಡುವ ಕೆಲಸವನ್ನು ಸರ್ಕಾರ ಕೂಡಲೆ ಮಾಡಬೇಕು ಎಂದರು.

ಈ ಸಂದರ್ಭದಲ್ಲಿ ಬಿಜೆಪಿ ತಾಲೂಕು ಅಧ್ಯಕ್ಷ ರಾಜೇಂದ್ರ, ಮುಖಂಡರಾದ ರಾಜೇಗೌಡ, ಆರ್.ಟಿ.ಸತೀಶ್, ಜೆಡಿಎಸ್ ತಾಲೂಕು ಅಧ್ಯಕ್ಷ ಅಣ್ಣಯ್ಯಶೆಟ್ಟಿ, ವಿದ್ಯಾಶಂಕರ್, ಮಾಜಿ ತಾಲೂಕು ಪಂಚಾಯಿತಿ ಸದಸ್ಯ ಶಂಕರೇಗೌಡ, ಚಪ್ಪರದಹಳ್ಳಿ ಗ್ರಾಮದ ಮಾಜಿ ಅಧ್ಯಕ್ಷ ಸುರೇಶ್, ವೆಂಕಟೇಶ್, ದೇವೇಗೌಡ ಕಣಗಾಲು, ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಮಹದೇವ್, ತಾಲೂಕು ಪಂಚಾಯತಿ ಮಾಜಿ ಸದಸ್ಯ ಅತರ್, ಮತ್ತಿನ್, ಸೈಯದ್ ಅಕ್ಬರ್ ಸೇರಿದಂತೆ ಇನ್ನು ಹಲವರು ಹಾಜರಿದ್ದರು

ಹೃದ್ರೋಗಿಗೆ ನೆರವು

ಹೃದ್ರೋಗದಿಂದ ಬಳಲುತ್ತಿರುವ ವ್ಯಕ್ತಿಯೊಬ್ಬರಿಗೆ ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿ ಅವರು ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲು ಮುಂದಾಗಿದ್ದಾರೆ.

ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರು ಮಳೆಯಿಂದ ಬೆಳೆ ಹಾನಿಗೆ ತುತ್ತಾಗಿರುವ ಪ್ರದೇಶಗಳಿಗೆ ಭೇಟಿ ನೀಡಲು ತೆರಳುವ ಮಾರ್ಗದ ನಡುವೆ ಹೃದ್ರೋಗದಿಂದ ಬಳಲುತ್ತಿರುವ ಮಾಗಳಿ ಗ್ರಾಮದ ನೀಲೇಗೌಡ ಅವರು ಭೇಟಿಯಾದರು.

ಈ ಸಂದರ್ಭದಲ್ಲಿ ನೀಲೇಗೌಡರು ತಮ್ಮ ಅನಾರೋಗ್ಯದ ಬಗ್ಗೆ ಅಹವಾಲು ಸಲ್ಲಿಸಿದರು. ತಕ್ಷಣ ಅವರ ಮನವಿಗೆ ಸ್ಪಂದಿಸಿದ ಮಾಜಿ ಮುಖ್ಯಮಂತ್ರಿಗಳು, ಮೈಸೂರಿನ ಜಯದೇವ ಆಸ್ಪತ್ರೆಗೆ ತೆರಳಿ ಚಿಕಿತ್ಸೆ ಪಡೆದುಕೊಳ್ಳಿ, ನಾನು ಅಲ್ಲಿನ ನಿರ್ದೇಶಕರಿಗೆ ಹೇಳುತ್ತೇನೆ, ಹೋಗಿ ಎಂದು ಹೇಳಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಅರಮನೆ 4 (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಟರ್ಬೊ (ಮ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕ್ರೂ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮಗಧೀರ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಯುವ (ಕ)	4 ಪ್ರದರ್ಶನಗಳು
ರಾಜಕಮಲ್	
ಫ್ಯೂರಿಯೋಸ ಎ ಮ್ಯಾಡ್ ಮ್ಯಾಕ್ಸ್ ಸಾಗಾ (ಇಂ)	4 ಪ್ರದರ್ಶನಗಳು
ಸಂಗಂ	
ಕೃಷ್ಣ ನೀ ಬೇಗನೆ ಬಾರೋ (ಕ)	4 ಪ್ರದರ್ಶನಗಳು
ಲಿಡೋ	
ಅಂಜನೀಪುತ್ರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಯುವ (ಕ)	4 ಪ್ರದರ್ಶನಗಳು
ಪ್ರಭಾ	
ಕೃಷ್ಣಾ ನೀ ಬೇಗನೆ ಬಾರೋ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಫ್ಯೂರಿಯೋಸ ಎ ಮ್ಯಾಡ್ ಮ್ಯಾಕ್ಸ್ ಸಾಗಾ (ಇಂ): ಬೆ.10.15ಕ್ಕೆ, ಮ.1.10ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, ರಾ.9.55ಕ್ಕೆ.
ಸ್ಕ್ರೀನ್ 2	ರಾಮನ ಅವತಾರ (ಕ): ಬೆ.10.50ಕ್ಕೆ, ಸಂ.4.15ಕ್ಕೆ, ರಾ.7.15ಕ್ಕೆ, ಗಾರ್ಫೀಲ್ಡ್ ಮೂವಿ (3ಡಿ)(ಇಂ): ಮ.1.55ಕ್ಕೆ.
ಸ್ಕ್ರೀನ್ 3	ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.11ಕ್ಕೆ, A (ಕ): ಮ.1.35ಕ್ಕೆ, ಶ್ರೀಕಾಂತ್ (ಹಿಂ): ಸಂ.4.35ಕ್ಕೆ, ಗುರುವಾಯೂರ್ ಅಂಬಲನಾಡಿಯಿಲ್ (ಮ): ರಾ.7.20ಕ್ಕೆ, ರಾ.10ಕ್ಕೆ.
ಸ್ಕ್ರೀನ್ 4	ಟರ್ಬೊ (ಮ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಗಾರ್ಫೀಲ್ಡ್ ಮೂವಿ (3ಡಿ)(ಇಂ): ಬೆ.10.40ಕ್ಕೆ, ಮ.1ಕ್ಕೆ, ಸಂ.6.10ಕ್ಕೆ, ರಾ.8.30ಕ್ಕೆ, ಇಂಗ ನಾನ್ ಥಾನ್ ಕಿಂಗು (ತ): ಮ.3.20ಕ್ಕೆ.
ಸ್ಕ್ರೀನ್ 2	ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ರಾ.7.05ಕ್ಕೆ, ಶ್ರೀಕಾಂತ್ (ಹಿಂ): ಮ.1.05ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 3	ಇಂಗ ನಾನ್ ಥಾನ್ ಕಿಂಗು (ತ): ಬೆ.11.05ಕ್ಕೆ, ಇಫ್ 2024 (ಇಂ): ಮ.1.55ಕ್ಕೆ, ರಾ.7.35ಕ್ಕೆ, A (ಕ): ಸಂ.4.20ಕ್ಕೆ, ಗುರುವಾಯೂರ್ ಅಂಬಲನಾಡಿಯಿಲ್ (ಮ): ರಾ.10ಕ್ಕೆ.
ಸ್ಕ್ರೀನ್ 4	ರಾಮನ ಅವತಾರ (ಕ): ಮ.12.45ಕ್ಕೆ, ಕೃಷ್ಣ ನೀ ಬೇಗನೇ ಬಾರೋ (ಕ): ಮ.3.40ಕ್ಕೆ, ಇಂಗ ನಾನ್ ಥಾನ್ ಕಿಂಗು (ತ): ಸಂ.6.55ಕ್ಕೆ, ಅರಮನೈ 4 (ತ): ರಾ.9.45ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಎವಿಡೆನ್ಸ್ (ಕ): ಬೆ.11.15ಕ್ಕೆ, ಅರನ್‌ಮನೈ 4 (ತ): ಮ.1.15ಕ್ಕೆ, ಟರ್ಬೊ (ಮ): ಸಂ.4ಕ್ಕೆ, ಮೂರನೇ ಕೃಷ್ಣಪ್ಪ (ಕ): ಸಂ.6.40ಕ್ಕೆ, ದಿ ಜಡ್ಜ್‌ಮೆಂಟ್ (ಕ): ರಾ.9.30ಕ್ಕೆ.
ಸ್ಕ್ರೀನ್ 2	ಫ್ಯೂರಿಯೋಸ ಎ ಮ್ಯಾಡ್ ಮ್ಯಾಕ್ಸ್ ಸಾಗಾ (ಇಂ): ಬೆ.10.20ಕ್ಕೆ, ಸಂ.4.05ಕ್ಕೆ, ಟರ್ಬೊ (ಮ): ಮ.1.05ಕ್ಕೆ, ಸಂ.6.50ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ದಿ ಜಡ್ಜ್‌ಮೆಂಟ್ (ಕ): ಬೆ.10.40ಕ್ಕೆ, ಮ.3.55ಕ್ಕೆ, 3ದೇವಿ (ಕ): ಮ.1.30ಕ್ಕೆ, ಫ್ಯೂರಿಯೋಸ ಎ ಮ್ಯಾಡ್ ಮ್ಯಾಕ್ಸ್ ಸಾಗಾ (ಇಂ): ಸಂ.6.45ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಗರುಡ ಮಾಲ್,
1ನೇ ಮಹಡಿ, ಮೊ.ನಂ: 9901373210

ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1.15ಕ್ಕೆ, ಮ.3.40ಕ್ಕೆ, ರಾ.7.15ಕ್ಕೆ, ರಾ.10ಕ್ಕೆ, ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10.05ಕ್ಕೆ, ಮ.12ಕ್ಕೆ, ಮ.3.10ಕ್ಕೆ, ಸಂ.6.20ಕ್ಕೆ, ರಾ.9.30ಕ್ಕೆ, ಸ್ಟಾರ್ (ತ): ಮ.1ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, 4N6 (ಕ): ಮ.1.05ಕ್ಕೆ, ಅಂಜನೀಪುತ್ರ (ಕ): ಸಂ.4.15ಕ್ಕೆ, ಕೃಷ್ಣಮ್ಮ (ತೆ): ಸಂ.4.20ಕ್ಕೆ, ರಾ.10.15ಕ್ಕೆ, ಪವರ್ (ಕ): ಸಂ.6.40ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮಳೆ ಹಾನಿ ಪ್ರದೇಶಗಳಿಗೆ ಸಚಿವ ವೆಂಕಟೇಶ್ ಭೇಟಿ

ರೈತರಿಗೆ, ಸಂತ್ರಸ್ತರಿಗೆ ತಕ್ಷಣ ಪರಿಹಾರ ನೀಡಲು ಸೂಚನೆ



ಬೆಟ್ಟದಪುರ, ಮೇ 22– ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಹೋಬಳಿ ಹಾರನಹಳ್ಳಿ ಹೋಬಳಿಯಲ್ಲಿ ಸೋಮವಾರ ಸುರಿದ ಭಾರಿ ಮಳೆಗೆ ಹಲವಾರು ಕೆರೆಗಳು ಒಡೆದಿದ್ದು, ನೂರಾರು ಎಕರೆ ಜಮೀನಿನ ಬಿತ್ತನೆ ಹಾಗೂ ತಂಬಾಕು, ಶುಂಠಿ, ರಾಗಿ, ಜೋಳ ಕೊಚ್ಚಿ ಹೋದ ಪ್ರದೇಶಕ್ಕೆ ಇಂದು ಸಚಿವ ಕೆ. ವೆಂಕಟೇಶ್ ಅಧಿಕಾರಿಗಳೊಂದಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಿ ಪರಿಹಾರಕ್ಕೆ ಸೂಚಿಸಿದರು.

ಕೂಡಲೆ ಮನೆ ಹಾನಿಯಾದ ಫಲಾನುಭವಿಗಳಿಗೆ ಪರಿಹಾರ ನೀಡಬೇಕು. ಹಾಳಾಗಿರುವ ರಸ್ತೆಗಳನ್ನು ತಕ್ಷಣ ಸರಿಪಡಿಸಬೇಕು. ಒಡೆದಿರುವ ಕೆರೆ ಏರಿಗಳನ್ನು ತಕ್ಷಣವೇ ಸರಿಪಡಿಸಬೇಕು. ಜಮೀನಿನಲ್ಲಿ ಬೆಳೆ ಹಾನಿ ಪರಿಹಾರವನ್ನು ಕೂಡಲೆ ನೀಡಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು.

ಚಪ್ಪರದಹಳ್ಳಿ, ಹಾರನಹಳ್ಳಿ, ಅಂಬಲಾರೆ, ಶಾನಭೋಗನಹಳ್ಳಿ, ಮರಡಿಯೂರು, ಕೊಪ್ಪ, ಚಿಕ್ಕನೇರಳೆ ಸೇರಿದಂತೆ ಹಲವಾರು ಗ್ರಾಮಗಳಿಗೆ ಸಚಿವರು ಭೇಟಿ ನೀಡಿದ್ದರು. ಈ ಸಂದರ್ಭದಲ್ಲಿ ತಾಲೂಕು ತಹಶೀಲ್ದಾರ್ ಸುರೇಂದ್ರ ಮೂರ್ತಿ, ಕಾರ್ಯನಿರ್ವಾಹಕ ಅಧಿಕಾರಿ ಸುನಿಲ್ ಕುಮಾರ್, ಲೋಕೋಪಯೋಗಿ ಇಲಾಖೆಯ ವೆಂಕಟೇಶ್, ಅರಣ್ಯ ಇಲಾಖೆ ಕಿರಣ್ ಕುಮಾರ್, ಪಶು ಸಂಗೋಪನೆ ಇಲಾಖೆಯ ಸೋಮಯ್ಯ, ಮಹಿಳಾ ಮತ್ತು ಮಕ್ಕಳ ಇಲಾಖೆಯ ಮಮತಾ, ಆಹಾರ ಇಲಾಖೆಯ ಸಣ್ಣಸ್ವಾಮಿ, ಸರ್ವೆ ಇಲಾಖೆಯ ಮುನಿಯಪ್ಪ ಜಿಲ್ಲಾ ಪಂಚಾಯಿತಿಯ ಮಲ್ಲಿಕಾರ್ಜುನ್, ಗ್ರಾಮ ಪಂಚಾಯಿತಿ ಪಿಡಿಓಗಳು, ಗ್ರಾಮ ಲೆಕ್ಕಾಧಿಕಾರಿಗಳು ಸೇರಿದಂತೆ ಹಲವಾರು ಗ್ರಾಮದ ಮುಖಂಡರು ಹಾಜರಿದ್ದರು.

ನಂ.ಗೂಡು: ಮದ್ಯದಂಗಡಿಯಲ್ಲಿ 30 ಸಾವಿರ ನಗದು ಕಳವು



ನಂಜನಗೂಡು, ಮೇ 22– ತಾಲೂಕಿನ ಗೋಳೂರು ಗ್ರಾಮದಲ್ಲಿರುವ ಮದ್ಯದಂಗಡಿಯಲ್ಲಿ ಮಂಗಳವಾರ ತಡರಾತ್ರಿ ದುಷ್ಕರ್ಮಿಗಳು ಬಾಗಿಲು ಒಡೆದು ಸುಮಾರು 30 ಸಾವಿರಕ್ಕೂ ಹೆಚ್ಚು ನಗದನ್ನು ಕಳವು ಮಾಡಿದ್ದಾರೆ.

ಗ್ರಾಮದ ತಿ.ನರಸೀಪುರ ಮುಖ್ಯರಸ್ತೆಯಲ್ಲಿರುವ ಶ್ರೀ ಬಾಲಾಜಿ ಬಾರ್ ಅಂಡ್ ರೆಸ್ಟೋರೆಂಟ್‌ನಲ್ಲಿ ಮಂಗಳವಾರ ತಡರಾತ್ರಿ 2 ಗಂಟೆ ಸುಮಾರಿನಲ್ಲಿ ಮುಖಗವಸು ಧರಿಸಿಕೊಂಡು ಬಾರ್ ಮುಂದೆ ಬಂದ ಇಬ್ಬರು ದುಷ್ಕರ್ಮಿಗಳು ಬಾಗಿಲು ಒಡೆದು ಒಬ್ಬ ಒಳನುಗ್ಗಿ ಕ್ಯಾಶ್ ಕೌಂಟರ್‌ನಲ್ಲಿಟ್ಟಿದ್ದ ಸುಮಾರು 30 ಸಾವಿರಕ್ಕೂ ಹೆಚ್ಚು ಹಣವನ್ನು ದೋಚಿಕೊಂಡು ಪರಾರಿಯಾಗಿರುವುದು ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ.

ಬುಧವಾರ ಬೆಳಗ್ಗೆ ವಿಷಯ ತಿಳಿದು ಗ್ರಾಮಾಂತರ ಠಾಣೆ ಪೊಲೀಸರು ಭೇಟಿ ನೀಡಿ ಮಹಜರು ನಡೆಸಿದರು. ಶ್ವಾನದಳ ಹಾಗೂ ಬೆರಳಚ್ಚು ತಂಡದ ಸಿಬ್ಬಂದಿ ತಪಾಸಣೆ ನಡೆಸಿದರು. ತಿ.ನರಸೀಪುರ ಹಾಗೂ ಚಾಮರಾಜನಗರ ಮುಖ್ಯರಸ್ತೆಗೆ ಹೋಗುವ ವೃತ್ತದಲ್ಲೇ ದುಷ್ಕರ್ಮಿಗಳು ಕಳ್ಳತನ ನಡೆಸಿದ್ದಾರೆ. ಈ ಕುರಿತು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಗಡೂರು ಗ್ರಾಮದ ಬೋರ್‌ವೆಲ್‌ಗಳಲ್ಲಿ ಕಲುಷಿತ ನೀರು

ಗ್ರಾಮಕ್ಕೆ ಅಧಿಕಾರಿಗಳೊಂದಿಗೆ ಸಚಿವ ಡಾ. ಹೆಚ್‌ಸಿಎಂ ಭೇಟಿ

ಶುದ್ಧ ಕುಡಿಯುವ ನೀರು ಪೂರೈಕೆ ಮಾಡಲು ಸೂಚನೆ



ನಂಜನಗೂಡು ತಾಲೂಕಿನ ತಗಡೂರು ಗ್ರಾಮಕ್ಕೆ ಭೇಟಿ ನೀಡಿದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ, ಕುಡಿಯುವ ನೀರಿನ ಸಮಸ್ಯೆಯನ್ನು ಆಲಿಸಿದರು.

ನಂಜನಗೂಡು, ಮೇ 22– ತಾಲೂಕಿನ ತಗಡೂರು ಗ್ರಾಮದಲ್ಲಿ ಹಳೆಯ ಬೋರ್‌ವೆಲ್‌ಗಳಲ್ಲಿ ಕಲುಷಿತ ನೀರು ಬರುತ್ತಿರುವುದರಿಂದ ಅದನ್ನು ಸೇವನೆ ಮಾಡಿದ ಜನರಿಗೆ ಸಾಮೂಹಿಕವಾಗಿ ಕಾಲರಾ ಹಾಗೂ ಇತರೆ ಆರೋಗ್ಯ ಸಮಸ್ಯೆಗಳಿಗೆ ತುತ್ತಾಗುತ್ತಿರುವುದರಿಂದ ಶುದ್ಧ ಕುಡಿಯುವ ನೀರಿನ ಪೂರೈಕೆ ಮಾಡುವ ಬಗ್ಗೆ ಅಗತ್ಯ ಕ್ರಮವಹಿಸಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ತಿಳಿಸಿದರು.

ಬುಧವಾರ ತಗಡೂರು ಗ್ರಾಮಕ್ಕೆ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಭೇಟಿ ಮಾಡಿ ಗ್ರಾಮಸ್ಥರ ಅಹವಾಲು ಆಲಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು.

ಗ್ರಾಮದಲ್ಲಿರುವ 34 ಬೋರ್‌ವೆಲ್‌ಗಳ ಪೈಕಿ 12 ಬೋರ್‌ವೆಲ್‌ಗಳು ಮಾತ್ರ ಸುಸ್ಥಿತಿಯಲ್ಲಿದ್ದು, ಅದರಲ್ಲಿ ಕೆಲವು ಬೋರ್‌ವೆಲ್‌ಗಳಲ್ಲಿ ಕಲುಷಿತ ನೀರು ಬರುವುದು ಅರಿವಿಗೆ ಬಾರದೇ ಗ್ರಾಮದಲ್ಲಿ ಸುಮಾರು 80ಕ್ಕೂ ಹೆಚ್ಚು ಜನರು ಕಾಲರಾ ಹಾಗೂ ಇತರೆ ಆರೋಗ್ಯ ಸಮಸ್ಯೆಗಳಿಗೆ ಈಡಾಗುತ್ತಿರುವ ವಿಷಯ ತಿಳಿದು ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದರಿಂದ ಅಧಿಕಾರಿಗಳಿಗೆ ಮೌಖಿಕವಾಗಿ ಸೂಚನೆ ಕೊಡುತ್ತಿದ್ದೆ. ಸಿಎಂ ಸಿದ್ದರಾಮಯ್ಯ ಅವರೇ ಖುದ್ದು ನನಗೆ ಕರೆ ಮಾಡಿ ಜನರು ಸಮಸ್ಯೆಗಳಿಗೆ ಸಿಲುಕಿರುವುದರಿಂದ ಗ್ರಾಮಕ್ಕೆ ಭೇಟಿ ನೀಡಿ ಪರಿಸ್ಥಿತಿ ಅವಲೋಕಿಸಿ ಅಗತ್ಯ ನೆರವು ನೀಡುವಂತೆ ಸೂಚನೆ ನೀಡಿದ್ದರಿಂದ ಗ್ರಾಮಕ್ಕೆ ಭೇಟಿ ನೀಡಿದ್ದೇನೆ ಎಂದರು.

ಇನ್ನು ಗ್ರಾಮದಲ್ಲಿ ಈಗಾಗಲೇ ಕಲುಷಿತ ನೀರು ಬರುತ್ತಿರುವ ಬೋರ್‌ವೆಲ್‌ಗಳನ್ನು ಬಳಕೆ ಮಾಡದಂತೆ ಸೂಚನೆ ನೀಡಿದ್ದೇನೆ. ಜತೆಗೆ ಈಗಾಗಲೇ ಹೊಸದಾಗಿ ಹೆಚ್ಚುವರಿ ಐದು ಬೋರ್‌ವೆಲ್‌ಗಳನ್ನು ಕೊರೆಸಲಾಗಿದ್ದು, ಆ ಬೋರ್‌ವೆಲ್‌ಗಳ ನೀರಿನ ಗುಣಮಟ್ಟದ ಪರಿಶೀಲನೆಗಾಗಿ ಪ್ರಯೋಗಾಲಯಕ್ಕೆ ಕಳುಹಿಸಿಕೊಡಲಾಗಿದೆ. ಮೂರ್‍ನಾಲ್ಕು ದಿನಗಳಲ್ಲಿ ಅದರ ವರದಿ ಬರಲಿದ್ದು, ವರದಿ ಆಧರಿಸಿ ಆ ಬೋರ್‌ವೆಲ್‌ಗಳ ನೀರಿನ ಬಳಕೆ ಮಾಡಬಹುದು ಎಂದು ಖಚಿತವಾದ ಬಳಿಕ ನೀರಿನ ಸಮಸ್ಯೆ ನೀಗಲಿದೆ. ಅಲ್ಲಿವರೆಗೂ ಟ್ಯಾಂಕರ್ ಮೂಲಕ ಶುದ್ಧ ಕುಡಿಯುವ ನೀರಿನ ಪೂರೈಕೆ ಮಾಡಬೇಕು. ಜತೆಗೆ ಪ್ರತಿಯೊಬ್ಬರಿಗೂ ಅಲರ್ಜಿ ಆಗದಂತೆ ಅಗತ್ಯ ಔಷಧಿಯನ್ನು ವಿತರಣೆ ಮಾಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿರುವುದಾಗಿ ತಿಳಿಸಿದರು.

ಇನ್ನು ಕಾಲರಾ ಹಾಗೂ ಇನ್ನಿತರ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿರುವ ಗ್ರಾಮಸ್ಥರಿಗೆ ಅಗತ್ಯ ವೈದ್ಯಕೀಯ ನೆರವು ನೀಡುವ ನಿಟ್ಟಿನಲ್ಲಿ ಜಿಲ್ಲಾಡಳಿತ ಕ್ರಮ ವಹಿಸಿದೆ. ಗ್ರಾಮಸ್ಥರು ಆತಂಕ ಪಡಬೇಕಾದ ಅಗತ್ಯವಿಲ್ಲ. ಮಳೆಗಾಲ ಎದುರಾಗಿರುವುದರಿಂದ ನೀರನ್ನು ಕಾಯಿಸಿ ಕುಡಿಯುವ ಅಭ್ಯಾಸವನ್ನು ರೂಢಿಸಿಕೊಳ್ಳಬೇಕು. ಜತೆಗೆ ನೈರ್ಮಲ್ಯ ಕಾಪಾಡುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಆದೇಶಿಸಿದರು.

ಇನ್ನು ಜಲಜೀವನ್ ಮಿಷನ್ ಯೋಜನೆಯಡಿ ಪೈಪ್‌ಲೈನ್ ಸರಿಯಾಗಿ ಅಳವಡಿಕೆ ಮಾಡದ ಕಾರಣ ಈ ರೀತಿಯ ಸಮಸ್ಯೆ ಎದುರಾಗಿದೆ ಎಂದು ಗ್ರಾಮಸ್ಥರು ದೂರುತ್ತಿದ್ದಂತೆ ಚುನಾವಣಾ ನೀತಿ ಸಂಹಿತೆ ಸಂಪೂರ್ಣವಾಗಿ ತೆರವುಗೊಂಡ ಬಳಿಕ ಜಿಲ್ಲಾ ಮಟ್ಟದಲ್ಲಿ ಅಧಿಕಾರಿಗಳ ಸಭೆ ಕರೆದು ಈ ಯೋಜನೆಯ ಸಾಧನೆ ಪ್ರಗತಿ ಕುರಿತು ಪರಿಶೀಲನೆ ನಡೆಸಲಾಗುವುದು ಎಂದು ತಿಳಿಸಿದರು.

ಸಚಿವ ಡಾ.ಎಚ್.ಸಿ.ಮಹದೇವಪ್ಪ ಭೇಟಿಗೂ ಮುನ್ನ ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಗ್ರಾಮಕ್ಕೆ ಭೇಟಿ ನೀಡಿ ಸಮಸ್ಯೆಯನ್ನು ಅವಲೋಕನ ಮಾಡಿದರು. ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಗಾಯತ್ರಿ, ಜಿಲ್ಲಾ ಆರೋಗ್ಯಾಧಿಕಾರಿ ಡಾ.ವೆಂಕಟೇಶ್, ತಹಸೀಲ್ದಾರ್ ಶಿವಕುಮಾರ್ ಕಾಸನೂರು ಸೇರಿದಂತೆ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಹಾಜರಿದ್ದರು.

ಬರ ಪರಿಹಾರದ ಹಣ ಸಾಲಕ್ಕೆ ಜಮಾ

ಕೆನರಾ ಬ್ಯಾಂಕ್ ಮುಂದೆ ರೈತರ ಪ್ರತಿಭಟನೆ



ತಿ.ನರಸೀಪುರ, ಮೇ 22– ಬರ ಪರಿಹಾರ ಹಣ ಸಾಲಕ್ಕೆ ಜಮಾ ಮಾಡಿದ ಮಾದಾಪುರ ಕೆನರಾ ಬ್ಯಾಂಕ್ ಶಾಖೆಗೆ ರೈತರು ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ತಾಲೂಕು ಅಧ್ಯಕ್ಷ ಕುರುಬೂರು ಸಿದ್ದೇಶ್ ಮಾತನಾಡಿ, ರಾಜ್ಯ ಸರ್ಕಾರ ರೈತರಿಗೆ ನೀಡುವ ಬರ ಪರಿಹಾರ ಭಿಕ್ಷೆಯಲ್ಲ. ಬೆರಳೆಣಿಕೆಯಷ್ಟು ರೈತರಿಗೆ 500–1000ರೂ. ಪರಿಹಾರ ನೀಡಿ ರೈತರನ್ನು ವಂಚಿಸುತ್ತಿರುವ ಸರ್ಕಾರದ ಇಬ್ಬಗೆಯ ನೀತಿಯನ್ನು ಧಿಕ್ಕರಿಸುತ್ತೇವೆ. ಬೇಕೇ ಬೇಕು ನ್ಯಾಯ ಬೇಕು. ನ್ಯಾಯಯುತ ಬರ ಪರಿಹಾರ ನೀಡಲೇಬೇಕು. ಎಂದು ಘೋಷಣೆ ಕೂಗುತ್ತಾ ಪರಿಹಾರ ಕೂಡಲೆ ಬಿಡುಗಡೆ ಮಾಡಬೇಕು. ಎಲ್ಲಾ ಬೆಳೆ ನಷ್ಟಕ್ಕೂ ಎಲ್ಲಾ ರೈತರಿಗೂ ಬರ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು.

ಸರ್ಕಾರ ನಾಟಕೀಯವಾಗಿ ರೈತರ ಬಗ್ಗೆ ಮೊಸಳೆ ಕಣ್ಣೀರು ಸುರಿಸುವುದು ಬೇಡ. ಎಕರೆಗೆ ಕನಿಷ್ಠ 25,000 ನೀಡಲೇಬೇಕು . ತಾಲೂಕಿನ ಎಲ್ಲಾ ಕೆರೆಗಳ ನಾಲೆಗಳ ಹೂಳು ತೆಗೆಸಿ ರೈತರ ಜಮೀನುಗಳಿಗೆ ಸರಬರಾಜು ಮಾಡಿ ಭೂಮಿ ಫಲ ವತ್ತತೆಗೆ ಒತ್ತು ನೀಡಲು ಕಾರ್ಯ ಯೋಜನೆ ಜಾರಿ ಮಾಡಬೇಕು.ಕಾವೇರಿ ಅಚ್ಚುಕಟ್ಟು ಭಾಗದಲ್ಲಿ ಮಳೆ ಕಡಿಮೆಯಾಗಿರುವ ಕಾರಣ ನಾಲೆಗಳಿಗೆ ನೀರು ಹರಿಸಲು ಸಾಧ್ಯವಿಲ್ಲ. ಯಾರೂ ಬೆಳೆ ಬೆಳೆಯಬಾರದು ಎಂದು ಅಧಿಸೂಚನೆ ಹೊರಡಿಸಿದ ಸರ್ಕಾರ ಈ ಭಾಗದ ಎಲ್ಲಾ ತಾಲೂಕು ಬರಗಾಲ ಎಂದು ಘೋಷಣೆ ಮಾಡಿದೆ ಎಂದರು.

ಇದೇ ಸರ್ಕಾರ ಬರಗಾಲದ ಬೆಳೆ ನಷ್ಟ ಅಂದಾಜು ಸಮೀಕ್ಷೆ ಮಾಡಿ ವರದಿ ಕಳಿಸಿ ಎಂದು ಸೂಚಿಸಿದೆ. ಕಾವೇರಿ ಅಚ್ಚುಕಟ್ಟು ಭಾಗದ ಬಹುತೇಕ ರೈತರಿಗೆ ಬೆಳೆ ಬೆಳೆದಿಲ್ಲ ಎಂಬ ಕಾರಣಕ್ಕಾಗಿ ಬರ ಪರಿಹಾರ ನಷ್ಟ ಸಿಕ್ಕಿಲ್ಲ. ಇದು ಸರ್ಕಾರದ ಇಬ್ಬಗೆ ನೀತಿಯಾಗಿದೆ ಎಂದು ಖಂಡಿಸಿದರು

ರೈತರ ಖಾತೆಗೆ ವಾಪಸ್ ಹಣ ಜಮಾ ಮಾಡಲು ಕೆನರಾ ಬ್ಯಾಂಕಿನ ಜಿಲ್ಲಾ ವ್ಯವಸ್ಥಾಪಕ ಉಮೇಶ್ ಒಪ್ಪಿಗೆ ನೀಡಿದರು. ಸಂಘಟನಾ ಕಾರ್ಯದರ್ಶಿ ಅತ್ತಹಳ್ಳಿ ದೇವರಾಜ್, ಜಿಲ್ಲಾ ಕಾರ್ಯಾಧ್ಯಕ್ಷ ಕಿರಗಸೂರು ಶಂಕರ, ಜಂಟಿ ಕಾರ್ಯದರ್ಶಿ ಪರಶಿವಮೂರ್ತಿ, ಪ್ರಸಾದ್ ನಾಯಕ್, ಪ್ರದೀಪ್, ಅಪ್ಪಣ್ಣ ರಾಜೇಶ್, ಉಮೇಶ್, ನಿಂಗರಾಜು, ರೂಪ ಮುಡುಕನಪುರ, ಕುಮಾರ್, ಬನ್ನೂರ್ ಸೂರಿ ಇನ್ನೂ ಮುಂತಾದವರು ಇದ್ದರು.

ಹೆಚ್.ಡಿ.ಕೋಟೆ ಸುತ್ತಮುತ್ತ ಹುಲಿಗಳ ಹೆಜ್ಜೆ ಪತ್ತೆ

ಆತಂಕದಲ್ಲಿ ಗ್ರಾಮಸ್ಥರು, ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳ ಭೇಟಿ



ಹುಲಿ ಹೆಜ್ಜೆ ಗುರುತು ಪತ್ತೆಯಾದ ಹಿನ್ನೆಲೆಯಲ್ಲಿ ಸಿಬ್ಬಂದಿಗಳೊಡನೆ ಪರಿಶೀಲನೆ ಮಾಡಿದೆವು. ಹುಲಿ ಮತ್ತೆ ಕಾಡಿಗೆ ತೆರಳಿರುವುದು ಖಚಿತವಾಗಿದೆ. ಹುಲಿ ಚಲನವಲನ ಪತ್ತೆ ಹಚ್ಚಲು ತಂಡ ರಚನೆ ಮಾಡಲಾಗಿದ್ದು, ಚಲನವಲನ ಭಾಗಗಳಲ್ಲಿ ಕಾವಲು ವ್ಯವಸ್ಥೆ ಮಾಡಲಾಗಿದೆ ಹಾಗೂ ಆನೆ ಕಾವಲು ಕಾಯುವ ಕೆಲಸವನ್ನು ಸಂಪೂರ್ಣ ಜವಾಬ್ದಾರಿಯುತವಾಗಿ ಮಾಡುತ್ತಿದ್ದೇವೆ. ಮಾಸ್ತಿಗುಡಿ ಪುನರ್ವಸತಿ ಕೇಂದ್ರದಿಂದ, ಅಣ್ಣೂರು ಗುರುಗಳ ಕೆರೆವರೆಗೆ ಸುಮಾರು ಐದು ಕಿಲೋಮೀಟರ್ ರೈಲ್ವೆ ಬ್ಯಾರಿಕೇಡ್ ಕಾಮಗಾರಿ ಪ್ರಾರಂಭಗೊಂಡಿದೆ. -ಸಚಿನ್, ಡಿಆರ್‌ಎಫ್‌ಓ

ಹೆಚ್.ಡಿ.ಕೋಟೆ ಮೇ 22– ತಾಲೂಕಿನ ಎರಡು ಕಡೆ ಹುಲಿ ಹೆಜ್ಜೆ ಗುರುತು ಪತ್ತೆಯಾಗಿದೆ. ನಾಗರಹೊಳೆ ರಾಷ್ಟ್ರೀಯ ಉದ್ಯಾನ ವನದ ವೀರನಹೊಸಹಳ್ಳಿ ಅರಣ್ಯ ವಲಯದ ಅಣ್ಣೂರು ಹೊಸಳ್ಳಿ ಗ್ರಾಮದ ರೈತ ಷಡಕ್ಷರಿ ಅವರ ಜಮೀನಿನಲ್ಲಿ, ಹುಲಿ ಹೆಜ್ಜೆ ಗುರುತು ಪತ್ತೆಯಾಗಿದ್ದು, ಗ್ರಾಮಸ್ಥರು ಗಾಬರಿಗೊಂಡಿದ್ದಾರೆ.

ರೈತ ಷಡಕ್ಷರಿ ಅವರು ಎಂದಿನಂತೆ ಬೆಳಗ್ಗೆ ತಮ್ಮ ಜಮೀನಿಗೆ ತೆರಳಿದ ವೇಳೆ ಹುಲಿ ಹೆಜ್ಜೆ ಗುರುತು ಕಂಡು ಗಾಬರಿಯಿಂದ ಅರಣ್ಯ ಇಲಾಖೆಗೆ ದೂರವಾಣಿ ಕರೆ ಮಾಡಿ ವಿಚಾರ ಮುಟ್ಟಿಸಿದರು. ಸ್ಥಳಕ್ಕೆ ಅರಣ್ಯ ಇಲಾಖೆ ಡಿಆರ್ ಎಫ್‌ಓ ಸಚಿನ್, ಗಾರ್ಡ್ ಕೃಷ್ಣಯ್ಯ, ವಾಚರ್‌ಗಳಾದ ಮಹೇಶ್, ಪಾಪಯ್ಯ, ಗೋವಿಂದ ಅವರುಗಳು ಭೇಟಿ ನೀಡಿ, ಪರಿಶೀಲನೆ ನಡೆಸಿ ಇದು ಹುಲಿ ಹೆಜ್ಜೆ ಎಂದು ಖಚಿತಪಡಿಸಿದರಲ್ಲದೆ, ಹುಲಿ ಹೆಜ್ಜೆ ಸಾಗಿರುವ ಮಾರ್ಗವನ್ನು ಹಿಂಬಾಲಿಸಿದಾಗ ಹುಲಿ ಮತ್ತೆ ಕಾಡಿಗೆ ತೆರಳಿರುವುದು ಗೊತ್ತಾಗಿದೆ ಎಂದು ಗ್ರಾಮಸ್ಥರಿಗೆ ಡಿಆರ್‌ಎಫ್‌ಓ ಸಚಿನ್ ಸ್ಪಷ್ಟಪಡಿಸಿದರು.

ರೈತ ಆನಂದ ಮಾತನಾಡಿ, ಕಳೆದ 10 ದಿನಗಳ ಹಿಂದೆ ಬೆಳ್ಳಂಬೆಳಗ್ಗೆ ಎರಡು ದಿನಗಳ ಕಾಲ ಒಂಟಿಸಲಗ ನಮ್ಮ ಜಮೀನುಗಳಿಗೆ ನುಗ್ಗಿ ತಾವು ಬೆಳೆದಿರುವ ಫಸಲುಗಳನ್ನು ಸಂಪೂರ್ಣ ನಾಶಮಾಡಿತ್ತು. ಆದರೆ ನಮ್ಮ ಪುಣ್ಯ ಗ್ರಾಮದಲ್ಲಿ ಯಾವುದೇ ಅನಾಹುತವಾಗದೆ ಗ್ರಾಮಸ್ಥರು, ಅರಣ್ಯ ಸಿಬ್ಬಂದಿಗಳು ಸೇರಿದಂತೆ ಆನೆಯನ್ನು ಅರಣ್ಯಕ್ಕೆ ಓಡಿಸಿ ನಿಟ್ಟುಸಿರು ಬಿಟ್ಟಿದ್ದೆವು ಎಂದರು.

ಈಗ ಮತ್ತೆ ಹುಲಿ ಹೆಜ್ಜೆ ಗುರುತು ಪತ್ತೆ ಆಗಿರುವುದರಿಂದ, ಜಮೀನುಗಳಿಗೆ ರೈತರು ತೆರಳುವುದಕ್ಕೆ, ಭಯ ಪಡುತ್ತಿದ್ದಾರೆ. ಆದ್ದರಿಂದ ಅರಣ್ಯ ಇಲಾಖೆಯ ಅಧಿಕಾರಿಗಳು ಇತ್ತ ಗಮನಹರಿಸಿ ಪ್ರಾಣಿಗಳ ಹಾವಳಿಯನ್ನು ತಪ್ಪಿಸಲು ಮುಂದಾಗಿ ಎಂದು ತಿಳಿಸಿದರು.



ರೈಲ್ವೆ ಬ್ಯಾರಿಕೇಡ್ ಕಾಮಗಾರಿ ಪ್ರಾರಂಭಗೊಂಡಿರುವುದು.

ಮತ್ತೊಂದು ಪ್ರಕರಣದಲ್ಲಿ ರಾಷ್ಟ್ರೀಯ ಉದ್ಯಾನವನ ಅಂತರಸಂತೆ ವಲಯ ಅರಣ್ಯ ವ್ಯಾಪ್ತಿಯ ಜಮೀನುಗಳಲ್ಲಿ ಮತ್ತೊಂದು ಹುಲಿ ಹೆಜ್ಜೆ ಗುರುತು, ಕಾಣಿಸಿಕೊಂಡಿದೆ. ರೈತ ವೆಂಕಟಸ್ವಾಮಿ ಅರಣ್ಯ ಇಲಾಖೆಯವರಿಗೆ ಮಾಹಿತಿ ನೀಡಿ ದರು. ಈ ವೇಳೆ ಸ್ಥಳಕ್ಕೆ ಭೇಟಿ ನೀಡಿದ ಅರಣ್ಯ ಇಲಾಖೆ ಸಿಬ್ಬಂದಿಗೆ ಅಂತರಸಂತೆ, ಜಿಯಾರ, ಮಚ್ಚರೆ, ನೇರಳೆ ಹೊಸೂರು ಗ್ರಾಮದ ಜಮೀನುಗಳಲ್ಲಿ ಹುಲಿ ಹೆಜ್ಜೆ ಪತ್ತೆಯಾಗಿದೆ. ಬೀಟ್ ಫಾರೆಸ್ಟರ್ ನಾರಾಯಣ್, ವಾಚರ್ ಮಹಮ್ಮದ್ ಅವರು ಇದು ಹುಲಿ ಹೆಜ್ಜೆ ಗುರುತು ಎಂದು ಖಚಿತಪಡಿಸಿದ್ದಾರೆ. ಹೆಚ್.ಡಿ. ಕೋಟೆ ಪ್ರಾದೇಶಿಕ ವಲಯ ಆರ್‌ಎಫ್‌ಓ ಪೂಜಾ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಅಂತರಸಂತೆ, ಜಿಯಾರ, ಮಚ್ಚರೆ, ನೂರಲಕುಪ್ಪೆ ಸೀರನಹುಂಡಿ, ಮಾಚನಾಯಕನಹಳ್ಳಿ, ನೇರಳೆ ಹೊಸೂರು ಈ ಭಾಗದಲ್ಲಿ ಹುಲಿ ಓಡಾಡುತ್ತಿರುವ ಬಗ್ಗೆ ಮಾಹಿತಿ ಸಿಕ್ಕಿತ್ತು. ಆದ್ದರಿಂದ ನಾವು ಮಚ್ಚರೆ, ನೇರಳೆಹೊಸೂರು ಪ್ಲಾಂಟೇಶನ್‌ಗಳಲ್ಲಿ 4 ಕ್ಯಾಮರಾಗಳನ್ನು ಅಳವಡಿಸಿದ್ದೇವೆ. ಆದರೆ ಈ ಕ್ಯಾಮರಾದಲ್ಲಿ ಈ ಹುಲಿ ಚಲನ–ವಲನಗಳು ಕಂಡು ಬಂದಿಲ್ಲ. ಆದ್ದರಿಂದ ಈ ಹುಲಿ ಚಲನ–ವಲನಗಳನ್ನು ಪತ್ತೆ ಹಚ್ಚುವುದಕ್ಕೆ ತಂಡವನ್ನು ರಚನೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ.



ನೇರ II PUC!!

ಹಾಜರಾತಿ ಕೊರತೆಯೇ? ಪ್ರಥಮ ಪಿಯುಸಿ ಪಾಸಾಗಿಲ್ಲವೇ? ಚಿಂತಿಸದಿರಿ. ನಾವು ನಿಮಗೆ ದ್ವಿತೀಯ ಪಿಯುಸಿಗೆ ಪ್ರವೇಶ ನೀಡಿ, ಮುದ್ರಿತ ನೋಟ್ಸ್‌ಗಳೊಂದಿಗೆ ಉತ್ತಮ ಕೋಚಿಂಗ್ ನೀಡಿ ಅದ್ಭುತವಾಗಿ ಪರೀಕ್ಷೆಗೆ ಅಣಿಗೊಳಿಸುತ್ತೇವೆ.

ಜ್ಞಾನ ವರ್ಧಿನಿ ಸೆಂಟರ್
ಮರಿಮಲ್ಲಪ್ಪ ಕಾಲೇಜ್ ಎದುರು, ಮೈಸೂರು.
www.direct2puc.com
98443 55941/ 9482674031

FOR RENT
12500 Sqft., WAREHOUSE
in Kadakola, Mysuru
Contact: 96062 76769

ರತ್ನ ಪ್ಯಾರಾ ಮೆಡಿಕಲ್ ಕಾಲೇಜ್
ರಮಾವಿಲಾಸ್ ರಸ್ತೆ, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಹತ್ತಿರ, ಮೈಸೂರು
ಪ್ರವೇಶ ತೆರೆದಿದೆ
ಡಿಪ್ಲೋಮಾ ಇನ್ ಮೆಡಿಕಲ್ ಲ್ಯಾಬ್ ಟೆಕ್ನಾಲಜಿ (DMLT)
SSLC / PUC Pass / Fail
ಬ್ಯಾಚುಲರ್ಸ್ ಇನ್ ಮೆಡಿಕಲ್ ಲ್ಯಾಬ್ ಟೆಕ್ನಾಲಜಿ (B.Voc)
Mob: 9886654463

ಆಫೀಸ್ ಬಾಯ್ ಬೇಕಾಗಿದ್ದಾರೆ
ವಯೋಮಿತಿ
20 ರಿಂದ 30 ವರ್ಷದೊಳಗೆ
ವಿದ್ಯಾರ್ಹತೆ:
ಎಸ್ ಎಸ್ ಎಲ್ ಸಿ ಪಾಸ್/ಫೇಲ್
ಆಸಕ್ತರು ಸಂಪರ್ಕಿಸಿ
0821-2496520/21

SITE FOR SALE
30 X 40 EAST FACING CORNER SITE
6.5 KM FROM BOGADI SIGNAL
600 MTRS FROM GADIGE MAIN ROAD
95130 02020

FOR ADVERTISEMENT
47 STAR OF MYSORE
Please Call: 0821-2496522 / 23
Email: ad@starofmysore.com
ಮೈಸೂರು ಮಿತ್ರ 45
Please Call: 0821-2496522 / 23
Email: ad@mysurumithra.com

2 BHK HOUSE FOR SALE
Near Srinagar,
North East Corner
FULLY - FURNISHED
Call : 90719 66999

ದಾಸ್‌ತಿ ಪ್ಯಾರಾ ಮೆಡಿಕಲ್ ಕಾಲೇಜು
#ಎಲ್,46/4, ಎಂ.ಜಿ.ಟವರ್ಸ್, 2ನೇ ಮಹಡಿ, (ಜೆ.ಹೆಚ್.ಬಿ. ಕಾಂಪ್ಲೆಕ್ಸ್ ಹಿಂಭಾಗ) 1ನೇ ಹಂತ, ಕುವೆಂಪುನಗರ, ಮೈಸೂರು – 570023, (ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದಿದೆ)
ಈ ಸಂಸ್ಥೆಯಲ್ಲಿ ಪರಿಣಿತ ವೈದ್ಯರು ಮತ್ತು ತಾಂತ್ರಿಕ ತಜ್ಞರಿಂದ ಬೋಧನೆ.
ಎಸ್.ಎಸ್.ಎಲ್.ಸಿ. ಪಾಸಾದವರಿಗೆ
"ಪ್ರವೇಶ ತೆರೆದಿದೆ, ತ್ವರೆ ಮಾಡಿ"
- ಡಿಪ್ಲೋಮಾ–ಇನ್–ಮೆಡಿಕಲ್ ಲ್ಯಾಬೋರೇಟರಿ ಟೆಕ್ನಾಲಜಿ (DMLT) - ಅವಧಿ: 3 ವರ್ಷ (ಸರ್ಕಾರಿ/ಖಾಸಗಿ ಆಸ್ಪತ್ರೆಗಳಲ್ಲಿ ಟೆಕ್ನೀಷಿಯನ್ ಹುದ್ದೆಗೆ ಅವಕಾಶ)
- ಡಿಪ್ಲೋಮಾ –ಇನ್–ಮೆಡಿಕಲ್ ಹೆಲ್ತ್ ಇನ್ಸ್‌ಪೆಕ್ಟರ್ (DMHI) - ಅವಧಿ: 3 ವರ್ಷ (ಸರ್ಕಾರಿ / ನಗರಪಾಲಿಕೆ / ನಗರಸಭೆ / ಪುರಸಭೆಗಳಲ್ಲಿ ಉದ್ಯೋಗಕ್ಕೆ ಅವಕಾಶ)

8904403905 | 9731507047

